ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ನವೆಂಬರ್ 13, 2024

ಸಂಪುಟ : 51 ಸಂಚಿಕೆ : 180 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



# ‘ಹಿರಿಯಣ್ಣ’ನಾಗಲು ಬೇಕು ಕೌಶಲ್ಯ

## ಜಿ.ಎಂ. ವಿವಿ ವಿದ್ಯಾರ್ಥಿ ನಿಲಯ ಉದ್ಘಾಟನೆ ಹಾಗೂ ಮಹಿಳಾ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ

ದಾವಣಗೆರೆ, ನ. 13 – ಭಾರತಕ್ಕೆ ಜಾಗತಿಕ ಹೂಡಿಕೆ ಬರುತ್ತಿದೆ. ನವೋದ್ಯಮಗಳೂ ದೊಡ್ಡ ಸಂಖ್ಯೆಯಲ್ಲಿ ಸ್ಥಾಪನೆಯಾಗುತ್ತಿವೆ. ಜಾಗತಿಕವಾಗಿ ಮುಂಚೂಣಿಗೆ ಬರುವ ಅವಕಾಶವೂ ಇದೆ. ಈ ಹಂತದಲ್ಲಿ ಯುವ ಪೀಳಿಗೆ ಕೌಶಲ್ಯ ಹೊಂದಿದಲ್ಲಿ ಭಾರತ ಜಾಗತಿಕವಾಗಿ ‘ಹಿರಿಯಣ್ಣ’ನಾಗಲಿದೆ ಎಂದು ಕೇಂದ್ರದ ಗ್ರಾಹಕರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ಸಚಿವ ಪ್ರಹ್ಲಾದ್ ಜೋಶಿ ಹೇಳಿದರು.

ಇಲ್ಲಿನ ಶ್ರೀಶೈಲ ಎಜುಕೇಷನ್ ಟ್ರಸ್ಟ್‌ನ ಜಿ.ಎಂ. ವಿಶ್ವವಿದ್ಯಾಲಯದ ವಿದ್ಯಾರ್ಥಿ ನಿಲಯ ಉದ್ಘಾಟನೆ ಹಾಗೂ ಮಹಿಳಾ ನೂತನ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆಯ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶ್ವಯುದ್ಧಕ್ಕೆ ಮುಂಚೆ ಬ್ರಿಟನ್ ಸೂರ್ಯ ಮುಳುಗದ ಸಾಮ್ರಾಜ್ಯ ಎಂದು ಹೆಸರಾಗಿತ್ತು. ವಿಶ್ವಯುದ್ಧದ ನಂತರ ಅಮೆರಿಕ ಹಾಗೂ ಯು.ಎಸ್. ಎಸ್.ಆರ್.ಗಳು ಪ್ರಬಲ ದೇಶಗಳಾದವು. 1991ರಲ್ಲಿ ಯು.ಎಸ್.ಎಸ್.ಆರ್. ಪತನದ ನಂತರ ಅಮೆರಿಕ ಪ್ರಬಲವಾಗಿದೆ. ಈಗ ವಿಶ್ವದ ದೇಶಗಳ ಶ್ರೇಣಿ ಮತ್ತೆ ಬದಲಾಗುತ್ತಿದೆ. ಭಾರತ ಹಿರಿಯಣ್ಣನ ಸ್ಥಾನಕ್ಕೆ ಬರುವ ಅವಕಾಶವಿದೆ ಎಂದು ತಿಳಿಸಿದರು.

2016ರಲ್ಲಿ ಭಾರತದಲ್ಲಿ 450 ನವೋದ್ಯಮಗಳಿದ್ದವು. ಇಂದು ಅವು 1.28 ಲಕ್ಷಕ್ಕೇರಿವೆ. ಈ ಉದ್ಯಮಗಳಿಂದ 1.30 ಕೋಟಿ ಹೊಸ ಉದ್ಯೋಗಗಳು ಸೃಷ್ಟಿಯಾಗಿವೆ. ಭಾರತ ವಿಶ್ವದಲ್ಲೇ ಅತಿ ಹೆಚ್ಚಿನ ಮೊತ್ತವನ್ನು ಮೂಲಭೂತ ಸೌಲಭ್ಯ ವಲಯಕ್ಕೆ ಹೂಡಿಕೆ ಮಾಡುತ್ತಿದೆ. ಮೂಲಭೂತ ಸೌಲಭ್ಯದಲ್ಲಿ ಐದು ವರ್ಷಗಳಲ್ಲಿ 100 ಲಕ್ಷ ಕೋಟಿ ರೂ.ಗಳ ಹೂಡಿಕೆ ಮಾಡಲಿದೆ ಎಂದವರು ಹೇಳಿದರು.

ಭಾರತ ಜಾಗತಿಕವಾಗಿ ಸರಕುಗಳ ಉತ್ಪಾದನಾ ತಾಣ ಹಾಗೂ ಜಾಗತಿಕ ಕಾರ್ಖಾನೆಯಾಗಬೇಕಿದೆ. ಭಾರತದಲ್ಲಿ ಈಗ ಬೆಳವಣಿಗೆಯ ವೇಗವಿದೆ. ಬೆಳವಣಿಗೆಯ ಪ್ರಮಾಣವೂ ಅಗಾಧವಾಗಿದೆ ಎಂದು ಜೋಶಿ ತಿಳಿಸಿದರು.

60 ವರ್ಷದಲ್ಲಿ 70 ವಿಮಾನ ನಿಲ್ದಾಣಗಳಿದ್ದವು ಹಾಗೂ 33 ಸಾವಿರ ಕಿ.ಮೀ.ವರೆಗೆ ರೈಲ್ವೆ ವಿದ್ಯುದೀಕರಣ ನಡೆದಿತ್ತು. ಆದರೆ, ಕಳೆದ 10 (2ನೇ ಪುಟಕ್ಕೆ)

# ಗುತ್ತಿಗೆ ಮೀಸಲಾತಿಗೆ ಹಸಿರು ನಿಶಾನೆ

## ಸರ್ಕಾರಿ ಟೆಂಡರ್‌ಗಳಲ್ಲಿ ಮುಸ್ಲಿಮರಿಗೆ 4% ಮೀಸಲಾತಿಗೆ ಸಿಎಂ ಅಸ್ತು

## ಮೀಸಲಾತಿ ಹೊರತಾದ ಟೆಂಡರ್‌ಗಳಲ್ಲೂ ಅರ್ಹತೆ ಮೇಲೆ ಅವಕಾಶ

ಬೆಂಗಳೂರು, ನ. 12 - ಸರ್ಕಾರದ ಗುತ್ತಿಗೆ ಕಾಮಗಾರಿಗಳಲ್ಲಿ ಅಲ್ಪಸಂಖ್ಯಾತರಿಗೆ ಶೇಕಡ 4ರಷ್ಟು ಮೀಸಲಾತಿ ಕಲ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮೋದನೆ ನೀಡಿದ್ದಾರೆ.



ಮುಖ್ಯಮಂತ್ರಿ ಅವರ ಆದೇಶದ ಮೇರೆಗೆ ಅಕ್ಟೋಬರ್ 19ರಂದು ಸರ್ಕಾರ ಗುತ್ತಿಗೆ ಕಾಮಗಾರಿಗಳಲ್ಲಿ ಅಲ್ಪಸಂಖ್ಯಾತರ ಸಮುದಾಯದ ಪ್ರವರ್ಗ 2ಬಿಗೆ ಶೇಕಡ 4ರಷ್ಟು ಮೀಸಲಾತಿ ಕಲ್ಪಿಸಲು ಕೆಟಿಪಿಪಿ ಕಾಯಿದೆ 1999ರ 6ನೇ ಪ್ರಕರಣಕ್ಕೆ ತಿದ್ದುಪಡಿಗೆ ಸೂಚಿಸಿದ್ದಾರೆ.

ವಿಧಾನಸಭಾ ಉಪ ಚುನಾವಣೆಯ ಹೊಸ್ತಿಲಲ್ಲೇ ಮುಸ್ಲಿಮರಿಗೆ ಟೆಂಡರ್ ಮೀಸಲಾತಿ ಕಲ್ಪಿಸುವ ವಿಷಯ ಮಾಧ್ಯಮಗಳ ಮೂಲಕ ಪ್ರಕಟವಾಗಿದೆ. ಇದು ವಿವಾದಕ್ಕೆ ತಿರುಗುತ್ತಿದ್ದಂತೆ ಎಚ್ಚೆತ್ತುಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಸ್ಲಿಮರಿಗೆ ಟೆಂಡರ್ ಮೀಸಲಾತಿ ಕಲ್ಪಿಸುವ ಪ್ರಸ್ತಾವನೆಯೇ ಇಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಆದರೆ, ಈಗಾಗಲೇ ಮೀಸಲಾತಿಗೆ ಅನುಮೋದನೆ ದೊರೆತಿದ್ದು, ಮುಂದಿನ ದಿನಗಳಲ್ಲಿ ಆದೇಶ ಪ್ರಕಟವಾಗಲಿದೆ ಎನ್ನಲಾಗುತ್ತಿದೆ.

ಟೆಂಡರ್ ಆಹ್ವಾನ ಪ್ರಾಧಿಕಾರವು ಅಧಿಸೂಚಿತ ಇಲಾಖೆಗಳಲ್ಲಿ ನಿಯಮಿಸಿದ ಪ್ರಕ್ರಿಯೆಗಳನ್ನು ಅನುಸರಿಸುವ ಮೂಲಕ ಕೈಗೊಳ್ಳಬೇಕಾದ ಅಗತ್ಯ ನೋಟಿಸ್, ಪತ್ರ ವ್ಯವಹಾರಗಳು ಮತ್ತು ಪ್ರಕಟಣೆಗಳನ್ನು ಹೊರಡಿಸುವಾಗ ನಿರ್ಮಾಣ ಕಾಮಗಾರಿಗಳ ಮೌಲ್ಯ ಒಂದು ಕೋಟಿ ರೂ.ಗಳಿಗೆ ಮೀರದ ಒಟ್ಟು ಕಾಮಗಾರಿ ಸಂಖ್ಯೆಯ ಶೇಕಡ 4ರಷ್ಟನ್ನು ಪ್ರವರ್ಗ 2ಬಿಯಲ್ಲಿ ನಿರ್ದಿಷ್ಟ ಪಡಿಸಿದ ಅಲ್ಪಸಂಖ್ಯಾತರ ಸಮಯದಾಯಕ್ಕೆ ಸೇರಿದ ಗುತ್ತಿಗೆದಾರರಿಗೆ ಮಾತ್ರ ಟೆಂಡರ್ ನೀಡತಕ್ಕದ್ದು ಎಂದು ಸಿದ್ದರಾಮಯ್ಯ ನೀಡಿರುವ ಸೂಚನೆಯಲ್ಲಿ ತಿಳಿಸಲಾಗಿದೆ.

ಅದು ಅಲ್ಲದೆ, ಮೀಸಲಾತಿ ಹೊರತುಪಡಿಸಿ, ಸಾರ್ವಜನಿಕ ಟೆಂಡರ್‌ಗಳಲ್ಲಿಯೂ ಅಲ್ಪಸಂಖ್ಯಾತ ಸಮುದಾಯ ಭಾಗವಹಿಸಿದಲ್ಲಿ, ಅಲ್ಲಿಯೂ ಅರ್ಹತೆ (4ನೇ ಪುಟಕ್ಕೆ)

### ಸಂವಿಧಾನ ಬಾಹಿರ: ಜೋಶಿ

ಧರ್ಮ ಆಧರಿತವಾಗಿ ಮೀಸಲಾತಿ ಕಲ್ಪಿಸುವುದು ಸಂವಿಧಾನ ಬಾಹಿರವಾಗಿದೆ. ಸಂವಿಧಾನದ ಪ್ರಕಾರ ಶಿಕ್ಷಣ, ಉದ್ಯೋಗಗಳಲ್ಲಿ ಧರ್ಮ ಆಧರಿತವಾಗಿ ಮುಸ್ಲಿಮರಿಗೆ ಮೀಸಲಾತಿ ಕಲ್ಪಿಸುವಂತಿಲ್ಲ. ಆದರೆ, ರಾಜ್ಯ ಸರ್ಕಾರ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ ಕಲ್ಪಿಸಲು ಮುಂದಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಟೀಕಿಸಿದರು.

ಈ ಹಿಂದೆ ಪ್ರಧಾನ ಮಂತ್ರಿಯಾಗಿದ್ದ ಮನಮೋಹನ್ ಸಿಂಗ್ ಅವರು ಸಂಪನ್ಮೂಲದ ಮೇಲೆ ಅಲ್ಪಸಂಖ್ಯಾತರಿಗೆ ಮೊದಲ ಅಧಿಕಾರ ಇದೆ ಎಂದು ಹೇಳಿದ್ದರು. ಈಗಿನ ರಾಜ್ಯ ಕಾಂಗ್ರೆಸ್ ಸರ್ಕಾರ ಸಂವಿಧಾನ ಬಾಹಿರವಾಗಿ ಗುತ್ತಿಗೆಯಲ್ಲಿ ಮೀಸಲಾತಿ ಕಲ್ಪಿಸಲು ಮುಂದಾಗಿದೆ ಎಂದು ಆರೋಪಿಸಿದರು.

### ಮೀಸಲಾತಿ ಪ್ರಸ್ತಾವನೆಯೇ ಇಲ್ಲ ಎಂದ ಮುಖ್ಯಮಂತ್ರಿ

ಬೆಂಗಳೂರು, ನ. 12 - ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಮೀಸಲಾತಿ ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಕೆಲವು ಮಾಧ್ಯಮಗಳಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿದ್ದಾರೆಂದು ಅವರ ಕಾರ್ಯಾಲಯದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮೀಸಲಾತಿ ನೀಡಬೇಕೆಂಬ ಬೇಡಿಕೆ ಬಂದಿರುವುದು ನಿಜ, ಆದರೆ, ಈ ಕುರಿತು ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಾಳೆ ಉಪಚುನಾವಣೆ ಜರುಗುತ್ತಿರುವ ಹಿನ್ನೆಲೆಯಲ್ಲಿ ಆಡಳಿತಾರೂಢ ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಆಗುವ ಸಾಧ್ಯತೆ ತಪ್ಪಿಸಲು ಈ ಸ್ಪಷ್ಟನೆ ನೀಡಲಾಗಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಆದರೆ, ಅಲ್ಪಸಂಖ್ಯಾತ ಸಮುದಾಯದ ಜನಪ್ರತಿನಿಧಿಗಳು ನೀಡಿದ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಆರ್ಥಿಕ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ರವಾನೆ ಮಾಡಿ ಕಾನೂನಿನ ರೀತಿ 2ಬಿ ಅಡಿ ಈ ಸಮುದಾಯಕ್ಕೆ ಶೇಕಡ 4ರಷ್ಟು ಮೀಸಲಾತಿ ಕಲ್ಪಿಸುವಂತೆ ಆದೇಶಿಸಿದ್ದಾರೆ.

# ಇ-ಜನ್ಮ ತಂತ್ರಾಂಶ ತರಬೇತಿ

ದಾವಣಗೆರೆ, ನ.12- ಸಾರ್ವಜನಿಕರ ಕೆಲಸವನ್ನು ಮೆಚ್ಚಿಸುವುದಕ್ಕಾಗಿ ಮಾಡದೆ, ಆತ್ಮಸಾಕ್ಷಿಗನುಗುಣವಾಗಿ ಮಾಡಿದಾಗ ಉತ್ತಮ ಕೆಲಸವಾಗಲು ಸಾಧ್ಯ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು.

ಅವರು ಮಂಗಳವಾರದಂದು ಸಾಂಖ್ಯಿಕ ಇಲಾಖೆ ಹಾಗೂ ಅಪರ ಜಿಲ್ಲಾ ಜನನ, ಮರಣ ನೋಂದಣಾಧಿಕಾರಿಗಳ ಕಚೇರಿ, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತದ ತುಂಗಭದ್ರಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಜನನ - ಮರಣ ನೋಂದಣಿ ನಿಯಮಗಳು ಮತ್ತು ಇ-ಜನ್ಮ ತಂತ್ರಾಂಶದ ನಿರ್ವಹಣೆ ಕುರಿತ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿಮಾತನಾಡಿದರು.

ಜನನ, ಮರಣ ದಾಖಲೆಗಳನ್ನು ಪಡೆಯಲು ಬರುವ ಜನರನ್ನು ಅಲೆದಾಡಿಸದೆ ನಿಗದಿತ ಸಮಯದೊಳಗೆ ಜನನ-ಮರಣ ಪ್ರಮಾಣ ಪತ್ರ ವಿತರಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

### ಜನರನ್ನು ಅಲೆಸದೆ ಆತ್ಮಸಾಕ್ಷಿಗನುಗುಣವಾಗಿ ಕರ್ತವ್ಯ ನಿರ್ವಹಿಸಿ ; ನೋಂದಣಾಧಿಕಾರಿಗೆ ಜಿಲ್ಲಾಧಿಕಾರಿಗಳ ಸೂಚನೆ

ಗ್ರಾಮೀಣ ಪ್ರದೇಶದಲ್ಲಿ ನಾಗರಿಕ ನೋಂದಣಿ ಪದ್ಧತಿಯನ್ನು ಬಲಪಡಿಸಲು ಹಾಗೂ ಶೇ.100 ರಷ್ಟು ಜನನ, ಮರಣ ನೋಂದಣಿ ಘಟನೆಗಳನ್ನು ದಾಖಲಿಸಲು ಘಟನೆಗಳು ಘಟಿಸಿದ 30 ದಿನಗಳ ಒಳಗಿನ ಘಟನೆಗಳನ್ನು ನೋಂದಾಯಿಸಲು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳನ್ನು ಜನನ, ಮರಣ ಉಪನೋಂದಣಾಧಿಕಾರಿಗಳನ್ನಾಗಿ ನೇಮಿಸಲಾಗಿದೆ ಎಂದು ತಿಳಿಸಿದರು.

ಸಾರ್ವಜನಿಕರು ತಮ್ಮ ಕುಟುಂಬದಲ್ಲಿ ಸಂಭವಿಸುವ ಜನನ ಮತ್ತು ಮರಣ ಘಟನೆಗಳ (2ನೇ ಪುಟಕ್ಕೆ)

# ನಗರದಲ್ಲಿ ಲೋಕಾ ದಾಳಿ



ದಾವಣಗೆರೆ, ನ.12- ಇಲ್ಲಿನ ಶಕ್ತಿನಗರದ ಮೂರನೇ ಕ್ರಾಸ್‌ನಲ್ಲಿರುವ ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಸಹಾಯಕ ನಿರ್ದೇಶಕ ಕಮಲ್‌ರಾಜ್ ಮನೆಯ ಮೇಲೆ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎಂ. ಎಸ್.ಕೌಲಾಪುರೆ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ.

ಮಂಗಳವಾರ ಬೆಳಿಗ್ಗೆಯೇ ನಡೆದ ಈ ದಾಳಿಯಲ್ಲಿ 1 ಲಕ್ಷ ರೂ. ನಗದು, ಇನ್ನೋವಾ ಕಾರು ಹಾಗೂ ಆಸ್ತಿಯ ದಾಖಲೆ ಪತ್ತೆಯಾಗಿವೆ ಎನ್ನಲಾಗಿದೆ. ಅನುಕಂಪದ ಆಧಾರದ ಮೇರೆಗೆ ದ್ವಿತೀಯ ದರ್ಜೆ ಸಹಾಯಕರಾಗಿ ನೇಮಕಗೊಂಡಿದ್ದ ಕಮಲ್‌ರಾಜ್, (2ನೇ ಪುಟಕ್ಕೆ)

# ಒಂದೇ ದಿನ 1.65 ಕೋ.ರೂ ತೆರಿಗೆ ಸಂಗ್ರಹ: ಇಟ್ನಾಳ್

ದಾವಣಗೆರೆ, ನ.12- ಜಿಲ್ಲೆಯಲ್ಲಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆ ಸಂಗ್ರಹಿಸಲು ಸೋಮವಾರ ಹಮ್ಮಿಕೊಳ್ಳಲಾಗಿದ್ದ ವಿಶೇಷ ಕಾರ್ಯಾಚರಣೆಯಲ್ಲಿ 1.65 ಕೋಟಿ ರೂ. ತೆರಿಗೆ ಸಂಗ್ರಹಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್ ತಿಳಿಸಿದ್ದಾರೆ.

ಜಿಲ್ಲೆಯಲ್ಲಿನ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆ ಸಂಗ್ರಹಕ್ಕೆ ವಿಶೇಷ ಆಂದೋಲನ ಕೈಗೊಳ್ಳಲಾಗಿತ್ತು. ಈ ವೇಳೆ ಜಿಲ್ಲೆಯಲ್ಲಿನ ಎಲ್ಲಾ ಗ್ರಾಮ ಪಂಚಾಯಿತಿಯಲ್ಲಿನ ತೆರಿಗೆಯನ್ನು ಸಂಗ್ರಹಿಸಲಾಗಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ 51,03,993 ರೂ., ದಾವಣಗೆರೆ ತಾಲ್ಲೂಕು 48,89,965 ರೂ., ಹರಿಹರ ತಾಲ್ಲೂಕು 2,28,77,792 ರೂ., ಹೊನ್ನಾಳಿ ತಾಲ್ಲೂಕು 7,84,834 ರೂತ, ಜಗಳೂರು ತಾಲ್ಲೂಕು 5,22,251 ರೂ. ಹಾಗೂ ನ್ಯಾಮತಿ ತಾಲ್ಲೂಕಿನಲ್ಲಿ 19,62,032 ಸೇರಿ ಒಟ್ಟು 1,65,50,871ಗಳ ತೆರಿಗೆ ಸಂಗ್ರಹಿಸಲಾಗಿದೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಾಮನೂರು ರಸ್ತೆ, ಎಸ್.ಎಸ್. ಲೇಔಟ್ ‘ಎ’ ಬ್ಲಾಕ್, ಕುವೆಂಪು ನಗರ, ಎಸ್.ಎಸ್. ಮಹಲ್, ಮಾವಿನತೋಪ ಆಸ್ಪತ್ರೆ ಹಾಗೂ ಸುತ್ತಮುತ್ತಲಿನಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.




## ಎಸ್.ಎಸ್. ಕೇರ್ ಟ್ರಸ್ಟ್

ನಮ್ಮ ನಡೆ ಆರೋಗ್ಯದೆಡೆ

ವಿಶ್ವ ಮಧುಮೇಹ (ಸಕ್ಕರೆ ಖಾಯಿಲೆ) ದಿನಾಚರಣೆ 14 ನವೆಂಬರ್ 2024 ಪ್ರಯುಕ್ತ
ಜ.ಜ.ಮು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬಾಪೂಜಿ ಆಸ್ಪತ್ರೆ ಹಾಗೂ
ಎಸ್.ಎಸ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಎಸ್.ಎಸ್.ಹೈ-ಟೆಕ್ ಆಸ್ಪತ್ರೆ
ಇವರುಗಳ ಸಂಯುಕ್ತಾಶ್ರಯದಲ್ಲಿ

ಮಧುಮೇಹ ಮತ್ತು ಸ್ವಾಸ್ಥ್ಯ ಮೇಳ
ಸಕ್ಕರೆ ಖಾಯಿಲೆಯ ತಪಾಸಣೆಯ ಶಿಬಿರ

ದಿನಾಂಕ: 14-11-2024 ರಿಂದ 20-11-2024 ರವರೆಗೆ
ಸಮಯ: ಬೆಳಗ್ಗೆ 10.00 ರಿಂದ ಮಧ್ಯಾಹ್ನ 4.00 ಗಂಟೆಯವರೆಗೆ
ಸ್ಥಳ: ಬಾಪೂಜಿ ಆಸ್ಪತ್ರೆಯ ಹೊರರೋಗಿ ವಿಭಾಗ ಹಾಗೂ ಎಸ್.ಎಸ್ ಹೈ-ಟೆಕ್ ಆಸ್ಪತ್ರೆಯ ಆಡಳಿತ ವಿಭಾಗ (ಮೆಡಿಕಲ್ ಸ್ಟೋರ್ ಎದುರಿಗೆ)

ಸಕ್ಕರೆ ಖಾಯಿಲೆಯಿಂದ ಬಳಲುತ್ತಿರುವ ಸಾರ್ವಜನಿಕರು
ಈ ಮೇಳದ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ

ಈ ಶಿಬಿರದಲ್ಲಿ ಲಭ್ಯವಿರುವ
ಉಚಿತ ಪರೀಕ್ಷೆಗಳು ಮತ್ತು ಸೇವೆಗಳು

ರಕ್ತ ಪರೀಕ್ಷೆಗಳು: ಆರ್‌ಬಿಎಸ್-RBS/ ಪಿಪಿಬಿಎಸ್-PPBS/
ಹೆಚ್‌ಬಿಎ1ಸಿ-(HbA1C) Blood sugar and Urea creatinine

- ಇಸಿಜಿ (ECG)
- ಬಿಪಿ (BP)
- ಫಿಜಿಶಿಯನ್, ನರರೋಗ ಮತ್ತು ಕಿಡ್ನಿರೋಗ ವೈದ್ಯರೊಡನೆ ಸಮಾಲೋಚನೆ
- **ಕಣ್ಣಿನ ನರ ತಪಾಸಣೆ, ಅವಶ್ಯವಿದ್ದಲ್ಲಿ ಲೇಸರ್ ಚಿಕಿತ್ಸೆ**
- ಆಹಾರ ತಜ್ಞರಿಂದ ಸಮಾಲೋಚನೆ
- ಮಧುಮೇಹ ಚಿಕಿತ್ಸೆ ಕುರಿತು ಸಮಾಲೋಚನೆ
- ನಿರಂತರ ಗ್ಲೂಕೋಸ್ ಮಾನಿಟರಿಂಗ್ ಪ್ರದರ್ಶನ
- ಮಧುಮೇಹ ಕುರಿತು ಶಿಕ್ಷಣ ಹಾಗೂ ಆಹಾರ ಪ್ರದರ್ಶನ
- ಮಧುಮೇಹ ರೋಗಿಗಳಲ್ಲಿ ಪಾದದ ಆರೈಕೆ ಮತ್ತು ಪಾದರಕ್ಷೆಗಳ ಪ್ರದರ್ಶನ
- ಇನ್ಸುಲಿನ್ ಪೆನ್ ಬಳಕೆಯ ಬಗ್ಗೆ ತಿಳುವಳಿಕೆ



## ಎರಡನೇ ವರ್ಷದ ಪುಣ್ಯಸ್ಮರಣೆ



**ಡಾ. ಕಿರುವಾಡಿ ಚಂದ್ರಶೇಖರ್**

ಮುಖ್ಯಸ್ಥರು, ಮೆಡಿಸಿನ್ ವಿಭಾಗ,
ಜಜಮು ವೈದ್ಯಕೀಯ ಮಹಾವಿದ್ಯಾಲಯ, ದಾವಣಗೆರೆ.
ನಿಧನ : 13-11-2021

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಧರ್ಮಪತ್ನಿ : ಶ್ರೀಮತಿ ಕಿರುವಾಡಿ ಸಿ. ಅನ್ನಪೂರ್ಣ
ಮತ್ತು ಮಕ್ಕಳು ಹಾಗೂ ಕಿರುವಾಡಿ ವಂಶಸ್ಥರು, ದಾವಣಗೆರೆ.



## 17ನೇ ವರ್ಷದ ಪುಣ್ಯಸ್ಮರಣೆ



**ದಿ|| ನಲ್ಲೂರು ಮೋಹನ್ ಎನ್.ಶೇಟ್**
(ರೇವಣ್‌ಕರ್)

ಜನನ : 15.10.1952 ಮರಣ : 22.11.2007

ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಕಲ್ಪನೆಯೊಂದಿಗೆ ಕಾಯಕವೇ ಕೈಲಾಸವೆಂಬ ತತ್ವದೊಂದಿಗೆ ನಮ್ಮ ಮನೆ-ಮನಗಳಲ್ಲಿ ದೀಪ ಮೂಡಿಸಿ, ಶಿಸ್ತು-ಸಂಸ್ಕೃತಿ ಕಲಿಸಿದ್ದೀರಿ. ನಮಗೆ ನೀಡಿದ ಮಮಕಾರ, ಪ್ರೀತಿ-ವಾತ್ಸಲ್ಯಕ್ಕಾಗಿ ಸದಾ ಚಿರಋಣಿ.


ನೀವು ನಮ್ಮನ್ನಗಲಿ ಇಂದಿಗೆ ಹದಿನೇಳು ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ

ಧರ್ಮಪತ್ನಿ : ವಸಂತಿ ಮೋಹನ್ ಶೇಟ್
ಪುತ್ರ, ಸೊಸೆ, ಪುತ್ರಿ- ಅಳಿಯ, ಮೊಮ್ಮಕ್ಕಳು
ಸಹೋದರ-ಸಹೋದರಿಯರು, ನಲ್ಲೂರು ಕುಟುಂಬದವರು

ಸಿಬ್ಬಂದಿ ವರ್ಗ : ನಲ್ಲೂರು ಗಣೇಶ ಜ್ಯೂಯಲರ್ಸ್
ಮಂಡಿಪೇಟೆ, ದಾವಣಗೆರೆ.


# ತುಳಸಿ ಹಬ್ಬಕ್ಕೆ ಸಾಧಾರಣ ವ್ಯಾಪಾರ

## ನಗರದಲ್ಲಿ ಶ್ರದ್ಧಾ ಭಕ್ತಿಯ ತುಳಸಿ ವಿವಾಹ ಸಂಭ್ರಮ



### ಸಂಭ್ರಮದ ತುಳಸಿ ಪೂಜೆ..!

ನಗರದ ಕೆಲವು ಮನೆಗಳಲ್ಲಿ ಮಂಗಳವಾರವೇ ತುಳಸಿ ವಿವಾಹ ಸಂಭ್ರಮ ಶ್ರದ್ಧಾ ಭಕ್ತಿಯಿಂದ ನಡೆಯಿತು. ಮಹಿಳೆಯರು ರಂಗೋಲಿ, ಹೂವು, ಮಾವಿನ ಎಲೆಗಳಿಂದ ಹಾಗೂ ದೀಪಗಳಿಂದ ತುಳಸಿ ಕಟ್ಟೆಯನ್ನು ಅಲಂಕರಿಸಿ ಭಕ್ತಿಯಿಂದ ತುಳಸಿಯನ್ನು ಪೂಜಿಸಿದರು.

ದಾವಣಗೆರೆ, ನ.12- ಕಾರ್ತಿಕ ಮಾಸದ ಶುಕ್ಲ ಪಕ್ಷದ ದ್ವಾದಶಿಯಂದು ಆಚರಿಸುವ ತುಳಸಿ ವಿವಾಹವನ್ನು ಜಿಲ್ಲೆಯಲ್ಲಿನ ಕೆಲವರು ಮಂಗಳವಾರವೇ ಶ್ರದ್ಧಾ ಭಕ್ತಿಯಿಂದ ಸಂಭ್ರಮಿಸಿದರೆ, ಇನ್ನೂ ಕೆಲವರು ಬುಧವಾರ ಆಚರಿಸಲಿದ್ದಾರೆ.

ಈ ಬಾರಿ ಹಬ್ಬದ ಮಾರುಕಟ್ಟೆ ಹೈಸ್ಕೂಲ್ ಮೈದಾನದಲ್ಲಿ ನಡೆದಿದ್ದರಿಂದ ಸಾಧಾರಣ ವ್ಯಾಪಾರ ವಹಿವಾಟು ನಡೆಯಿತು. ಕಳೆದ ದಸರಾ ಮತ್ತು ದೀಪಾವಳಿ ಹಬ್ಬದಲ್ಲಿ ಹೂವು ಮತ್ತು ಹಣ್ಣುಗಳ ಮೇಲಿದ್ದ ಬೆಲೆ ಏರಿಕೆ ಬಿಸಿ, ಈ ಹಬ್ಬದಲ್ಲಿ ತಣ್ಣಗಾಗಿದೆ.

ಭರ್ಜರಿ ವ್ಯಾಪಾರ ನಡೆಸಿ ಹಬ್ಬವನ್ನು ಸಂಭ್ರಮಿಸುವ ಕನಸು ಹೊತ್ತಿದ್ದ ವ್ಯಾಪಾರಸ್ಥರಿಗೆ ಮಾರುಕಟ್ಟೆ ಸ್ಥಳಾಂತರದ ಬರೆ ಬಿದ್ದಿದ್ದು, ಹೂವು, ಹಣ್ಣು, ಕಾಯಿ ಹಾಗೂ ಇತರೆ ಮಾರಾಟಗಾರರ ಮುಖದಲ್ಲಿ ಸಂತಸದ ಕಳೆ ಕುಗ್ಗಿತ್ತು.

ಇತ್ತ ಹಬ್ಬದ ವ್ಯಾಪಾರಕ್ಕಾಗಿ ಹೂವಿನ ಮಾರುಕಟ್ಟೆಗೆ ಧಾವಿಸಿದ ನಗರ ವಾಸಿಗಳು, ಹಬ್ಬದ ಮಾರುಕಟ್ಟೆ ಸ್ಥಳಾಂತರ ಗೊಂಡಿರುವುದನ್ನು ತಿಳಿದು, ಹೈಸ್ಕೂಲ್ (2ನೇ ಪುಟಕ್ಕೆ)

### ಸ್ಥಳಾಂತರದ ಅವಾಂತರ..!

ಪ್ರವಾಸಿ ಮಂದಿರ ರಸ್ತೆ ಹಾಗೂ ಆರ್.ಹೆಚ್. ಛತ್ರದ ಮುಂಭಾಗ ಪ್ರತಿ ವರ್ಷದಂತೆ ಈ ವರ್ಷವೂ ಪಾದಚಾರಿ ರಸ್ತೆಯಲ್ಲಿ ವರ್ತಕರು ವ್ಯಾಪಾರಕ್ಕಿಟ್ಟಿದ್ದ ವಸ್ತುಗಳನ್ನು ಪಾಲಿಕೆಯವರು ರಾತ್ರೋರಾತ್ರಿ ಜೆಸಿಬಿಯಿಂದ ತೆರವು ಗೊಳಿಸಿರುವುದರಿಂದ ವ್ಯಾಪಾರಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಬಾಳೆಕಂಬ, ಕಬ್ಬು ಮತ್ತು ಹೂವು ಸೇರಿದಂತೆ ಇತರೆ ವಸ್ತುಗಳು ತೆರವು ವೇಳೆ ಹಾನಿಗೆ ತುತ್ತಾಗಿದ್ದರಿಂದ ಹಳ್ಳಿಗಳಿಂದ ಬಂದಂತಹ ವ್ಯಾಪಾರಿಗಳು ತೊಂದರೆ ಅನುಭವಿಸಿದರು. ‘ರಾತ್ರಿ ಮಲ್ಗೋಕೆ ಬಿಟ್ಟಿಲ್ಲ ಸರ್, ಬಡವರ ಹೊಟ್ಟೆ ಮೇಲೆ (2ನೇ ಪುಟಕ್ಕೆ)

# ಹರಿಹರ ಪ್ರಮುಖ ವೃತ್ತಗಳಲ್ಲಿ ಸುಗಮ ಸಂಚಾರಕ್ಕೆ ಆದ್ಯತೆ : ಐಜಿಪಿ ರಮೇಶ್



**ಹರಿಹರ**

ಹರಿಹರ, ನ.12- ನಗರದ ಪ್ರಮುಖ ವೃತ್ತಗಳಲ್ಲಿ ಸುಗಮ ಸಂಚಾರ ವ್ಯವಸ್ಥೆಗೆ ಸಂಬಂಧಿಸಿದಂತೆ, ಸಿಗ್ನಲ್ ಲೈಟ್, ಸಿ.ಸಿ ಕ್ಯಾಮರಾ ಅಳವಡಿಕೆ ಸೇರಿದಂತೆ ಇತರೆ ಸೌಲಭ್ಯಗಳನ್ನು ಒದಗಿಸುವುದಾಗಿ ಡಿಐಜಿ ಹಾಗೂ ಪ್ರಭಾರ ಐಜಿಪಿಯೂ ಆಗಿರುವ ಬಿ. ರಮೇಶ್ ಹೇಳಿದರು.

ಇಲ್ಲಿನ ವೃತ್ತ ನಿರೀಕ್ಷಕರ ಕಚೇರಿಗೆ ಅವರು ಆಗಮಿಸಿದ ಸಂದರ್ಭದಲ್ಲಿ ಪೊಲೀಸ್ ಗೌರವ ಸ್ವೀಕರಿಸಿ, ನಂತರ ಪತ್ರಕರ್ತರೊಂದಿಗೆ ಮಾತನಾಡಿದರು.

ನಗರದಲ್ಲಿ ದಿನದಿಂದ ದಿನಕ್ಕೆ ಜನಸಂಖ್ಯೆ ಹೆಚ್ಚಾದಷ್ಟು ಸಂಚಾರ ಸಮಸ್ಯೆಗಳು ಸರ್ವೇ ಸಾಮಾನ್ಯ. ಸಂಚಾರ ನಿಯಂತ್ರಣದ ಜೊತೆಗೆ ನೊಂದವರಿಗೆ ನ್ಯಾಯವನ್ನು ಒದಗಿಸುವುದಕ್ಕಾಗಿ ಪೊಲೀಸ್ ಅಧಿಕಾರಿಗಳ ತಂಡವು ಬಹಳಷ್ಟು ಮುತುವರ್ಜಿಯಿಂದ ಕೆಲಸವನ್ನು ಮಾಡಲು ಮುಂದಾಗಿರುತ್ತದೆ. ಇಲ್ಲಿನ ಅನೇಕ ಸಮಸ್ಯೆಗಳನ್ನು ಆದಷ್ಟು ಬೇಗ ಇತ್ಯರ್ಥ ಪಡಿಸಲು ಅಧಿಕಾರಿಗಳೊಂದಿಗೆ ಮಾತನಾಡುವುದಾಗಿ ಹೇಳಿದರು.

ಠಾಣೆಗೆ ಬಂದವರಿಗೆ ನ್ಯಾಯವನ್ನು ಒದಗಿಸುವುದು ಪೊಲೀಸ್ ಇಲಾಖೆಯ ಕರ್ತವ್ಯ ವಾಗಿದೆ. ಅದು ಬಿಟ್ಟು ರಾಜಿ ಸಂಧಾನ ಮಾಡುವುದಕ್ಕಲ್ಲ ಎಂದು ಅವರು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ನಗರದಲ್ಲಿನ ಹಲವಾರು ಸಮಸ್ಯೆಗಳ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಾಜೆಕ್ಟ್ ರಿಪೋರ್ಟ್ ಸಿದ್ಧತೆ ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಮತ್ತು ಸಿಗ್ನಲ್ ಲೈಟ್ ಮತ್ತು ಸಿ.ಸಿ. ಕ್ಯಾಮರಾ ಅಳವಡಿಕೆ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆಗೆ ಮಾತನಾಡಿದ್ದು, ಅವರು ಶೀಘ್ರದಲ್ಲೇ ಮಾಡಿಸುವುದಾಗಿ ಭರವಸೆಯನ್ನು ನೀಡಿದ್ದಾರೆ ಎಂದರು.

ಹರಪನಹಳ್ಳಿ, ಶಿವಮೊಗ್ಗ ರಸ್ತೆಯಲ್ಲಿರುವ ಶಾಲಾ-ಕಾಲೇಜುಗಳಿಗೆ ಓಡಾಡುವ ವಿದ್ಯಾರ್ಥಿಗಳಿಗೆ ತೊಂದರೆ ಆಗುವುದನ್ನು ತಪ್ಪಿಸಲು. ಶಾಲಾ ಸಮಯದಲ್ಲಿ ಬೃಹತ್ ಗಾತ್ರದ ವಾಹನ ಓಡಾಟ ನಿಷೇಧ ಮಾಡಲಾಗಿದೆ ಎಂದು ಎಸ್ಪಿ ಹೇಳಿದರು.

ಈ ಸಂದರ್ಭದಲ್ಲಿ ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ಜಿ.ಎಸ್. ಬಸವರಾಜ್, ಸಿಪಿಐ ಸುರೇಶ್ ಸರಗಿ, ಪಿಎಸ್ಐಗಳಾದ ಮಂಜುನಾಥ್ ಕುಪೇಲೂರು, ಪ್ರಭು ಕೆಳಗಿನ ಮನೆ, ಶ್ರೀಪತಿ ಗಿನ್ನಿ, ವಿಜಯಕುಮಾರ್, ಚಿದಾನಂದ, ಮಹಾದೇವಪ್ಪ, ಎ.ಎಸ್.ಐ. ಮನಸೂರು ಆಹ್ಮದ್, ಸಿಬ್ಬಂದಿಗಳಾದ ಲಿಂಗರಾಜ್, ಸತೀಶ್, ಶಾಂತಕುಮಾರ್, ಪ್ರವೀಣ್, ಪ್ರಸನ್ನಕಾಂತ್, ರಮೇಶ್, ಹನುಮಂತ, ಗಂಗಾಧರ್, ಗೋಪನಾಳ ಹನುಮಂತ್, ಬಸವರಾಜ್, ಕಾಳಮ್ಮ ಇತರರು ಹಾಜರಿದ್ದರು.

## 'ಹಿರಿಯಣ್ಣ'ನಾಗಲು ಬೇಕು ಕೌಶಲ್ಯ

**(1ನೇ ಪುಟದಿಂದ)** ವರ್ಷಗಳಲ್ಲಿ 75 ಹೊಸ ವಿಮಾನ ನಿಲ್ದಾಣಗಳು ನಿರ್ಮಾಣವಾಗಿವೆ ಹಾಗೂ ಹೊಸದಾಗಿ 40 ಸಾವಿರ ಕಿ.ಮೀ.ವರೆಗೆ ರೈಲ್ವೆ ವಿದ್ಯುದೀಕರಣ ನಡೆದಿದೆ ಎಂದವರು ಬೆಳವಣಿಗೆಯ ವೇಗವನ್ನು ವಿವರಿಸಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ಹಳ್ಳಿಗರಿರಲಿ, ನಗರವಾಸಿಗಳೇ ಇರಲಿ ಎಲ್ಲರಿಗೂ ಇಂದು ಅಕ್ಷರಜ್ಞಾನದ ಅಗತ್ಯವಿದೆ. ಶಿಕ್ಷಣದಲ್ಲಿ ಯಾವುದೇ ತಾರತಮ್ಯವಿಲ್ಲ. ಯಾವುದೇ ಸರ್ಕಾರ ಶಿಕ್ಷಣಕ್ಕೆ ತಕ್ಕ ಉದ್ಯೋಗ ಸೃಷ್ಟಿಸಬೇಕು ಎಂದು ಆಶಿಸಿದರು.

ಭಾರತದ ವಿದ್ಯಾರ್ಥಿಗಳು ಗುಣ ಮಟ್ಟದ ಶಿಕ್ಷಣಕ್ಕೆ ವಿದೇಶಗಳಿಗೆ ತೆರಳುತ್ತಿದ್ದಾರೆ. ಭಾರತದಲ್ಲೇ ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ವ್ಯವಸ್ಥೆ ಮಾಡಿದಲ್ಲಿ, ವಿದ್ಯಾರ್ಥಿಗಳು ಬೇರೆ ದೇಶಕ್ಕೆ ಹೋಗುವುದು ನಿಲ್ಲಲಿದೆ. ಬೇರೆ ದೇಶಗಳ ವಿದ್ಯಾರ್ಥಿಗಳೇ ಇಲ್ಲಿಗೆ ಬರುತ್ತಾರೆ ಎಂದರು.

ಪರಿಷತ್ ಸದಸ್ಯ ಎನ್. ರವಿಕುಮಾರ್ ಮಾತನಾಡಿ, ನೀರಾವರಿ ಹೆಚ್ಚಿರುವ ಮಂಡ್ಯ ಜಿಲ್ಲೆಯಲ್ಲಿ ರೈತ ಆತ್ಮಹತ್ಯೆ ಹೆಚ್ಚಿವೆ. ಬರದ ನಾಡಾಗಿದ್ದ ಕೋಲಾರದಲ್ಲಿ ಟೊಮ್ಯಾಟೋ, ಮಾವಿನ ಬೆಳೆಗಾರರು ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಹೊಸ ರೀತಿಯ ಆಲೋಚನೆ ಹಾಗೂ ಪ್ರಯತ್ನಗಳಿಂದಾಗಿ ಕೋಲಾರದ ರೈತರು ಪ್ರಗತಿ ಕಂಡಿದ್ದಾರೆ. ಇದೇ ರೀತಿಯ ಆಲೋಚನೆಗಳು ಮೂಡಿದಲ್ಲಿ ಬೆಳವಣಿಗೆ ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾಜಿ ಕೇಂದ್ರ ಸಚಿವ ಜಿ.ಎಂ.ಸಿದ್ದೇಶ್ವರ, 143 ವಿದ್ಯಾರ್ಥಿಗಳಿಂದ ಆರಂಭವಾದ ಜಿಎಂಐಟಿ ಸಂಸ್ಥೆಯಲ್ಲಿ ಇಂದು 8 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿದ್ಯಾರ್ಥಿನಿ ಯರಿಗೆ ಪ್ರತ್ಯೇಕ ಹಾಸ್ಟೆಲ್ ನಿರ್ಮಿಸಲಾಗುತ್ತಿದೆ. ಇಲ್ಲಿ ಓದಿದವರಿಗೆ ಉದ್ಯೋಗದ ಭರವಸೆ ಸಿಕ್ಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪರಿಷತ್ ಸದಸ್ಯ ಕೆ.ಎಸ್.ನವೀನ್, ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕ ಎಸ್.ವಿ.ರಾಮಚಂದ್ರ, ಹೆಚ್.ಪಿ.ರಾಜೇಶ್, ಮುಖಂಡರಾದ ಗಾಯತ್ರಿ ಸಿದ್ದೇಶ್ವರ, ಹೆಚ್.ಎಸ್. ಶಿವಕುಮಾರ್, ವೀರೇಶ್ ಹನಗವಾಡಿ, ಟ್ರಸ್ಟಿಗಳಾದ ಜಿ.ಎಂ.ಪ್ರಸನ್ನಕುಮಾರ್, ಜಿ.ಎಂ. ಲಿಂಗರಾಜು, ಜಿ.ಎಸ್. ಅನಿತ್‌ಕುಮಾರ್, ಕುಲಪತಿ ಡಾ. ಎಸ್. ಆರ್. ಶಂಕಪಾಲ್ ಮತ್ತಿತರರು ಉಪಸ್ಥಿತರಿದ್ದರು.

## ಖಾತ್ರಿ ; ವೈಯಕ್ತಿಕ ಕಾಮಗಾರಿಗಳಿಗೆ ಹೆಚ್ಚು ಆದ್ಯತೆ : ಸಿಇಓ ಹಿಟ್ನಾಳ್



ಜಗಳೂರು, ನ.14- ತಾಲ್ಲೂಕಿನ 22 ಗ್ರಾಮಪಂಚಾಯಿತಿಗಳಲ್ಲಿ ಉದ್ಯೋಗ ಖಾತ್ರಿ ಯೋಜನೆ ಅಡಿ 1376 ವೈಯಕ್ತಿಕ ಹಾಗೂ 813 ಸಮುದಾಯ ಕಾಮಗಾರಿಗಳು ಒಳಗೊಂಡಂತೆ ಒಟ್ಟು 2189 ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಜಿ.ಪಂ.ಸಿಇಓ ಸುರೇಶ್ ಹಿಟ್ನಾಳ್ ಮಾಹಿತಿ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಉದ್ಯೋಗ ಖಾತ್ರಿ ಯೋಜನೆ ಹಾಗೂ ಗ್ರಾ.ಪಂ ಗಳಲ್ಲಿನ ಮೂಲಸೌಕರ್ಯ ಸಮಸ್ಯೆಗಳನ್ನು ಕುರಿತು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಮನರೇಗಾದಡಿ ವಾರ್ಷಿಕವಾಗಿ 35ಲಕ್ಷ ಮಾನವ ದಿನಗಳ ಗುರಿ ಇದ್ದು, ಅದರಲ್ಲಿ 15.21 ಲಕ್ಷ ಮಾನವ ದಿನಗಳು ಪೂರ್ಣಗೊಂಡಿವೆ. ಜಗಳೂರು ತಾಲ್ಲೂಕಿನಲ್ಲಿ 9.36 ಲಕ್ಷ ಮಾನವ ದಿನಗಳಲ್ಲಿ 5.16ಲಕ್ಷ ಪೂರ್ಣಗೊಂಡಿವೆ. ಹಿಂಗಾರು ಮಳೆ ಹೆಚ್ಚು ಬಂದ ಹಿನ್ನೆಲೆಯಲ್ಲಿ ಕೆರೆಕಟ್ಟೆಗಳು ಭರ್ತಿಯಾಗಿದ್ದು. ವೈಯಕ್ತಿಕ ಕಾಮಗಾರಿಗಳಿಗೆ ಹೆಚ್ಚು ಆದ್ಯತೆ ನೀಡಲಾಗುವುದು. ಕೂಲಿಕಾರ್ಮಿಕರ ಗುಳೇ ತಪ್ಪಿಸಲಾಗುವುದು ಎಂದು ಹೇಳಿದರು.

ಜಿಲ್ಲೆಯಲ್ಲಿ ತೆರಿಗೆ ವಸೂಲಾತಿ ಅಭಿಯಾನ ನಡೆಸಲಾಗುತ್ತಿದ್ದು. ಒಂದೇ ದಿನಕ್ಕೆ 1.67ಕೋಟಿ ತೆರಿಗೆ ಹಣ ವಸೂಲಾಗಿದೆ ತಾಲ್ಲೂಕಿನಲ್ಲಿ 1.5 ಲಕ್ಷ ಹಣ ಸಂಗ್ರಹವಾಗಿದೆ ಎಂದರು.

**ಜಗಳೂರು ಗೊಲ್ಲರಹಟ್ಟಿಗೆ ಭೇಟಿ:** ಗ್ರಾಮಸ್ಥರ ಮನವಿಗೆ ಸ್ಪಂದಿಸಿ ಜಗಳೂರು ಗೊಲ್ಲರಹಟ್ಟಿಗೆ ಭೇಟಿ ನೀಡಿ ಜೆಜೆಎಂ ನಳ ಕಾಮಗಾರಿ ವೀಕ್ಷಿಸಿ ಪೈಪ್ ಲೈನ್ ಅಳವಡಿಕೆ ವೇಳೆ ಅಗೆದಿರುವ ಸಿಸಿ ರಸ್ತೆ ದುರಸ್ತಿಗೆ ಗುತ್ತಿಗೆದಾರಗೆ ಸೂಚನೆ ನೀಡಿದರು. ನಂತರ ಭೋವಿಕಾಲೋನಿಯಲ್ಲಿ 15 ನೇ ಹಣಕಾಸು ಯೋಜನೆಯಡಿ ಸಮರ್ಪಕ ಚರಂಡಿ ನಿರ್ಮಾಣಕ್ಕೆ ಕ್ರಿಯಾಯೋಜನೆ ತಯಾರಿಸಲು ಹಾಗೂ ಕೂಡಲೇ ಚರಂಡಿ ಸ್ವಚ್ಛತೆಗೊಳಿಸಲು ಪಿಡಿಓ ಗೆ ಸೂಚಿಸಿದರು.

ಈ ಸಂದರ್ಭದಲ್ಲಿ ತಾ.ಪಂ.ಇಓ ಕೆಂಚಪ್ಪ, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಎಇಇ ಸಾಧಿಕ್ ಉಲ್ಲಾ, ಪಿಡಿಓ ಕೊಟ್ರೇಶ್ ಗ್ರಾಮಸ್ಥರು ಇದ್ದರು.

## ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘಕ್ಕೆ ಆಯ್ಕೆ

ದಾವಣಗೆರೆ, ನ. 12- ನಗರದ ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಹಂಗಾಮಿ ಅಧ್ಯಕ್ಷರಾಗಿ ಪಿ.ವಿ. ಪೆದ್ದಿಪತಿ ಅವರನ್ನು ಇತ್ತೀಚಿಗೆ ಸಂಘದ ಆಡಳಿತ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸದಸ್ಯರ ಒಮ್ಮತದಿಂದ ಆಯ್ಕೆ ಮಾಡಲಾಗಿದೆ ಎಂದು ವ್ಯವಸ್ಥಾಪಕ ಎಸ್.ಉಮೇಶ್ ನಾಯ್ಕ ತಿಳಿಸಿದ್ದಾರೆ.

# ಜಮೀರ್ ಸಂಪುಟದಿಂದ ಕೈ ಬಿಡಲು ಒಕ್ಕಲಿಗರ ಸಂಘ ಆಗ್ರಹ

ಬೆಂಗಳೂರು, ನ. 12 - ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು 'ಕರಿಯ ಕುಮಾರಸ್ವಾಮಿ' ಎನ್ನುವ ಮೂಲಕ ನಿಂದನಾತ್ಮಕ ಭಾಷೆ ಬಳಸಿರುವ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಸಂಪುಟದಿಂದ ಕೈಬಿಡುವಂತೆ ರಾಜ್ಯ ಒಕ್ಕಲಿಗರ ಸಂಘ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದೆ.

ಜಮೀರ್ ಅವರು ಬಳಸಿರುವ ಭಾಷೆಯಿಂದ ಕುಮಾರಸ್ವಾಮಿ ಅವರಿಗೆ ಮಾತ್ರ ಅಪಮಾನ ಮಾಡಿಲ್ಲ, ಇಡೀ ಒಕ್ಕಲಿಗ ಜನಾಂಗಕ್ಕೇ ಮಾಡಿರುವ ಅವಹೇಳನವಾಗಿದೆ, ನಾಡಿನ ಜನರಿಗೂ ಅಪಮಾನ ಮಾಡಿದಂತೆ. ಎರಡು ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದವರ ಬಗ್ಗೆ ಆಡಿರುವ ಮಾತುಗಳು ಸಚಿವರಾದವರಿಗೆ ಶೋಭೆ ತರುವುದಿಲ್ಲ.

ಸಭ್ಯತೆಯ ಎಲ್ಲೆ ಮೀರಿ ಮಾತನಾಡುವ ಈ ವ್ಯಕ್ತಿ, ಸಚಿವ ಸ್ಥಾನದಲ್ಲಿ ಮುಂದುವರೆಯಬಾರದು. ಒಕ್ಕಲಿಗ ಜನಾಂಗದ ಸರ್ವೋಚ್ಚ ನಾಯಕ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಕುಟುಂಬದ ಬಗ್ಗೆಯೂ ಜಮೀರ್ ಲಘುವಾಗಿ ಮಾತನಾಡಿರುವುದನ್ನು ಸಂಘ ತೀವ್ರವಾಗಿ ಖಂಡಿಸಿದೆ.

ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಳೆದ ಭಾನುವಾರದಂದು ಜಮೀರ್ ಅವರು, ಚುನಾವಣಾ ಪ್ರಚಾರ ಭಾಷಣ ಮಾಡುವಾಗ ಉರ್ದು ಭಾಷೆಯಲ್ಲಿ ಕುಮಾರಸ್ವಾಮಿ ಅವರ ಬಣ್ಣದ ಬಗ್ಗೆ ಮಾತನಾಡಿ ಜನಾಂಗೀಯ ನಿಂದನೆ ಮಾಡಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ, ಇದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದಿದೆ.

ಜಮೀರ್ ಅಹಮದ್ ಅವರು ತಮ್ಮ ಹೇಳಿಕೆಯನ್ನು ಮಾಧ್ಯಮಗಳ ಮುಂದೆ ಮತ್ತೆ ಸಮರ್ಥನೆ ಮಾಡಿಕೊಂಡಿರುವುದನ್ನು ನೋಡಿದರೆ ಬಾಯಿ ತಪ್ಪಿನಿಂದ ಆಡಿರುವ ಮಾತಲ್ಲ, ಉದ್ದೇಶ ಪೂರ್ವಕವಾಗಿ ಆಡಿರುವುದಾಗಿದೆ ಎಂದೆನಿಸುತ್ತದೆ.

ನಮ್ಮ ಜನಾಂಗದ ನಾಯಕರಾದ ಕುಮಾರಸ್ವಾಮಿ ಹಾಗೂ ದೇವೇಗೌಡ ಅವರ ಕುಟುಂಬದ ಬಗ್ಗೆ ಅವಮಾನಕರ ಭಾಷೆ ಬಳಸಿರುವುದಕ್ಕೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು ಹಾಗೂ ಇನ್ನು ಮುಂದೆ ಮಾತನಾಡುವಾಗ ಸೌಜನ್ಯದ ಎಲ್ಲೆ ಮೀರದಂತೆ ಎಚ್ಚರ ವಹಿಸಬೇಕು ಎಂದು ಒತ್ತಾಯಿಸಿದೆ.

ಜಮೀರ್ ಅವರು ಕೂಡಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಸಮಸ್ತ ಒಕ್ಕಲಿಗ ಜನಾಂಗದ ಪರವಾಗಿ ಒತ್ತಾಯಿಸುವುದಾಗಿ ಸಂಘ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

# ಕೊಟ್ಟೂರು: ಒನಕೆ ಓಬವ್ವ ಜಯಂತ್ಯೋತ್ಸವ



ಕೊಟ್ಟೂರು, ನ.12- ವೀರ ವನಿತೆ ಒನಕೆ ಓಬವ್ವನ ಜಯಂತ್ಯೋತ್ಸವನ್ನು ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರರಂದು ಆಚರಿಸಲಾಯಿತು.

ಪ.ಪಂ. ಪದಾಧಿಕಾರಿಗಳಾದ ಮುಖ್ಯ ಅಧಿಕಾರಿ ಎ. ನಸ್ರುಲ್ಲಾ ಹಾಗೂ ಅಧ್ಯಕ್ಷೆ ರೇಖಾ ರಮೇಶ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಕೀಲರಾದ ಸಿ. ಚೌಡಪ್ಪ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಸಿದ್ದಯ್ಯ,ಸ್ಥಾಯಿ ಸಮಿತಿ ಅಧ್ಯಕ್ಷರಾದ ಅಂಜಿನಮ್ಮ ವಿರುಪಾಕ್ಷಪ್ಪ, ಸದಸ್ಯ ಕೆಂಗರಾಜ್ ಹಾಗೂ ಕಿರಿಯ ಆರೋಗ್ಯ ನಿರೀಕ್ಷಕರಾದ ಅನುಷಾ, ವಿಜಯ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ನ. 12- ಈ ವರ್ಷದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಎಸ್ಎಸ್‌ಪಿ ಪೋರ್ಟಲ್‌ನಲ್ಲಿ ಡಿ.ಬಿ.ಟಿ ಮುಖಾಂತರ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ssp.postmatric.karnataka.gov.in ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ (22261789) ಹಾಗೂ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ (08192-262002) ಸಂಪರ್ಕಿಸ ಬಹುದು.

## ಎಸ್ಸಿ, ಎಸ್ಟಿ ರೈತರಿಂದ ಅರ್ಜಿ ಆಹ್ವಾನ

ಚನ್ನಗಿರಿ, ನ.12- ತಾಲ್ಲೂಕಿನ ತೋಟಗಾರಿಕೆ ಇಲಾಖೆಯಿಂದ 2025-26ನೇ ಸಾಲಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯೋಜನೆಯಡಿ ಹೊಸದಾಗಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.


ಆಸಕ್ತ ರೈತರು ಇದೇ ದಿನಾಂಕ 30 ರೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಚನ್ನಗಿರಿ ಕಚೇರಿಗೆ ಅಥವಾ ಆಯಾ ಗ್ರಾಮ ಪಂಚಾಯತಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಹೋಬಳಿ ಮಟ್ಟದ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದು.

## ಲೋಕಾ ದಾಳಿ

**(1ನೇ ಪುಟದಿಂದ)** ಹಲವು ಬಡ್ತಿ ಪಡೆದು ಸಹಾಯಕ ನಿರ್ದೇಶಕರಾಗಿದ್ದರು. ಚಿತ್ರದುರ್ಗ ಹಾಗೂ ದಾವಣಗೆರೆಯಲ್ಲಿ ಮನೆ, ಮೂರು ನಿವೇಶನ ಸೇರಿ ಇತರೆ ಆಸ್ತಿಯನ್ನು ಲೋಕಾಯುಕ್ತ ಅಧಿಕಾರಿಗಳು ಪತ್ತೆ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇನ್‌ಸ್ಪೆಕ್ಟರ್ ಮಧುಸೂದನ್ ಹಾಗೂ ಪ್ರಭು ಸೇರಿ ಹತ್ತಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ.

### ನಿವೃತ್ತ ಪ್ರಾಧ್ಯಾಪಕರಾದ ಮೀನಾಕ್ಷಮ್ಮ ನಿಧನ



ದಾವಣಗೆರೆ ಸಿಟಿ ವಾಸಿ ದಿವಂಗತ ತೆಲಿಗಿ ಗುರುಸಿದ್ದಪ್ಪನವರ (ಎಲಿಗಾರ್) ಮಗಳಾದ ಶ್ರೀಮತಿ ಮೀನಾಕ್ಷಮ್ಮ (ನಿವೃತ್ತ ಪ್ರಾಧ್ಯಾಪಕರು, ಸೇಂಟ್ ಪಾಲ್ ಕಾನ್ವೆಂಟ್ ಸ್ಕೂಲ್) ಇವರು ದಿನಾಂಕ 12.11.2024ರ ಮಂಗಳವಾರ ಸಂಜೆ 5 ಗಂಟೆಗೆ ನಿಧನರಾದರು. ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.11.2024ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ತುಳಸಿ ಹಬ್ಬಕ್ಕೆ ಸಾಧಾರಣ ವ್ಯಾಪಾರ

**(1ನೇ ಪುಟದಿಂದ)** ಮೈದಾನಕ್ಕೆ ತೆರಳಿದ ದೃಶ್ಯ ಕಂಡು ಬಂದಿತು.

ಬೆಳಗ್ಗೆಯಿಂದ ವ್ಯಾಪಾರವಿಲ್ಲದೆ ಸ್ತಬ್ಧವಿದ್ದ ಮಾರುಕಟ್ಟೆಯಲ್ಲಿ ವರ್ತಕರು, ಗ್ರಾಹಕರಿಗಾಗಿ ಕಾಯುವ ಪ್ರಸಂಗ ಎದುರಾಗಿತ್ತು. ತದನಂತರ ಮಧ್ಯಾಹ್ನದ ವೇಳೆಗೆ ಸಾಧಾರಣ ವ್ಯಾಪಾರ ಜರುಗಿತು.

ಚೆಂಡು ಹೂವು, ಸೇವಂತಿಗೆ ಹೂವು, ಬೆಟ್ಟದ ನೆಲ್ಲಿಕಾಯಿ, ತುಳಸಿ ಮಾಲೆ, ಬಿಲ್ವ ಪತ್ರೆ, ಹುಣಸೆ ಕಾಯಿ, ಬಾಳೆ ಕಂಬ, ಕಬ್ಬು, ಮಾವಿನ ತೋರಣಗಳು ಹಾಗೂ ಪೂಜಾ ಸಾಮಗ್ರಿಗಳು ಮಾರುಕಟ್ಟೆಯಲ್ಲಿದ್ದವು.

ಚೆಂಡು ಹೂವು ಮಾರಿಗೆ 50-60 ರೂ.ಗಳು, ಬಾಳೆ ಕಂಬ ಸಣ್ಣದು 20 ರೂ.ಗಳು ಹಾಗೂ ದೊಡ್ಡದು 30ರೂ.ಗಳಿಗೆ ಒಂದು ಜೊತೆಯಂತೆ ಮಾರುಕಟ್ಟೆಯಲ್ಲಿ ಮಾರಲ್ಪಟ್ಟವು.

### ಸ್ಥಳಾಂತರದ ಅವಾಂತರ..!

**(1ನೇ ಪುಟದಿಂದ) ಹೊಡಿದಿದ್ದಾರೆ. ಈ ಮೈದಾನದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ನೆರಳೂ ಇಲ್ಲ. ಅಲ್ಲಿಯಾಗಿದ್ರೆ ಕಟ್ಟಡಗಳ ನೆರಳಿಗಾದರೂ ಕೂತು ವ್ಯಾಪಾರ ಮಾಡುತ್ತಿದ್ದೇವು' ಎಂದು ಮಹಿಳಾ ವ್ಯಾಪಾರಿಯೊಬ್ಬರು ತಮ್ಮ ಅಳಲು ತೋಡಿಕೊಂಡರು. 'ಅಲ್ಲಿಯಾಗಿದ್ರೆ ವ್ಯಾಪಾರ ಆಗ್ತಿತ್ತು. ಇಲ್ಲಿ ಏನು ಇಲ್ಲ. ಬಿಸಿಲಲ್ಲಿ ಸುಮ್ನೆ ಕೂತಿವಿ. ಮಾರಾಟಕ್ಕೆ ಕೊಂಡು ತಂದ ವಸ್ತುಗಳನ್ನು ಪಾಲಿಕೆಯವರು ಹಾನಿಗೊಳಿಸಿದ್ದಾರೆ ಎಂದು ವ್ಯಾಪಾರಿಯೊಬ್ಬರು ದೂರಿದರು.**

### ಟ್ರಾಫಿಕ್ ಕಿರಿ-ಕಿರಿಗೆ ಬ್ರೇಕ್..!

**ಪ್ರತಿ ವರ್ಷ ಯಾವುದೇ ಹಬ್ಬದ ಮಾರುಕಟ್ಟೆಯಾಗಲಿ ಪ್ರವಾಸಿ ಮಂದಿರ ರಸ್ತೆ ಹಾಗೂ ಆರ್.ಹೆಚ್ ಛತ್ರದ ಮುಂಭಾಗ ಸೇರಿದಂತೆ ವಿವಿಧೆಡೆ ಮಾರುಕಟ್ಟೆ ನಡೆಯುತ್ತಿತ್ತು.**

**ಪ್ರತಿ ಬಾರಿ ಹಬ್ಬದ ಮಾರುಕಟ್ಟೆ ನಡೆದಾಗಲೂ ವಾಹನಗಳ ಸಂಚಾರದಲ್ಲಿ ಟ್ರಾಫಿಕ್ ಸಮಸ್ಯೆ ಎದುರಾಗುತ್ತಿತ್ತು. ಈ ಕಾರಣಕ್ಕಾಗಿ ವಾಹನ ಸಂಚಾರಕ್ಕೆ ಉಂಟಾಗುತ್ತಿದ್ದ ಕಿರಿ-ಕಿರಿಗೆ ಬ್ರೇಕ್ ಹಾಕಲು, ಪಾಲಿಕೆಯು ಹಬ್ಬದ ಮಾರುಕಟ್ಟೆಯನ್ನು ಹೈಸ್ಕೂಲ್ ಮೈದಾನಕ್ಕೆ ಸ್ಥಳಾಂತರಿಸಿದೆ.**

## 26ಕ್ಕೆ ಜಿಲ್ಲಾ ರೆಡ್ ಕ್ರಾಸ್ ಸಂಸ್ಥೆ ಸಭೆ

ದಾವಣಗೆರೆ, ನ.12- ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಘಟಕದ ಸಂಸ್ಥೆಯ 2021-22, 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಇದೇ ದಿನಾಂಕ 26ರಂದು ಬೆಳಿಗ್ಗೆ 11ಕ್ಕೆ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿದೆ.

# ಇ-ಜನ್ಮ ತಂತ್ರಾಂಶ ತರಬೇತಿ

**(1ನೇ ಪುಟದಿಂದ)** ಮಾಹಿತಿಯನ್ನು ಜಿಲ್ಲಾ ಹಾಗೂ ಗ್ರಾಮೀಣ ಜನನ, ಮರಣ ಉಪನೋಂದಣಾಧಿಕಾರಿಗಳು ಹಾಗೂ ನೋಂದಣಾಧಿಕಾರಿಗಳಿಗೆ ನೀಡಿ ಕಡ್ಡಾಯವಾಗಿ ಇ-ಜನ್ಮ ತಂತ್ರಾಶದಲ್ಲಿ ಜನನ, ಮರಣ ಪ್ರಮಾಣ ಪತ್ರಗಳನ್ನು ಪಡೆಯುವಂತೆ ತಿಳಿಸಿದರು.

ಜನನ, ಮರಣ ಘಟನೆ ನಡೆದ 1 ರಿಂದ 21 ದಿನಗಳೊಳಗೆ ಪ್ರಮಾಣ ಪತ್ರ ಲಭ್ಯವಿದ್ದು, ಘಟನೆ ಮನೆಯಲ್ಲಾಗಿದ್ದರೆ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿಗಳು, ನಗರ ಪ್ರದೇಶವಾಗಿದ್ದರೆ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ ಆರೋಗ್ಯ ನಿರೀಕ್ಷಕರು ಮತ್ತು ಸರ್ಕಾರಿ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರದಲ್ಲಾದರೆ ಸರ್ಕಾರಿ ಆಸ್ಪತ್ರೆ, ಆರೋಗ್ಯ ಕೇಂದ್ರಗಳ ನಿವಾಸಿ ವೈದ್ಯಾಧಿಕಾರಿಗಳ ಹತ್ತಿರ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ್ ಮಾತನಾಡಿ, ಜನನ-ಮರಣಗಳ ಅಂಕಿ ಅಂಶಗಳ ಮೂಲಕ ನೋಂದಣಿ ಆದರೆ ಕೊನೆಯ ಒಂದು ವರ್ಷದಲ್ಲಿ ಎಷ್ಟು ಮರಣ ಹಾಗೂ ಜನನ ಆಗಿದೆ ಎಂಬ ಅಂಕಿ-ಅಂಶದ ನಿಖರ ಮಾಹಿತಿ ದೊರೆಯುತ್ತದೆ. ಹಾಗೆಯೇ ಮುಂದಿನ ದಿನಗಳಲ್ಲಿ ಜನನ-ಮರಣ ಪ್ರಮಾಣ ಪತ್ರ ವಿತರಿಸಲು ವಿವಿಧ ಇಲಾಖೆಗಳನ್ನು ಸೇರ್ಪಡೆ ಮಾಡುವ ಗುರಿ ಇದೆ ಎಂದು ತಿಳಿಸಿದರು.

ಜನಸಂಖ್ಯೆ ಅನುಗುಣವಾಗಿ ಸರ್ಕಾರದ ಅನುದಾನ ಪಡೆಯಬೇಕಾದರೆ ನೊಂದಣಿಯ ಅಂಕಿ-ಅಂಶಗಳು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಜನನ-ಮರಣ ದಾಖಲೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಜನರನ್ನು ಅಲೆದಾಡಿಸದೆ, ಸೂಕ್ತ ಸಮಯದೊಳಗೆ ಜನನ-ಮರಣ ಪ್ರಮಾಣ ಪತ್ರ ನೀಡಿದರೆ ಸಾರ್ವಜನಿಕರು ನ್ಯಾಯಾಲಯಕ್ಕೆ ಬರುವ ಸಂಖ್ಯೆ ಕಡಿಮೆಯಾಗುತ್ತದೆ. ಸಕಾಲದಲ್ಲಿ ದಾಖಲೆ ನೀಡುವುದರಿಂದ ಜನರ ಸಮಯ, ಆರ್ಥಿಕ ಸ್ಥಿತಿ ಹಾಗೂ ಜನರ ವೈಯಕ್ತಿಕ ಜೀವನಕ್ಕೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಬೆಂಗಳೂರು ಜನನ - ಮರಣ ವಿಭಾಗದ ಜಂಟಿ ನಿರ್ದೇಶಕ ಎಸ್.ಕೆ.ಚಿಕ್ಕಬೀರಯ್ಯ, ಜಿಲ್ಲಾ ಸಾಂಖ್ಯಿಕ ಅಧಿಕಾರಿ ಕೆ. ನೀಲಾ ಹಾಗೂ ಇತರೆ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ನಿರ್ಮಲ ತುಂಗಭದ್ರಾ ಅಭಿಯಾನ- ಕರ್ನಾಟಕ ಬೃಹತ್ ಪಾದಯಾತ್ರೆಗೆ ಅದ್ಧೂರಿ ಸ್ವಾಗತ



ಹೊನ್ನಾಳಿ, ನ. 12- ರಾಷ್ಟ್ರೀಯ ಸ್ವಾಭಿಮಾನ ಆಂದೋಲನ, ನವದೆಹಲಿ ಪರ್ಯಾವರಣ ಟ್ರಸ್ಟ್ ಸಹಯೋಗದೊಂದಿಗೆ ಶೃಂಗೇರಿಯಿಂದ ಆರಂಭವಾಗಿರುವ ನಿರ್ಮಲ ತುಂಗಭದ್ರಾ ಅಭಿಯಾನ-ಕರ್ನಾಟಕ ಬೃಹತ್ ಪಾದಯಾತ್ರೆ ತಂಡ ಇಲ್ಲಿಗೆ ಸಮೀಪದ ತುಂಗಭದ್ರಾ ನದಿ ತಟದ ಮೇಲಿರುವ ಚೀಲೂರು ಹಾಗೂ ಗೋವಿನಕೋವಿ ಗ್ರಾಮಗಳಿಗೆ ಮಂಗಳವಾರ ಆಗಮಿಸಿದಾಗ ಪಾದಯಾತ್ರಿಗಳಿಗೆ ಅದ್ದೂರಿ ಸ್ವಾಗತ ಕೋರಲಾಯಿತು.

ನಂತರ ಗೋವಿನಕೋವಿ ಗ್ರಾಮದಲ್ಲಿ ಪಾದಯಾತ್ರೆಯ ಪ್ರಾಮುಖ್ಯತೆ ಹಾಗೂ ಜಲಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಹಿರೇಕಲ್ಮಠದ ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮನು ಕುಲದ ಅನಾರೋಗ್ಯಕ್ಕೆ ಕಲುಷಿತ ನೀರು ಕಾರಣವಾಗಿರುವುದರಿಂದ ಎಲ್ಲಾ ನದಿಗಳ ಶುದ್ಧೀಕರಣವಾಗುವುದು ಅವಶ್ಯಕ ಹಾಗೂ ಅನಿವಾರ್ಯ ಎಂದು ಹೇಳಿದರು.

ಮನುಷ್ಯನ ಅತೀ ಚಟುವಟಿಕೆಗಳಿಂದ ಮಣ್ಣು ಮತ್ತು ನೀರು ಮಲಿನಗೊಳ್ಳುತ್ತಿದೆ. ತಗ್ಗಿದ್ದ ಕಡೆ ನೀರು ಹರಿಯುವುದು ನೀರಿನ ಗುಣ, ಎಲ್ಲಾ ತ್ಯಾಜ್ಯಗಳು ಹಳ್ಳದಿಂದ ನದಿ ಪಾತ್ರಗಳನ್ನು ಸೇರಿ ನದಿ ನೀರು ಕಲುಷಿತಗೊಂಡು ಜನ, ಜಾನುವಾರುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು ಎಲ್ಲರೂ ಎಚ್ಚೆತ್ತುಕೊಂಡು ನದಿಗಳ ಶುದ್ಧೀಕರಣಕ್ಕೆ ಕೈಜೋಡಿಸಬೇಕು ಎಂದರು.

ನಿರ್ಮಲ ತುಂಗಭದ್ರಾ ಅಭಿಯಾನದ ಮೂಲಕ ತುಂಗಭದ್ರಾ ನದಿ ಮೂಲದ ಶೃಂಗೇರಿಯಿಂದ ನದಿ ಹರಿಯುವ ಉದ್ದಕ್ಕೂ ಪಾದಯಾತ್ರೆ ಹಮ್ಮಿಕೊಂಡು ಪ್ರಮುಖ ಸ್ಥಳಗಳಲ್ಲಿ ಜಲ ಜಾಗೃತಿ ಕಾರ್ಯಕ್ರಮದೊಂದಿಗೆ ಗಂಗಾವತಿ ತಾಲ್ಲೂಕಿನ ಕಿಷ್ಕಿಂಧೆಯವರೆಗೆ ಸುಮಾರು 430 ಕಿ.ಮೀ.ಗಳವರೆಗೆ ಪಾದಯಾತ್ರೆ ಹಮ್ಮಿಕೊಂಡು ಜಲದ ಬಗ್ಗೆ ಜನಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ನಿರ್ಮಲ ತುಂಗಭದ್ರಾ ಅಭಿಯಾನದ ಸಂಚಾಲಕ ನಿವೃತ್ತ ಪ್ರೊ. ಕುಮಾರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಅಭಿಯಾನದ ಪ್ರಮುಖರಾದ ಗಿರೀಶ್ ಪಾಟೀಲ್, ನಿವೃತ್ತ ಪ್ರಾಂಶುಪಾಲ ಡಾ.ನಾಗಭೂಷಣ್, ನಿರ್ದೇಶಕ ದತ್ತ, ವೈದ್ಯನಾಥ್, ನಿವೃತ್ತ ಉಪನ್ಯಾಸಕ ಡಾ.ಎಸ್.ವರದರಾಜ್, ಮಹೇಶ್, ಸ್ಥಳೀಯ ಮುಖಂಡರಾದ ಎ.ಬಿ. ಹನುಮಂತಪ್ಪ, ಎಂ.ಆರ್.ಮಹೇಶ್, ಕೆ.ವಿ.ಚನ್ನಪ್ಪ, ಎಚ್.ಎಂ. ಅರುಣ್‌ಕುಮಾರ್, ವಾಸಪ್ಪ, ಶ್ರೀನಿವಾಸ್, ಕತ್ತಿಗೆ ನಾಗರಾಜ್, ಪ್ರವೀಣ್‌ಪಾಟೀಲ್, ರಮೇಶ್, ಗ್ರಾ.ಪಂ ಜನಪ್ರತಿನಿಧಿಗಳು ಹಾಗೂ ಇತರರು ಇದ್ದರು.

ಡಾ.ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಶಿವಮೊಗ್ಗ ನಗರದ ಓಪನ್‌ಮೈಂಡ್ ಶಾಲಾ ಮಕ್ಕಳು ಶೃಂಗೇರಿಯಿಂದ ಪಾದಯಾತ್ರೆಯಲ್ಲಿ ಭಾಗವಹಿಸಿದ್ದು, ತಂಗುವ ಸ್ಥಳದಲ್ಲಿ ವಿವಿಧ ನಾಟಕಗಳು ಸೇರಿದಂತೆ, ಕಲಾಪ್ರಕಾರಗಳನ್ನು ಅನಾವರಣಗೊಳಿಸುವ ಪ್ರದರ್ಶನ ಮಾಡುತ್ತಿರುವುದು ಶ್ಲಾಘನೀಯವಾಗಿದೆ.

**ವಿದ್ಯಾರ್ಥಿಗಳು ತಾವು ಸೇವಿಸಿದ ಚಾಕಲೇಟ್, ಕುರೆಕುರೆ ಸೇರಿದಂತೆ ಇತರೆ ಆಹಾರ ಪದಾರ್ಥಗಳ ಮೇಲ್ಕವಚಗಳಾದ ಪ್ಲಾಸ್ಟಿಕ್‌ಗಳನ್ನು ಬೇಕಾಬಿಟ್ಟಿಯಾಗಿ ಬಿಸಾಡುವುದನ್ನು ನಿಲ್ಲಿಸಬೇಕು ಎಂದು ಹೇಳಿದರು. ಮುಂದಿನ ಪೀಳಿಗೆ ಆರೋಗ್ಯವಂತರಾಗಿ ಬದುಕಲು, ನೀರಿನ ಆಕರಗಳು ಶುದ್ಧವಾಗಿರಬೇಕು.**

**- ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಹಿರೇಕಲ್ಮಠ, ಹೊನ್ನಾಳಿ.**

## ಹಿಂದಕ್ಕೆ ಚಲಿಸಿದ ಬುಲೆರೋ: ಓರ್ವನ ಸಾವು

ಹೊನ್ನಾಳಿ, ನ.12- ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದ ತುಂಗಭದ್ರಾ ನದಿ ಹತ್ತಿರ ರಸ್ತೆಯಲ್ಲಿ ಕೆಎ 17 2399 ನಂಬರ್‌ನ ಬುಲೆರೋ ರಸ್ತೆ ಹಿಂಬದಿಗೆ ಚಲಿಸಿದ್ದರಿಂದ ರಸ್ತೆಯಲ್ಲಿ ನಡೆದು ಬರುತ್ತಿದ್ದ ವ್ಯಕ್ತಿ ಒಬ್ಬನಿಗೆ ಡಿಕ್ಕಿ ಸಂಭವಿಸಿ ಮೃತಪಟ್ಟ ಘಟನೆ ಇಂದು ಸಂಜೆ ನಡೆದಿದೆ.

ಮೃತನು ರಾಂಪುರದ ರಾಕೇಶ್ (30) ಬಿನ್ ಹಾಲೇಶಪ್ಪ ಎಂಬುವನಾಗಿದ್ದು, ನದಿ ಪಾತ್ರದ ಬಳಿ ಇದ್ದ ಇತರೆ ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿ ಹೊನ್ನಾಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಾಹನ ಚಾಲಕ ಭರತ್ ಎಂಬುವವನಾಗಿದ್ದು, ಸಾಕಮ್ಮ ಭರತ್, ಅಶ್ರಫುಲ್ಲಾ ಎಂಬುವವರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ರಸ್ತೆ ಅಪಘಾತದಲ್ಲಿ ಪತ್ರಿಕಾ ವಿತರಕ ಸಾವು



ಅಮೀನಗಡ (ಬಾಗಲಕೋಟೆ), ನ.12- ಪಟ್ಟಣದ ಸೂಳೇಬಾವಿ ಕ್ರಾಸ್ ಹತ್ತಿರ ಇಂದು ಬೆಳಿಗ್ಗೆ 5.20 ಕ್ಕೆ ನಡೆದ ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಕೊನೆಯುಸಿರೆಳೆದಿದ್ದಾನೆ.

ಪಟ್ಟಣ ಸಮೀಪದ ಗುಡೂರ (ಎಸ್.ಸಿ) ಗ್ರಾಮದ ಸಂಗಮೇಶ ಮಠಪತಿ (25) ಪ್ರತಿ ದಿನ ಗುಡೂರ ಎಸ್.ಸಿ. ಗ್ರಾಮದಿಂದ ಬೆಳಗಿನ ಜಾವ ಅಮೀನಗಢಕ್ಕೆ ಬಂದು ಪತ್ರಿಕೆ ಬಂಡಲ್‌ಗಳನ್ನು ಸೂಳೇಬಾವಿ, ಐಹೊಳೆ, ಕೇಲೂರು ಸೇರಿದಂತೆ ವಿವಿಧ ಗ್ರಾಮಗಳಿಗೆ ಹಂಚುತ್ತಿದ್ದನು.

ಎಂದಿನಂತೆ ಇಂದು ಬೆಳಗಿನ ಜಾವ ಸೂಳೇಭಾವಿ ಕ್ರಾಸ್ ಹತ್ತಿರ ಪೇಪರ್ ಬಂಡಲ್‌ಗಳನ್ನು ತೆಗೆದುಕೊಂಡು ಹೊರಡುವ ಸಮಯದಲ್ಲಿ ಖಾಸಗಿ ಬಸ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಸ್ಥಳದಲ್ಲಿಯೇ ಬೈಕ್ ಸವಾರ ಸಂಗಮೇಶ ಮಠಪತಿ ಮೃತಪಟ್ಟಿದ್ದಾನೆ.

**ಸಂತಾಪ :** ಪತ್ರಿಕಾ ವಿತರಕರು ಸಂಘಟಿತರಾಗದಿದ್ದರೆ ಮುಂದಿನ ದಿನಗಳಲ್ಲಿ ಸಾಕಷ್ಟು ತೊಂದರೆಗೀಡಾಗ ಬೇಕಾಗುತ್ತದೆ, ಈ ಸಾವಿಗೆ ಹೊಣೆ ಯಾರು? ಎಂದು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಕೆ. ಶಂಭುಲಿಂಗ ಆತಂಕ ವ್ಯಕ್ತಪಡಿಸುತ್ತಾ, ಸಂತಾಪ ಸೂಚಿಸಿದ್ದಾರೆ.

ಒಕ್ಕೂಟದ ಉಪಾಧ್ಯಕ್ಷ ಪ್ರಶಾಂತ್, ಪ್ರಧಾನ ಕಾರ್ಯದರ್ಶಿ ಸಂಗಮ್ ಸುರೇಶ್, ಸಂಘಟನಾ ಕಾರ್ಯದರ್ಶಿ ನಾದೂರು ವಾಸುದೇವ ಹಾಗೂ ದಾವಣಗೆರೆ ಕೃಷ್ಣಮೂರ್ತಿ, ತುಮಕೂರು ಜಿಲ್ಲಾ ದಿನಪತ್ರಿಕೆ ಹಂಚಿಕೆದಾರರ ಸಂಘದ ಗೌರವಾಧ್ಯಕ್ಷ ಟಿ.ಎಲ್. ನರಸಿಂಹಯ್ಯ, ಅಧ್ಯಕ್ಷ ಚೆಲುವರಾಜು (ರಘು), ಉಪಾಧ್ಯಕ್ಷ ರಂಗ ಮುತ್ತಯ್ಯ, ಖಜಾಂಚಿ ಯೋಗೀಶ್ ಹೆಚ್. ಪಿ. ಹಾಗೂ ಇತರರು ಸಂಗಮೇಶ ಮಠಪತಿ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.



## ದಾವಣಗೆರೆ ಹಳೆ ಊರಿನ ಗೌರಿ ಆರತಿಯ ಸ್ವಾರಸ್ಯಗಳು...

# 'ಗೌರಿ ಹಾಡಲಾರೆನೇ, ಗೌರಿ ಪಾಡಲಾರೆನೇ...'

**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

ಹಾಡಲಾರೆ, ಪಾಡಲಾರೆ ಎನ್ನುತ್ತಲೇ ಮನೆಯಿಂದ ಹೊರಟು ದೇವಸ್ಥಾನಕ್ಕೆ ಹೋಗಿ ವಾಪಸ್ ಮನೆಗೆ ಬರುವವರೆಗೂ ಬಿಡುವಿಲ್ಲದೇ ಹಾಡುತ್ತಲೇ ಇರುವುದು ಗೌರಿ ಆರತಿಯ ಸ್ವಾರಸ್ಯ !!. ಆಶ್ವಯುಜ ಶುದ್ಧ ಹುಣ್ಣಿಮೆ ಅಂದರೆ ಶೀಗೆ ಹುಣ್ಣಿಮೆ ಹಾಗೂ ಕಾರ್ತಿಕ ಶುದ್ಧ ಹುಣ್ಣಿಮೆ ಈ ಎರಡು ಹುಣ್ಣಿಮೆಗಳ ಪೂರ್ವದಲ್ಲಿ ಒಂಭತ್ತು ದಿನಗಳ ಕಾಲ ದೇವಸ್ಥಾನದಲ್ಲಿ ಗೌರಿಯನ್ನು ಕೂರಿಸಿ, ಮನೆಯಿಂದ ಆರತಿ ತೆಗೆದುಕೊಂಡು ಹೋಗಿ ಗೌರಿಗೆ ಬೆಳಗಿ ಬರುವುದು ಬಯಲು ಸೀಮೆಯಲ್ಲಿನ ಹಳೇ ಸಂಪ್ರದಾಯ.

ದಾವಣಗೆರೆಯ ಚೌಕಿಪೇಟೆ ಶ್ರೀ ಬಕ್ಕೇಶ್ವರ ಸ್ವಾಮಿ ದೇವಸ್ಥಾನದಲ್ಲೂ ಗೌರಿಯನ್ನು ಕೂರಿಸುತ್ತಿದ್ದರು. ದಶಕಗಳ ಹಿಂದೆ ಎರಡೂ ಹುಣ್ಣಿಮೆಗಳ ಪೂರ್ವದ ಒಂಭತ್ತು ದಿನಗಳೂ ಕೂರಿಸುತ್ತಿದ್ದರು.

ಹೆಣ್ಣು ಮಕ್ಕಳು ದಿನಕ್ಕೊಂದು ಬಗೆಯ ಆರತಿಗಳನ್ನು ಮಾಡಿಕೊಂಡು ದೇವಸ್ಥಾನಕ್ಕೆ ಹೋಗಿ ಗೌರಿಗೆ ಆರತಿ ಬೆಳಗಿ ಮನೆಗೆ ಬರುವವರೆಗೂ ಬಿಡುವಿಲ್ಲದೇ ಹಾಡುಗಳನ್ನು ಹೇಳುತ್ತಿದ್ದರು. ಹಾಡುಗಳ ನೈಜ ಸಾಹಿತ್ಯವೇನಿರುತ್ತಿತ್ತೋ ಆದರೆ, ನಮಗೆ ಕೇಳಿಸುತ್ತಿದ್ದುದು ಹೀಗೆ, **'ಗೌರಿ ಹಾಡಲಾರೆನೆ, ಗೌರಿ ಪಾಡಲಾರೆನೆ, ಗೌರಿಚಲ್ಲಂ ಚಿಕ್ಕಳೆ, ಗೌರಿ ಮಲ್ಲೆ ಮುಡ್ಕೊಳ್ಳೆ, ಗೌರಿ ದಾಳಿಂಬ್ರಿ'**. ಇದು ಒಂದು ಹಾಡಾದರೆ **'ಕೋಲ್ ಗೌರಿ ಕೋಲೆ, ಕಂಚಿನ್ ಗೌರಿ ಕೋಲೆ, ಒಂದೆ ಹೂವ ಒಂದೆ**



**ಪತ್ರಿ, ಪತ್ರಿಗ ಪನಿವಾರ, ನಮ್ಮ ಗೌರವ್ವಗೆ ಮುತ್ತಿನ ಜನಿವಾರ'**.. ಎರಡೆ ಹೂವ ಎರಡೆ ಪತ್ರಿ.... 'ಈ ಹಾಡು ಹೀಗೇ ಮೂರು ನಾಲ್ಕು ಐದು ಆರು ಎಂದು ಮುಂದುವರೆಯುತ್ತಲೇ ಇರುತ್ತದೆ. ಮಗದೊಂದು ಹಾಡು **'ಒಂದೆ ಸೇರ್ ಎಣ್ಣೆ ತಂದೆ ಮಲ್ಲಕ್ಕ, ಒಂದೆ ದೀಪಕೆ ಮುಡುಸೆ ಮಲ್ಲಕ್ಕ, ರಾಯರಾಡರು ರಾಜಬೀದ್ಯಾಗೆ, ಶೆಟ್ಟರಾಡರು ಪಟ್ಟಣ ಶಾಲ್ಯಾಗೆ, ತುಂಬಿತೇ ಬೆಳದಿಂಗಳು, ನಾಡ್ಗೆಲ್ಲಾ ಹರದಿತೇ ಬೆಳದಿಂಗಳು'**.. ಎರಡೆ ಸೇರೆಣ್ಣೆ ತಂದೆ ಮಲ್ಲಕ್ಕ, ಎರಡೆ ದೀಪಕೆ ಮುಡ್ಸೆ ಮಲ್ಲಕ್ಕ..." ಇದೂ ಹೀಗೇ ಮೂರು ನಾಲ್ಕು ಐದು ಆರು ಮುಂತಾಗಿ ಸಾಗುತ್ತದೆ. ಸಾಮಾನ್ಯವಾಗಿ ಹದಿನೆಂಟಕ್ಕೆ ಮುಗಿಸುತ್ತಿದ್ದರು, ಕಾರಣ ನಂತರದ ಮಗ್ಗಿ ಪ್ರಾಸಕ್ಕೆ ಹೊಂದುತ್ತಿರಲಿಲ್ಲ. ಆನಂತರದ ಹಾಡೆಂದರೆ **'ಗೌರೀ ಗೌರೀ, ಗಾನಾ ಗೌರೀ, ಕುಂಕುಮ್ ಗೌರೀ, ಕುಲಾರಿ ಗೌರೀ, ಅಣ್ಣನಂತ ಅವರಿಕೋಲ್ ಅವರಿಕೋಲ್, ತಮ್ಮನಂತ ತವರಿಕೋಲ್ ತವರೀಕೋಲ್, ನಿಲ್ಲ ನಿಲ್ಲ ಗೌರವ್ವಾ ಗೌರವ್ವಾ, ನೀಲಿ ಕೊಂಬಿ ತರ್ತಿದ್ನಾ ತರ್ತಿದ್ನಾ, ನಮ್ಮ ಗೌರವ್ವಗೆ ಮುತ್ತಿನ ಜನಿವಾರ,'**. ಆಮೇಲೆ ಹಾಡುವುದು 'ಒಂದೇ ಹೂವ ತಂದಿನಿ ಒಂದೇ ಪತ್ರಿ ತಂದೀನಿ, ಒಂದೇ ಮೆಟ್ಲ ಒಂದೇ ದೀಪಾ, ಬಸವಕ್ಕ ಬಸವನ್ನಿರೆ, ಬಸವನ ಪಾದಕೆ ಹೊಸ ಮುತ್ತು ಹುಲಿಗೆಜ್ಜಿ ತಾಮ್ರೆನಿರೇ... ಎರಡೇ ಹೂವ ತಂದಿನಿ ಎರಡೆ ಪತ್ರಿ ತಂದಿನಿ....' ಹೀಗೆ ಇದೂ ಸಹಾ ಪುನಃ ಹದಿನೆಂಟರವರೆಗೆ ಸಾಗಿದರೆ ದೂರ ದೂರದ ಮನೆಗಳಿಂದ ಬರುವ ಹುಡುಗಿಯರು ಹದಿನೆಂಟಕ್ಕೆ ಮುಗಿಸದೇ ತೊಂಭತ್ತೊಂಭತ್ತು ನೂರು ಎಂದು ಮನೆ ಮುಟ್ಟುವವರೆಗೂ ಹಾಡುತ್ತಿದ್ದರು.

ಇನ್ನಷ್ಟು ಹಾಡುಗಳಿವೆ ಹಾಗೂ ಪ್ರತಿನಿತ್ಯ ವಿವಿಧ ಬಗೆಯ ಆರತಿಗಳ ಬಗ್ಗೆಯೂ ನಾಳೆ ಅಥವಾ ನಾಳಿದ್ದು ಹೇಳುತ್ತೇನೆ. 'ಹಾಡಲಾರೆ' ಎಂದು ಆರಂಭಿಸಿದವರು, ಬಿಡುವಿಲ್ಲದೇ ಹಾಡು ಗಳನ್ನು ಹೇಳುತ್ತಿದ್ದುದೇ ಈ ಗೌರಿ ಆರತಿಯ ಆ ಕಾಲದ ಸ್ವಾರಸ್ಯ. ಈಗ ಬಹುಷಃ ಬಕ್ಕೇಶ್ವರ ದೇವಸ್ಥಾನದಲ್ಲಿ ಕೇವಲ ಸೀಗೆ ಹುಣ್ಣಿಮೆ ಹಾಗೂ ಕಾರ್ತಿಕ ಹುಣ್ಣಿಮೆಗಳಲ್ಲಿ ಮಾತ್ರ ಗೌರಿಯನ್ನು ಕೂರಿಸುತ್ತಾರೆಂದು ತಿಳಿದುಬಂದಿತು.

# ಅಧಿವೇಶನಕ್ಕೂ ಮೊದಲೇ ಸಿಎಂ ರಾಜೀನಾಮೆ



**ಅಧಿವೇಶನದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಾಗಲಿದೆ**
**- ಆರ್. ಅಶೋಕ್**

ದಾವಣಗೆರೆ, ನ. 12 – ಕಳೆದ ವಿಧಾನಸಭಾ ಅಧಿವೇಶನದಲ್ಲಿ ವಾಲ್ಮೀಕಿ ನಿಗಮದ ಹಗರಣದ ಕಾರಣದಿಂದ ಒಬ್ಬ ಸಚಿವರ ವಿಕೆಟ್ ಉರುಳಿತ್ತು. ಮುಂದಿನ ಅಧಿವೇಶನದಲ್ಲಿ ಇನ್ನೂ ಹಲವು ಹಗರಣಗಳು ಚರ್ಚೆಗೆ ಬರಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿವೇಶನದ ಮೊದಲೇ ರಾಜೀನಾಮೆ ನೀಡಲಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾ ಡಿದ ಅವರು, ಮುಡಾ ವಿವಾದಕ್ಕೆ ಸಂಬಂಧಿಸಿದಂತೆ ಇನ್ನೂ 1,500 ನಿವೇಶನಗಳ ಹಂಚಿಕೆ ವಿವರ ಕೇಳಿ ಪತ್ರ ಬರೆದಿದ್ದೇನೆ. ಇದರಿಂದ ಮುಡಾದಲ್ಲಿ ನಡೆದಿರುವ ಲೂಟಿ ಬಟಾ ಬಯಲಾಗಲಿದೆ ಎಂದು ಹೇಳಿದರು.

ಮುಂದಿನ ಅಧಿವೇಶನದಲ್ಲಿ ಕಾರ್ಮಿಕ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರ ಹಾಗೂ ಲಿಕ್ಕರ್ ಲಾಬಿ ವಿವರಗಳನ್ನೂ ಪ್ರಸ್ತಾಪಿಸಲಾಗು ವುದು. ಅಧಿವೇಶನ ಪೂರ್ತಿ ಕಾಂಗ್ರೆಸ್ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಿಗೆ ಎಳೆಯಲಾಗು ವುದು ಎಂದರು. ಅಬಕಾರಿ ಇಲಾಖೆ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ರಾಜಭವನಕ್ಕೆ ದೂರು ಸಲ್ಲಿಸಲಾಗಿದೆ. ಆನಂತರ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಭೆ ನಡೆಸಿದ್ದಾರೆ. ಇದೆಲ್ಲಾ ಬೋಗಸ್ ಎಂದು ಸರ್ಕಾರ ಹೇಳುತ್ತದೆಯೇ? ದೂರು ಕೇಳಿ ಬಂದ ನಂತರ ಏಕೆ ಸಭೆ ನಡೆಸಲಾಗಿದೆ? ಎಂದು ಅಶೋಕ್ ಪ್ರಶ್ನಿಸಿದರು.

**ಆರೋಪವೇ ಆಕ್ಸಿಜನ್ :** ರಾಜ್ಯ ಕಾಂಗ್ರೆಸ್ ಸರ್ಕಾರ ಹಗರಣಗಳಲ್ಲಿ ಮುಳುಗಿದೆ. ಈಗ ಹಗರಣಗಳಿಂದ ತಪ್ಪಿಸಿಕೊಳ್ಳಲು ಬಿಜೆಪಿ ವಿರುದ್ಧ ಆರೋಪ ಮಾಡುತ್ತಿದೆ ಎಂದವರು ಟೀಕಿಸಿದರು.

ಹಗತರಣಗಳಲ್ಲೇ ಮುಳುಗಿರುವ ಕಾಂಗ್ರೆಸ್ ಸರ್ಕಾರ ಆಕ್ಸಿಜನ್‌ಗಾಗಿ ಪರಿತಪಿಸುತ್ತಿದೆ. ಹೀಗಾಗಿ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದೆ ಎಂದು ಹೇಳಿದರು.

ಕೊರೊನಾ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಹಾಗೂ ಮಾಜಿ ಸಚಿವ ಶ್ರೀರಾಮುಲು ವಿರುದ್ಧ ಪ್ರಾಸಿಕ್ಯೂಷನ್ ಮಾಡಬೇಕೆಂದು ನ್ಯಾಯಮೂರ್ತಿ ಮೈಕೆಲ್ ಡಿಕುನ್ಹ ಅವರ ನೇತೃತ್ವದ ತನಿಖಾ ಆಯೋಗ ವರದಿ ನೀಡಿದೆ. ಆದರೆ, ಈ ಆಯೋಗ ಯಡಿಯೂರಪ್ಪ ಹಾಗೂ ಶ್ರೀರಾಮುಲು ಅವರಿಗೆ ನೋಟಿಸ್ ನೀಡಿ ಮಾಹಿತಿಯನ್ನೇ ಪಡೆದಿಲ್ಲ. ನ್ಯಾಯಮೂರ್ತಿ ಕೆಂಪಣ್ಣ ಸಂಪೂರ್ಣ ವರದಿ ನೀಡಿದರೂ ಪರಿಶೀಲಿಸದ ಸರ್ಕಾರ, ಡಿಕುನ್ಹ ಅವರಿಂದ ಶೇ.10ರಷ್ಟೂ ಪೂರ್ಣಗೊಳ್ಳದ ವರದಿ ಪಡೆದು ಕ್ರಮಕ್ಕೆ ಬೆದರಿಕೆ ಹಾಕುತ್ತಿದೆ ಎಂದು ಆರೋಪಿಸಿದರು.

# ವಮುಸ್ಲಿಂ ಗುತ್ತಿಗೆ ಮೀಸಲಾತಿ ಬಗ್ಗೆ ಸಿದ್ದರಾಮಯ್ಯ ಹಸಿ ಸುಳ್ಳು

**ಅಶೋಕ್ ತರಾಟೆ**

ಬೆಂಗಳೂರು, ನ. 12 – ಗುತ್ತಿಗೆ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡುವ ಪ್ರಸ್ತಾವನೆಯೇ ಸರ್ಕಾರದ ಮುಂದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಸಿ ಸುಳ್ಳು ಹೇಳುತ್ತಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅಶೋಕ್, ಮುಸ್ಲಿಮರಿಗೆ ಟೆಂಡರ್ ಮೀಸಲಾತಿ ಕಲ್ಪಿಸುವ ಕುರಿತು ಟಿಪ್ಪಣಿಯೊಂದನ್ನು ಹಂಚಿಕೊಂಡಿದ್ದಾರೆ.

ಗುತ್ತಿಗೆ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಶೇಕಡ 4ರಷ್ಟು ಮೀಸಲಾತಿ ಕೊಡಬೇಕು ಎಂಬುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸಚಿವ ಜಮೀರ್ ಅಹ್ಮದ್ ಖಾನ್ ಸೇರಿದಂತೆ ಮುಸ್ಲಿಂ ಶಾಸಕರು ಆಗಸ್ಟ್ 24, 2024ರಂದು ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಸಿದ್ದರಾಮಯ್ಯ ಅದೇ ದಿನವೇ, ಈ ಪತ್ರವನ್ನು ಪರಿಶೀಲಿಸಿ, ಮಂಡಿಸಿ ಎಂದು ಆರ್ಥಿಕ ಇಲಾಖೆಗೆ ನಿರ್ದೇಶನ ನೀಡಿದ್ದೀರಿ, ಈ ಸಂಬಂಧ ಕೆಟಿಪಿಪಿ ಕಾಯ್ದೆಗೆ ತಿದ್ದುಪಡಿ ತರಲೂ ಸಹ ಅನುಮೋದನೆ ನೀಡಲಾಗಿದೆ ಎಂದು ಅಶೋಕ್ ಹೇಳಿದ್ದಾರೆ.

ಇಷ್ಟೆಲ್ಲಾ ಪತ್ರ ವ್ಯವಹಾರ ನಡೆದಿದ್ದರೂ ಗುತ್ತಿಗೆ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡುವ ಪ್ರಸ್ತಾವನೆಯೇ ಸರ್ಕಾರದ ಮುಂದಿಲ್ಲ ಎಂಬ ಹಸಿ ಸುಳ್ಳು ಹೇಳುತ್ತೀರಲ್ಲ, ತಮಗೆ ಕಿಂಚಿತ್ತಾದರೂ ಆತ್ಮಸಾಕ್ಷಿ, ನೈತಿಕತೆ ಎನ್ನುವುದೇ ಇಲ್ಲವೇ? ಎಂದು ಪ್ರಶ್ನಿಸಿದ್ದಾರೆ.

# ವಿಸ್ತಾರ – ಏರ್ ಇಂಡಿಯಾ ವಿಲೀನ ಪೂರ್ಣ

ನವದೆಹಲಿ, ನ. 12 - ವಿಸ್ತಾರ ಹಾಗೂ ಏರ್ ಇಂಡಿಯಾ ವಿಲೀನ ಮಂಗಳವಾರ ಪೂರ್ಣಗೊಂಡಿದೆ. ವಿಲೀನಗೊಂಡ ಸಂಸ್ಥೆಯಲ್ಲಿ ಪ್ರತಿನಿತ್ಯ 1.20 ಲಕ್ಷ ಜನರು ಪ್ರಯಾಣಿಸಲಿದ್ದಾರೆ.

ನವೆಂಬರ್ 2022 ರಲ್ಲಿ ಎರಡು ವಿಮಾನಯಾನ ಸಂಸ್ಥೆಗಳನ್ನು ವಿಲೀನಗೊಳಿಸುವ ನಿರ್ಧಾರ ಪ್ರಕಟಿಸಲಾಗಿತ್ತು. ಈ ವಿಮಾನಯಾನ ಸಂಸ್ಥೆಯಲ್ಲಿ ಸಿಂಗಪುರ ಏರ್‌ಲೈನ್ಸ್ ಸಹ ಪಾಲುಗಾರಿಕೆ ಹೊಂದಿದೆ.

ಆರು ವಾರಗಳ ಹಿಂದೆ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಹಾಗೂ ಎ.ಐ.ಎಕ್ಸ್. ಕನೆಕ್ಟ್ ವಿಮಾನಯಾನ ಸಂಸ್ಥೆಗಳನ್ನು ವಿಲೀನಗೊಳಿಸಲಾಗಿತ್ತು. ಈ ವಿಲೀನಗಳ ಕಾರಣದಿಂದಾಗಿ ಟಾಟಾ ಸಮೂಹಕ್ಕೆ ಪೂರ್ಣ ಸೇವೆಯ ವಿಮಾನಯಾನ ಸಂಸ್ಥೆ ಹಾಗೂ ಕಡಿಮೆ ವೆಚ್ಚದ ವಿಮಾನಯಾನ ಸಂಸ್ಥೆಗಳು ದೊರೆತಂತಾಗಿವೆ.

ಇದಕ್ಕೂಮುಂಚೆ ಟಾಟಾ ಹಾಗೂ ಸಿಂಗಪುರ ಏರ್‌ಲೈನ್ಸ್ ಸಂಸ್ಥೆಗಳ ಜಂಟಿ ಉದ್ಯಮವಾದ ವಿಸ್ತಾರಾ, ದೆಹಲಿಯಿಂದ ಸಿಂಗಪುರಕ್ಕೆ ತನ್ನ ಕೊನೆಯ ಹಾರಾಟ ನಡೆಸಿತು. ಹತ್ತು ವರ್ಷಗಳ ಹಿಂದೆ ವಿಸ್ತಾರಾ ಸ್ಥಾಪಿಸಲಾಗಿತ್ತು.

ವಿಲೀನಗೊಂಡ ಸಂಸ್ಥೆಯಲ್ಲಿ ಸಿಂಗಪೂರ್ ಏರ್‌ಲೈನ್ಸ್ 3,194.5 ಕೋಟಿ ರೂ.ಗಳ ಹೆಚ್ಚುವರಿ ಹೂಡಿಕೆ ಮಾಡಲಿದೆ.

ವಿಲೀನಗೊಂಡ ಏರ್ ಇಂಡಿಯಾ ಪ್ರತಿ ವಾರ 5,600 ಹಾರಾಟಗಳನ್ನು ನಡೆಸಲಿದೆ. 90 ದೇಶೀಯ ಹಾಗೂ ಅಂತರರಾಷ್ಟ್ರೀಯ ತಾಣಗಳನ್ನು ಸಂಪರ್ಕಿಸಲಿದೆ. 210 ವಿಮಾನಗಳನ್ನು ಹೊಂದಲಿದೆ.

# ಅಂಬೇಡ್ಕರ್ ಇಸ್ಲಾಂ ಧರ್ಮ ಸ್ವೀಕರಿಸಲು ಸಿದ್ಧತೆ ನಡೆಸಿದ್ದರು ಎಂದ ಕಾಂಗ್ರೆಸ್ ಮುಖಂಡ

**ಅಂಬೇಡ್ಕರ್ ಇಸ್ಲಾಂ ಧರ್ಮ ಸ್ವೀಕರಿಸಿದ್ದರೆ ಜಿ. ಪರಮೇಶ್ವರ್ ಅವರು ಪೀರ್ ಸಾಬ್ ಆಗಿರುತ್ತಿದ್ದರು.**
**-ಮಾಜಿ ಶಾಸಕ ಅಜ್ಜಂಪೀರ್ ಖಾದ್ರಿ**

ಶಿಗ್ಗಾಂವಿ, ನ. 12 – ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಇಸ್ಲಾಂ ಧರ್ಮ ಸ್ವೀಕರಿಸಲು ಸಿದ್ಧತೆ ನಡೆಸಿದ್ದರು. ಅವರು ಕೊನೆ ಕ್ಷಣದಲ್ಲಿ ಬೌದ್ಧ ಧರ್ಮ ಸ್ವೀಕರಿಸಿದರು ಎಂದು ಮಾಜಿ ಶಾಸಕ ಹಾಗೂ ಕಾಂಗ್ರೆಸ್ ಮುಖಂಡ ಅಜ್ಜಂಪೀರ್ ಖಾದ್ರಿ ಹೇಳಿರುವುದು ವಿವಾದಕ್ಕೆ ಕಾರಣವಾಗಿದೆ.

ಶಿಗ್ಗಾಂವಿಯಲ್ಲಿ ನಡೆದ ಆದಿಜಾಂಬವ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಇಸ್ಲಾಂ ಧರ್ಮ ಸ್ವೀಕರಿಸಿದ್ದರೆ ದಲಿತರೆಲ್ಲ ಮುಸ್ಲಿಮರಾಗಿರುತ್ತಿದ್ದರು. ಡಾ. ಜಿ. ಪರಮೇಶ್ವರ್ ಅವರು ಪೀರ್ ಸಾಬ್ ಆಗಿರುತ್ತಿದ್ದರು ಎಂದರು.

ಎಲ್. ಹನುಮಂತಯ್ಯ ಹೋಗಿ ಹಸನ್ ಸಾಬ್ ಆಗುತ್ತಿದ್ದರು. ಮಂಜುನಾಥ್ ತಿಮ್ಮಾಪುರ್ ಹೋಗಿ ಬಾಬೂಸಾಬ್ ಆಗುತ್ತಿದ್ದರು ಎಂದೂ ಅವರು ಹೇಳಿದ್ದಾರೆ.

ಈ ಹೇಳಿಕೆ ವಿವಾದವಾದ ನಂತರ ಸ್ಪಷ್ಟನೆ ನೀಡಿದ ಅವರು, ಯಾರ ಭಾವನೆಗಳಿಗೂ ಧಕ್ಕೆ ತರುವ ಉದ್ದೇಶ ಇಲ್ಲ. ತಮ್ಮ ಹೇಳಿಕೆಯಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದಿಸುತ್ತೇನೆ ಮತ್ತು ಕ್ಷಮೆಯಾಚಿಸುತ್ತೇನೆ ಎಂದು ತಿಳಿಸಿದ್ದಾರೆ.

ದಲಿತರು ಮತ್ತು ಮುಸ್ಲಿಂ ಸಮುದಾಯದವರ ಮಧ್ಯೆ ಆಳವಾದ ಬಾಂಧವ್ಯವಿದೆ. ಈಗಲೂ ಕೂಡ ದಲಿತ ಕೇರಿ ಪಕ್ಕದಲ್ಲಿಯೇ ಮುಸ್ಲಿಮರ ನೆಲೆಗಳಿವೆ. ನಮ್ಮ-ಅವರ ಬಾಂಧವ್ಯ ಮೊದಲಿನಿಂದಲೂ ಇದೆ. ನಮ್ಮ ಮನೆಗೆ ದಲಿತ ಸಮುದಾಯದವರು ಕೆಲ ಸಕ್ಕೆ ಬರುತ್ತಾರೆ. ಅವರಿಗೆ ಯಾವುದೇ ಭೇದಭಾವ ಮಾಡುವುದಿಲ್ಲ ಎಂದು ಖಾದ್ರಿ ಹೇಳಿದರು.

ಖಾದ್ರಿ ಹೇಳಿಕೆಯನ್ನು ತರಾಟೆಗೆ ತೆಗೆದುಕೊಂಡಿರುವ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಖಾದ್ರಿ ಅವರು ಅಂಬೇಡ್ಕರ್ ಅವರಿಗೆ ಘೋರ ಅವಮಾನ ಎಸಗಿದ್ದಾರೆ ಎಂದಿದ್ದಾರೆ.

ಬಾಬಾ ಸಾಹೇಬ್ ಅಂಬೇಡ್ಕರರು ಇಸ್ಲಾಂ ಧರ್ಮ ಸ್ವೀಕರಿಸುವುದು ದೂರದ ಮಾತು. ಅವರಿಗೆ ಇಸ್ಲಾಂ ಧರ್ಮದ ಬಗ್ಗೆ ಇದ್ದ ಅಭಿಪ್ರಾಯ ಎಂಥದ್ದು ಎನ್ನುವುದನ್ನು ಕಾಂಗ್ರೆಸ್ ನಾಯಕರು ಒಮ್ಮೆ ಓದಿಕೊಳ್ಳಬೇಕು ಎಂದು ಹೇಳಿದ್ದಾರೆ.

ಇಸ್ಲಾಂ, ಕ್ರೈಸ್ತ ಮತಕ್ಕೆ ಮತಾಂತರವಾದರೆ ಅದು ಕೇವಲ ಮತಾಂತರವಾಗದೆ ರಾಷ್ಟ್ರಾಂತರವಾಗಿ ಭಾರತದ ಏಕತೆಗೆ ಸಾರ್ವಭೌಮತೆಗೆ ಧಕ್ಕೆ ಆಗುತ್ತದೆ. ಎಂದು ಅಂಬೇಡ್ಕರ್ ಅವರು ಅಭಿಪ್ರಾಯಪಟ್ಟಿದ್ದರು. ಇಸ್ಲಾಂ ಧರ್ಮದ ಬಗ್ಗೆ ಇಂತಹ ಅಭಿಪ್ರಾಯ ಹೊಂದಿದ್ದ ಬಾಬಾಸಾಹೇಬ್ ಅಂಬೇಡ್ಕರ್ ಅವರು ಇಸ್ಲಾಂ ಧರ್ಮ ಸ್ವೀಕರಿಸಲು ಮುಂದಾಗಿದ್ದರು ಎಂದರೆ ಅದನ್ನು ನಂಬಲು ಸಾಧ್ಯವೇ? ಎಂದು ಪ್ರಶ್ನಿಸಿದ್ದಾರೆ.

ಇಸ್ಲಾಂನ ಭ್ರಾತೃತ್ವ ಇಡೀ ಮನುಕುಲದ ಭ್ರಾತೃತ್ವವಾಗುವ ಬದಲು ಕೇವಲ ಮುಸಲ್ಮಾನರಿಗೆ ಸೀಮಿತವಾದದ್ದು ಎಂಬುದನ್ನು ಅರಿತೇ ಅಂಬೇಡ್ಕರ್ ಅವರು ಪಾಕಿಸ್ತಾನದ ರಚನೆಯನ್ನು ಸಮರ್ಥಿಸಿದ್ದರು. ಕಾಂಗ್ರೆಸ್ ಹಿಡಿತದಲ್ಲಿದ್ದ ಸ್ವಾತಂತ್ರ್ಯೋತ್ತರ ಭಾರತ ಪಾಕಿಸ್ತಾನವನ್ನೂ ಕಳೆದುಕೊಂಡಿತು, ಅಂಬೇಡ್ಕರ್ ಎಚ್ಚರಿಕೆಯನ್ನೂ ಧಿಕ್ಕರಿಸಿತು. ಪರಿಣಾಮ ಕಾಂಗ್ರೆಸ್ ಪಕ್ಷ ದೇಶ ದೊಳಗೆ ಸೆಕ್ಯುಲರಿಸಂ ಹೆಸರಿನಲ್ಲಿ ತುಷ್ಟೀಕರಣದ ನೀತಿಯನ್ನು ಇಂದಿಗೂ ಮುಂದುವರೆಸುತ್ತಲೇ ಬಂದಿದೆ ಎಂದವರು ಆರೋಪಿಸಿದ್ದಾರೆ.

# 100ನೇ ಬಾರಿಗೆ ರಕ್ತದಾನ ಮಾಡಿದ ಅನಿಲ್ ಬಾರಂಗಳ್‌ಗೆ ಎಸ್ಸೆಸ್ ಸನ್ಮಾನ



ದಾವಣಗೆರೆ, ನ.12- 100ನೇ ಬಾರಿಗೆ ರಕ್ತದಾನ ಮಾಡಿದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಖಜಾಂಚಿಯೂ ಆದ ಲೈಫ್ ಲೈನ್ ಸ್ವಯಂ ಪ್ರೇರಿತ ರಕ್ತಧಾನಿಗಳ ಸಮೂಹದ ಕಾರ್ಯದರ್ಶಿ ಅನಿಲ್ ಬಾರಂಗಳ್ ಅವರನ್ನು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ತಮ್ಮ ನಿವಾಸದಲ್ಲಿ ಸನ್ಮಾನಿಸಿ ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಶ್ರೀಕಾಂತ್ ಬಗಾರೆ, ರಾಜು ಭಂಡಾರಿ , ವಿಜಯ್ ಕುಮಾರ್ , ರಾಮನಾಥ ಪಿ.ಸಿ., ಮಾಧವ ಪದಕಿ, ಯುವರಾಜ್ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಮಕ್ಕಳ ಕಾನೂನು ಬದ್ದ ದತ್ತು ಕಾರ್ಯಕ್ರಮದ ಜಾಥಾ

ಅಂತರರಾಷ್ಟ್ರೀಯ ದತ್ತು ಮಾಸದ ಅಂಗವಾಗಿ ಮಕ್ಕಳ ಕಾನೂನು ಬದ್ದ ದತ್ತು ಕಾರ್ಯಕ್ರಮ ಕುರಿತು ಜಾಥಾವನ್ನು ಜಯದೇವ ವೃತ್ತದಲ್ಲಿ ಹಮ್ಮಿಕೊಳ್ಳ ಲಾಗಿದೆ. ಜಿಲ್ಲಾಧಿಕಾರಿ ಜಿ.ಎಂ ಗಂಗಾಧರಸ್ವಾಮಿ ಅಧ್ಯಕ್ಷತೆ ವಹಿಸುವರು.

ಕಾನೂನು ಬಾಹಿರವಾಗಿ ಮಕ್ಕಳ ಮಾರಾಟ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಲಾಗುವುದು. ಮಕ್ಕಳನ್ನು ಮಾರಾಟ ಮಾಡುವುದು, ಕೊಂಡುಕೊಳ್ಳುವುದು. ಇದಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕಾರ ನೀಡುವ ಮಧ್ಯವರ್ತಿಗಳನ್ನೊಳಗೊಂಡಂತೆ ಪ್ರಕರಣದಲ್ಲಿ ಭಾಗಿಯಾದ ಎಲ್ಲರಿಗೂ 5 ವರ್ಷಗಳವರೆಗೂ ಸೆರೆಮನೆ ವಾಸದ ಶಿಕ್ಷೆ ಇರುತ್ತದೆ.

ಈ ಅಪರಾಧದಲ್ಲಿ ಆಸ್ಪತ್ರೆಯ ಅಧಿಕಾರಿಗಳು, ವೈದ್ಯರು, ಸಿಬ್ಬಂದಿಗಳು ಭಾಗಿಯಾಗಿದ್ದಲ್ಲಿ ಶಿಕ್ಷೆಯ ಅವಧಿ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ 7 ವರ್ಷಗಳವರೆಗೆ ವಿಸ್ತರಣೆ ಮಾಡಲಾಗುತ್ತದೆ. ಆದ್ದರಿಂದ ಅನಾಥ, ಪರಿತ್ಯಕ್ತ ಮತ್ತು ಒಪ್ಪಿಸಲ್ಪಟ್ಟ ಮಕ್ಕಳ ಮಾಹಿತಿ ಕಂಡು ಬಂದಲ್ಲಿ ಮಕ್ಕಳ ಸಹಾಯವಾಣಿ 1098/112, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಗೆ ಮಾಹಿತಿ ನೀಡಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ನಗರದಲ್ಲಿಂದು ಆರೋಗ್ಯ ತಪಾಸಣೆ

ಭಾವಸಾರ ವಿಷನ್ ಇಂಡಿಯಾ, ಬಾಲಾಜಿ ಎಜುಕೇಷ ನಲ್ ಅಂಡ್ ಸೋಶಿಯಲ್ ವೆಲ್‌ಫೇರ್ ಟ್ರಸ್ಟ್ ಹಾಗೂ ನಗರ ಆರೋಗ್ಯ ಕೇಂದ್ರ 2, ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ದಾವಣಗೆರೆ ತಾಲ್ಲೂಕು ಮತ್ತು ದಾವಣಗೆರೆ ಹೈಟೆಕ್ ಡಯಾ ಗ್ನೋಸ್ಟಿಕ್ ಸೆಂಟರ್ ಇವರುಗಳ ಸಂಯುಕ್ತಾಶ್ರಯದಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ.

ಮಹಾರಾಜ ಪೇಟೆಯ ಶ್ರೀ ವಿಠ್ಠಲ ಮಂದಿರದಲ್ಲಿ ಇಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 2 ರವರೆಗೆ ಶಿಬಿರ ಏರ್ಪಾಡಾಗಿದೆ.

ಸೌಲಭ್ಯಗಳು: ಆರೋಗ್ಯ ತಪಾಸಣೆ, ರಕ್ತದೊತ್ತಡ, ಮಧು ಮೇಹ, ಕಫ, ಮಲೇರಿಯಾ, ಡೆಂಗ್ಯೂ ಹಾಗೂ ಹೆಚ್.ಐ.ವಿ ಪರೀಕ್ಷೆ, ಕಣ್ಣಿನ ಪರೀಕ್ಷೆ, ಉಚಿತ ಆರ್.ಬಿ.ಎಸ್., ಲಿಪಿಡ್ ಪ್ರೊಫೈಲ್ ಕೊಲೆಸ್ಟ್ರಾಲ್ ಪರೀಕ್ಷೆ.

ಮಾಹಿತಿಗಾಗಿ ಶ್ರೀಮತಿ ಸರಳ ಅಮಟೆ (94483 64830), ರಮೇಶ್ ಬಾಬು ಗುಜ್ಜರ್ (99456 59498) ಅವರನ್ನು ಸಂಪರ್ಕಿಸಬಹುದು.

# ಕಳ್ಳತನವಾಗಿದ್ದ ಸ್ವತ್ತು ವಾರಸುದಾರರಿಗೆ ಹಸ್ತಾಂತರ



ದಾವಣಗೆರೆ, ನ.12- ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಕಳ್ಳತನ ಪ್ರಕರಣ ಪತ್ತೆ ಹೆಚ್ಚಿ ವಶ ಪಡಿಸಿಕೊಂಡಿದ್ದ ಸ್ವತ್ತನ್ನು ಪೊಲೀಸರು ಮರಳಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ಪ್ರಕಾಶ್ ಪಿ. ಅವರಿಗೆ ಸೇರಿದ್ದ 3.24 ಲಕ್ಷ ರೂ. ಬೆಲೆಯ 63 ಗ್ರಾಂ. ಬಂಗಾರದ ಆಭರಣಗಳನ್ನು ಮಂಗಳವಾರ ಮರಳಿ ನೀಡಲಾಯಿತು. ಈ ಸಂಧರ್ಭದಲ್ಲಿ ನಗರ ಪೊಲೀಸ್ ಉಪಾಧೀಕ್ಷಕರಾದ ಮಲ್ಲೇಶ್ ದೊಡ್ಮನಿ, ಕೆಟಿಜೆ ನಗರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಸುನೀಲ್ ಕುಮಾರ್, ಪಿಎಸ್ ಐ ಲತಾ ರವರು ಹಾಗು ಸಿಬ್ಬಂದಿಗಳು ಉಪಸ್ಥಿತರಿದ್ದರು

# ವಾಣಿಜ್ಯ ವಿದ್ಯಾರ್ಥಿಗಳಿಗೆ ಸ್ಥಳಿಯ ಕಂಪನಿಗಳ ಅಧ್ಯಯನ ಅಗತ್ಯ



**ಬಿ.ಕಾಂ ವಿದ್ಯಾರ್ಥಿಗಳ ತರಬೇತಿ ಕಾರ್ಯಕ್ರಮದಲ್ಲಿ ಡಾ. ಮಂಜುನಾಥ**

ದಾವಣಗೆರೆ, ನ.12- ವಾಣಿಜ್ಯ ವಿದ್ಯಾ ರ್ಥಿಗಳಿಗೆ ಸ್ಥಳೀಯ ಕಂಪನಿಗಳ ಅಧ್ಯಯನ ಅಗತ್ಯ, ಅವುಗಳ ಆರ್ಥಿಕ ಸಾಧನೆ, ಮಾರು ಕಟ್ಟೆ ತಂತ್ರಗಳು, ಗ್ರಾಹಕ ಚಲನಗಳನ್ನು ಅಧ್ಯಯನ ನಡೆಸಿ, ಅರ್ಥ ಮಾಡಿಕೊಳ್ಳಬೇಕು ಎಂದು ಡಾ. ಮಂಜುನಾಥ್ ಹೇಳಿದರು

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಾಣಿಜ್ಯ ವಿಭಾಗ ಹಾಗೂ ಐಕ್ಯೂಎಸಿ ಸಮಿತಿ ಸಹಯೋಗದಲ್ಲಿ ಅಂತಿಮ ವರ್ಷದ ಬಿ.ಕಾಂ ವಿದ್ಯಾರ್ಥಿಗಳಿ ಗಾಗಿ ಕಳೆದ ವಾರ ಹಮ್ಮಿಕೊಳ್ಳಲಾಗಿದ್ದ 'ಕಂಪನಿಗಳ ವಿಶ್ಲೇಷಣೆ' ಕುರಿತ ತರಬೇತಿ ಕಾರ್ಯ ಕ್ರಮದಲ್ಲಿ ಅವರು ಮಾತನಾಡಿ ದರು. ಗ್ರಾಹಕರ ಕೊಳ್ಳು ವಿಕೆ ಅತಿದೊಡ್ಡ ಮಹತ್ವ ವನ್ನು ಹೊಂದಿದೆ. ಈ ಹಿನ್ನೆಲೆ ಯಲ್ಲಿ, ಕಂಪನಿಗಳ ವಿಶ್ಲೇಷಣೆ ಒಂದು ಮುಖ್ಯ ಆಯಾಮವಾಗಿ ಹೊರಹೊ ಮ್ಮುತ್ತದೆ ಎಂದು ಅವರು ಹೇಳಿದರು ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಪ್ರೊ. ಬಿ.ಸಿ. ತಹಶೀಲ್ದಾರ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಯೋಜಕ ಪ್ರೊ. ಡಾ. ಗುರುರಾಜ ಜೆ.ಪಿ., ಗೆಜೆಟೆಡ್ ಮ್ಯಾನೇಜರ್ ಶ್ರೀಮತಿ ಗೀತಾದೇವಿ ಟಿ., ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಾ. ಸುನಿತಾ ಕೆ.ಬಿ. ಪ್ರೊ ರೇಖಾ, ಪ್ರೊ ಶಂಕ್ರಯ್ಯ, ಪ್ರೊ. ಸಿದ್ದಮ್ಮ ಅವರು ಉಪಸ್ಥಿತರಿದ್ದರು.

# ಮುಸ್ಲಿಂ ತುಷ್ಟೀಕರಣದ ಪರಾಕಾಷ್ಠೆ : ಎಂ.ಪಿ.ರೇಣುಕಾಚಾರ್ಯ

ದಾವಣಗೆರೆ, ನ. 12- ವಕ್ಫ್ ಬೋರ್ಡ್ ಮೂಲಕ ರಾಜ್ಯದ ಹಿಂದೂಗಳ ಆಸ್ತಿ ಕಬಳಿಸಲು ಯತ್ನಿಸಿದ್ದ ಕಾಂಗ್ರೆಸ್ ಸರ್ಕಾರ ಇದೀಗ ಸಿವಿಲ್ ಕಾಮಗಾರಿಗಳಲ್ಲಿ ಮುಸ್ಲಿಂ ಸಮುದಾಯಕ್ಕೆ ಗುತ್ತಿಗೆ ಕಾಮಗಾರಿಯಲ್ಲಿ ಶೇ.4 ರಷ್ಟು ಮೀಸಲಾತಿ ನೀಡಲು ಹೊರಟಿರುವುದು ತುಷ್ಟೀಕರಣದ ಪರಾಕಾಷ್ಠೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದ್ದಾರೆ. ಹಿಂದೆ ಮತಾಂತ ಟಿಪ್ಪು ಸುಲ್ತಾನ್ ಜಯಂತಿ ಆಚರಣೆ ಮಾಡಿ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಹಾಳು ಮಾಡಿದ್ದೀರಿ. ಈಗ ಮತ್ತೆ ಬೆಂಕಿ ಹಚ್ಚಲು ಸ್ವತಃ ನೀವೇ ಮುಂದಾಗಿದ್ದೀರಿ. ಓಲೈಕೆ ರಾಜಕಾರಣ ಮಾಡಲು ಇತಿಮಿತಿ ಇರಬೇಕು. ಅತಿಯಾದರೆ ಅಮೃತ ಕೂಡ ವಿಷವಾಗುತ್ತದೆ ಜೋಕೆ ಎಂದವರು ಸರ್ಕಾರಕ್ಕೆ ಎಚ್ಚರಿಸಿದ್ದಾರೆ.

# ನಾಡು-ನುಡಿ ಉಳಿವಿಗೆ ಕನ್ನಡಪರ ಸಂಘಟನೆಗಳ ಶ್ರಮವಿದೆ

## ರಾಣೇಬೆನ್ನೂರು ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಪ್ರಭಾಕರ ಶಿಗ್ಲಿ



ರಾಣೇಬೆನ್ನೂರು, ನ. 12- ಕನ್ನಡ ನಾಡು, ನುಡಿ, ಜಲ, ನೆಲ ಹಾಗೂ ಸಂಸ್ಕೃತಿ ಉಳಿವಿಗೆ ಅನೇಕ ಮಹನೀಯರು ಶ್ರಮಿಸಿದ್ದಾರೆ. ಅವರ ಜೊತೆ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಕನ್ನಡಪರ ಸಂಘಟನೆಗಳು ಶ್ರಮಿಸುತ್ತಿವೆ ಎಂದು ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಪ್ರಭಾಕರ ಶಿಗ್ಲಿ ಹೇಳಿದರು. ಕಸಾಪ ಭವನದಲ್ಲಿ ನಡೆದ ಗುಡ್ಡಪ್ಪ ಹಾವನೂರ, ಚನ್ನಮ್ಮ, ಲಕ್ಷ್ಮಣ ಮಾಳಿಗಿಮನಿ ಹಾಗೂ ಗಂಗಮ್ಮ ಹಾವನೂರ ಅವರ ದತ್ತಿನಿಧಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ನಾಡು, ನುಡಿ ಹಾಗೂ ವ್ಯಕ್ತಿಗಳ, ಸಂಘ-ಸಂಸ್ಥೆಗಳ ಹೆಸರಿನಲ್ಲಿ, ಅವರು ಹೇಳಿದ ವಿಷಯದ ಅನುಸಾರ ಸ್ಥಾಪಿಸಿದ ದತ್ತಿನಿಧಿ ಕಾರ್ಯಕ್ರಮ ಪ್ರತಿವರ್ಷ ನಡೆಸಲಾಗುತ್ತಿದೆ ಎಂದು ಶಿಗ್ಲಿ ಅವರು ವಿವರಿಸಿದರು.

ಮಹಿಳೆಯು ಇಂದು, ತಂದೆ-ತಾಯಿ, ಅಣ್ಣ, ತಮ್ಮ, ಪತಿ, ಮಕ್ಕಳ ಸಹಾಯ, ಸಹಕಾರದೊಂದಿಗೆ ಸಾಹಿತ್ಯ ಹಾಗೂ ಇನ್ನಿತರೆ ವಲಯಗಳಲ್ಲಿ ಗುರುತಿಸಲ್ಪಡುವಂತೆ ಬೆಳೆಯುತ್ತಿದ್ದು, ಅವರಿಂದ ಸಮಾಜಕ್ಕೆ ಉತ್ತಮ ಕೊಡುಗೆ ಸಿಗುತ್ತಿದೆ ಎಂದು ಅತಿಥಿಗಳಾಗಿದ್ದ ಜಿಲ್ಲಾ ಪತಂಜಲಿ ಯೋಗ ಸಮಿತಿ ಅಧ್ಯಕ್ಷೆ ಜ್ಯೋತಿ ಜಂಬಗಿ ಹೇಳಿದರು.

ನಿವೃತ್ತ ಉಪ ತಹಶೀಲ್ದಾರ ಶಿವಲಿಂಗಪ್ಪ ಸಂದಿಮನಿ, ಮೀನಾಕ್ಷಿ ಸಂದಿಮನಿ, ಈಶ್ವರ ಹಾವ ನೂರ, ನಗರಸಭೆ ಸದಸ್ಯೆ ಗಂಗಮ್ಮ ಹಾವನೂರ, ಮುಖ್ಯೋಪಾಧ್ಯಾಯ ಮಂಜುನಾಥ, ಮಾಳಗಿ ಮನೆ ಕುಟುಂಬದ ಸದಸ್ಯರು ಮತ್ತಿತರರಿದ್ದರು.

**ಮಾನ್ಯ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರು (ಹಿರಿಯ ವಿಭಾಗ) ನ್ಯಾಯಾಲಯ, ದಾವಣಗೆರೆ**

**EX ನಂ. 118/2023**

**ಡಿಕ್ರಿಹೋಲ್ಡರ್ :** ಎ.ಓ ರವಿ - ವಿರುದ್ಧ -

**ಜಡ್ಜ್ ಮೇಂಟ್ ಡೆಟರ್ :** ಜೆ.ಡಿ. ಹನುಮಂತಪ್ಪ ಮತ್ತು ಇತರರು

**ನೋಟೀಸುದಾರರು (1ನೇ ಜಡ್ಜ್ ಮೇಂಟ್ ಡೆಟರ್) :**

1) 1ನೇ ಜಡ್ಜ್ ಮೆಂಟ್ ಡೆಟರ್ : ಜೆ.ಡಿ. ಹನುಮಂತಪ್ಪ ಬಿನ್ ಜಾಜುರಪ್ಪರ ದಾಸಪ್ಪ, ಅಣಬೇರು ಗ್ರಾಮ ತಾಲ್ಲೂಕು, ದಾವಣಗೆರೆ.

**ಸಿ.ಪಿ.ಸಿ ಆದೇಶ 5 ನಿಯಮ 20ರ ಅಡಿಯಲ್ಲಿ 1 ನೇ ಪ್ರತಿವಾದಿಯರ ವಿರುದ್ಧ ಪತ್ರಿಕಾ ಪ್ರಕಟಣಾ ನೋಟಿಸ್**

ಮೇಲ್ಕಂಡ ಪ್ರಕರಣವನ್ನು ಡಿಕ್ರಿ ಹೋಲ್ಡ್‌ರವರು ಜಡ್ಜ್‌ಮೆಂಟ್ ಡೆಟರವರ ವಿರುದ್ಧ ನಿರ್ದಿಷ್ಟ ಪರಿಹಾರ ಕೋರಿ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು 1ನೇ ಜಡ್ಜ್‌ಮೆಂಟ್ ಡೆಟರ್‌ರವರಾಗಿದ್ದು, ಮಾನ್ಯ ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್‌ನ್ನು ನೋಂದಾಯಿತ ಅಂಚೆ ಮೂಲಕ ಕಳಿಸಿದ್ದರೂ ಸಹ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ : 19.12.2024 ರಂದು ಬೆಳಿಗ್ಗೆ 11 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿ ಆಗಲೀ ಅಥವಾ ನಿಮ್ಮ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ಕೈಗೊಳ್ಳಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿಯಿಂದ ದಿನಾಂಕ: 07.11.2024 ರಂದು ಕೊಡಲ್ಪಟ್ಟಿದೆ.

ಡಿಕ್ರಿಹೋಲ್ಡ್‌ರವರ ಪರ ವಕೀಲರು
**ಪಿ.ವೈ. ಹಾದಿಮನಿ**
ಸ್ಥಳ : ದಾವಣಗೆರೆ
ದಿನಾಂಕ : 06.11.2024

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರರು**
3ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ
(ಹಿ.ವಿ.) ದಾವಣಗೆರೆ

**33 KARNATAKA B.N NCC**
**DAVANGERE - 577 005.**

**TENDER INQUIRY : SUPPLY OF RATION**

Commanding Officer 33 Karnataka BN NCC, Davangere. Invites application form interested parties for supply of Dry and fresh ration items for CATC of NCC Cadets & Staffs to be conducted at Kondajji from 20 Nov 2024 to 29 Nov 2024. The feeding strength for the camps will be 600 Each. The list of ration items can be collected from this office before 15 Nov 2024 from this unit office location SOG Colony, Near SS Hospital, Davangere between 10 am to 5 pm on any working day. Interested parties will be required to submit quotation and samples of ration items before 5.00 pm on 18 November 2024.

**(Col SK Sharma)**
**Commanding Officer**

# ಹಬ್ಬಕ್ಕೆ ತೋರಣ, ಕಂದು ಮಾರಲು ಬಂದವರ ಪಡಿಪಾಟಲು

ದಾವಣಗೆರೆ, ನ.12- ನಿನ್ನೆ ರಾತ್ರಿ 11 ರ ಸುಮಾರಿಗೆ ನಗರದ ಟ್ಯಾಂಕ್ ಬಂಡ್ ರಸ್ತೆ ಅಂದರೆ ಹನುಮಂತಪ್ಪನವರ ಛತ್ರದಿಂದ ಜಯದೇವ ಸರ್ಕಲ್ ಕಡೆಗೆ ಹೋಗುವ ರಸ್ತೆಯಲ್ಲಿ ಜೆಸಿಬಿಯೊಂದು ತುಳಸಿ ಹಬ್ಬಕ್ಕಾಗಿ ಮಾರಾಟ ಮಾಡಲು ರಸ್ತೆಯಲ್ಲಿ ತಂದಿಟ್ಟಿದ್ದ ಬಾಳೆಕಂದುಗಳು, ಮಾವಿನ ಸೊಪ್ಪು, ನಲ್ಲಿ ಟೊಂಗೆ ಮುಂತಾದವನ್ನು ಎತ್ತಿ ಆಚೆ ಹಾಕಲು ಸಜ್ಜಾಗಿದ್ದರೆ. ಅವುಗಳನ್ನು ತಂದವರು 'ಇಲ್ಲೇ ಮಾರಾಟ ಮಾಡಲು ದಯಮಾಡಿ ಅವಕಾಶ ಕೊಡಿ' ಎಂದು ದೈನ್ಯವಾಗಿ ಬೇಡಿಕೊಳ್ಳುತ್ತಿದ್ದರು. ಅವರೆಲ್ಲಾ ಬಹುತೇಕ ಹಳ್ಳಿಗಳಿಂದ ಬಂದ ಬಡ ಕೃಷಿ ಕೂಲಿ ಕಾರ್ಮಿಕರೇ ಆಗಿದ್ದರು. ಕೆಲ ಹೆಂಗಸರಂತೂ ಕಣ್ಣೀರಿಡುತ್ತಾ ಕೈಮುಗಿದು ಅಂಗಲಾಚುತ್ತಿದ್ದರು.

ನಗರ ಪಾಲಿಕೆಯ ಆರೋಗ್ಯ ವಿಭಾಗದ ಒಂದಿಬ್ಬರು ಹಾಗೂ ಓರ್ವ ಪೊಲೀಸ್, 'ಮೇಲಾಧಿಕಾರಿಗಳ ಆದೇಶವಾಗಿದೆ. ಸ್ಥಳೀಯ ಅಂಗಡಿಗಳವರ ವ್ಯಾಪಾರಕ್ಕೆ ತೊಂದರೆಯಾಗುತ್ತದೆ ಎಂದು ದೂರು ಬಂದಿದೆಯಂತೆ, ಹೈಸ್ಕೂಲ್ ಮೈದಾನಕ್ಕೆ ತೆಗೆದುಕೊಂಡು ಹೋಗಿರಿ ಎಂದು ಹೇಳುತ್ತಿದ್ದರು. 'ಇಲ್ಲಿ ರಸ್ತೆಯಲ್ಲಿ ಮಾರುವಂತಿಲ್ಲ ಅನೌನ್ಸ್ ಮಾಡಿದ್ದೇವೆ' ಎಂದು ಪಾಲಿಕೆಯವರು ಹೇಳುತ್ತಿದ್ದರಾದರೂ 'ನಾವು ಈಗಷ್ಟೇ ಬಂದಿದ್ದೇವೆ ಸ್ವಾಮಿ, ನಮಗೊಂದೂ



ಗೊತ್ತಿಲ್ಲ' ಎನ್ನುತ್ತಿದ್ದರು ತೋರಣ ಸೊಪ್ಪು ತಂದವರು.

ಇಂದು ಬೆಳಗಿನ ಜಾವ ಹೈಸ್ಕೂಲ್ ಮೈದಾನದ ಬಳಿ ಹೋಗಿ ನೋಡಿದೆ. ಕೆಲವರು ನಡುರಾತ್ರಿಗಯೇ ಅಲ್ಲಿಗೆ ಸ್ಥಳಾಂತರಿಸಿದರೆ, ಇನ್ನು ಕೆಲವರು ತುಂಬಾ ಕಷ್ಟದಿಂದ ಸ್ಥಳಾಂತರ ಮಾಡುತ್ತಿದ್ದರು. ಯಾರೋ ಓರ್ವ ವ್ಯಕ್ತಿ ತನ್ನ ಬೈಕ್‌ನಲ್ಲಿ ಸ್ಥಳಾಂತರಿಸಲು ಓರ್ವ ಮಹಿಳೆಗೆ ಸಹಕರಿಸುತ್ತಿದ್ದರೆ ಒಂದಷ್ಟು ನೆಲ್ಲಿ ಟೊಂಗೆಗಳು ರಸ್ತೆಯಲ್ಲಿ ಬಿದ್ದು, ನೆಲ್ಲಿಕಾಯಿಗಳೆಲ್ಲಾ ಉದುರಿ ಹೋಗಿ ಆ ಮಹಿಳೆ ಗೋಳಿಡುತ್ತಿದ್ದಳು. ಹೊಸದುರ್ಗದಿಂದ ಬಂದಿದ್ದ ಓರ್ವ ವ್ಯಕ್ತಿ '5,000 ರೂ. ಗಾಡಿ ಬಾಡಿಗೆ ಕೊಟ್ಟು ತಂದಿದ್ದೇನೆ, ಇಲ್ಲಿ ಆಚೀಚೆ ಮಾಡುವುದರಲ್ಲೇ ಎಲ್ಲಾ ಹಾಳಾಗುತ್ತಿವೆ' ಎಂದು ಅಲವತ್ತುಕೊಂಡ.

ನಾಗಮ್ಮ ಎಂಬ ಮಹಿಳೆ 'ಉಚ್ಚಂಗಿದುರ್ಗದಿಂದ ಬಂದಿದ್ದೇನೆ ಸ್ವಾಮಿ, ಈ ಮೈದಾನದಲ್ಲಿ ಸೊಪ್ಪು ಇಟ್ಕೊಂಡು ಮಲಗೋಣವೆಂದರೂ ಕಲ್ಲುಗಳು ಚುಚ್ಚಿದವು, ದೊಡ್ಡ ಸೊಳ್ಳೆಗಳು ಕಚ್ಚಿದವು, ನಮ್ಮ ಪಡಿಪಾಟಲ ಯಾರಿಗೆ ಹೇಳುವುದು' ಎಂದು ಕಣ್ಣೀರಿಟ್ಟಳು. 'ಅಲ್ಲಿ ರಸ್ತೆಯಲ್ಲಾಗಿದ್ದರೆ ಮಳೆ ಬಂದರೆ ಹೋಗಿ ನಿಲ್ಲಲು ಅಂಗಡಿ ಮುಂಗಟ್ಟುಗಳ ಕಟ್ಟೆಗಳಾದರೂ ಇರುತ್ತಿದ್ದವು, ಈ ಮೈದಾನದಲ್ಲಿ ಎಲ್ಲಿಗೆ ಹೋಗುವುದು, ಬಯಲಾದ್ದರಿಂದ ಇಲ್ಲಿ ಚಳಿಗಾಳಿ ಬೇರೆ, ಇದೇ ಕೊನೆ, ಇನ್ನು ಸೊಪ್ಪು ತೋರಣ ಮಾರಲು ತರುವುದೇ ಇಲ್ಲ' ಎಂದು ಆವರಗೊಳ್ಳ - ಕಕ್ಕರಗೊಳ್ಳ ಕಡೆಯಿಂದ ಬಂದ ಹೆಂಗಸರು ಸೆರಗಿಂದ ಕಣ್ಣೊರೆಸಿಕೊಂಡರು.

'ಕುಡಿಯಲು ನೀರು ಇಲ್ಲ ಪ್ರಕೃತಿ ಬಾಧೆ ತೀರಿಸಿಕೊಳ್ಳಲು ಕನಿಷ್ಠ ವ್ಯವಸ್ಥೆಯೂ ಇಲ್ಲ' ಎಂದಳು ಇನ್ನೋರ್ವ ಮಹಿಳೆ. ವರ್ಷದ ಮೂರ್ನಾಲ್ಕು ದೊಡ್ಡ ಹಬ್ಬಗಳ ಸಾಂಪ್ರದಾಯಿಕ ತಳಿರು ತೋರಣ, ಸೊಪ್ಪು ಕಂದುಗಳನ್ನು ಮಾರಲು ಬರುವ ಈ ಗ್ರಾಮೀಣ ಬಡ ಕೃಷಿ ಕೂಲಿ ಕಾರ್ಮಿಕರ ಸ್ಥಿತಿ ದಯನೀಯ. ಇವರೇನೂ ಇಲ್ಲಿ ಖಾಯಂ ಆಗಿ ವ್ಯಾಪಾರ ಕೂರುವವರಲ್ಲ. ಹಿಂದಿನ ಸಂಜೆ ಬಂದು ಮಾರನೇ ಮಧ್ಯಾಹ್ನ ವಾಪಸ್ ಹೋಗುವವರು. ಸ್ಥಳೀಯ ಅಂಗಡಿ ಮುಂಗಟ್ಟುಗಳವರು ಇವರಿಗೆ ತುಸು ಸಹಕರಿಸಬಹುದಿತ್ತು. ಆ ರಸ್ತೆಯಲ್ಲಿ ಅಂಗಡಿ ಮಾಡಿದ್ದೇವೆಂದರೆ ಅಪರೂಪಕ್ಕೆ ಇದು ಅನಿವಾರ್ಯ ಎಂಬುದನ್ನು ತಿಳಿಯಬಹುದಾಗಿತ್ತು.

'ಬೆಟ್ಟದಾ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದೊಡೆ ಎಂತಯ್ಯ...' ಎಂಬ ಅಕ್ಕಮಹಾದೇವಿಯವರ ವಚನ ಇಲ್ಲಿ ನೆನಪಾಗುತ್ತದೆ. ಹೈಸ್ಕೂಲು ಮೈದಾನದಲ್ಲೇ ಮಾರಾಟಕ್ಕೆ ಅವಕಾಶ ಎನ್ನುವುದಾದಲ್ಲಿ ತಾತ್ಕಾಲಿಕವಾಗಿಯಾದರೂ ಅವರಿಗೆ ಕುಡಿಯುವ ನೀರು, ಬೆಳಕು ಹಾಗೂ ಹೆಣ್ಣು ಮಕ್ಕಳು ಪ್ರಕೃತಿಬಾಧೆ ತೀರಿಸಿಕೊಳ್ಳಲು ತುಸು ವ್ಯವಸ್ಥೆಯನ್ನಾದರೂ ಮುಂದಿನ ದಿನಗಳಲ್ಲಿ ಮಾಡುವುದು ಒಳಿತು. ಹಾಗೆ ಬರುವ ಆ ಬಡ ಜನರಿಗೆ ಒಂದು ಹೊತ್ತಿನ ಆಹಾರ ವ್ಯವಸ್ಥೆಯನ್ನು ಯಾರಾದರೂ ಸ್ವಯಂ ಸೇವಾಸಂಸ್ಥೆಯವರು ಮಾಡುವಂತಾದಲ್ಲಿ ಅದು ಮಹೋಪಕಾರವಾಗುತ್ತದೆ ಎಂದು ಹಿರಿಯ ಪತ್ರಕರ್ತ ಎಚ್.ಬಿ.ಮಂಜುನಾಥ ಆಶಯ ವ್ಯಕ್ತಪಡಿಸಿದ್ದಾರೆ.

## ತುಳಸಿ ಕಲ್ಯಾಣ ನೋಡುವ...

ಬನ್ನಿ ಬನ್ನಿ ತುಳಸಿ ದೇವಿ ಕಲ್ಯಾಣ ನೋಡುವ/
ತನ್ನಿ ಹೃದಯದೊಳಗೆ ಭಕ್ತಿ ಸಂತೋಷದಿ ನೋಡುವ//ಪ//

ಹಸಿರು ಸೀರೆಯುಟ್ಟು ಸಿಂಗಾರವಾದ ತುಳಸಿಯ/
ನಸುನಗುತ ನಿಂತಿರುವ ಮೋಹನನ ರೂಪವ// ಅಪ//

ಬಾಳೆಕಂದು ಕಬ್ಬಿನ ಜಿಲ್ಲೆ ವೃಂದಾವನಕೆ ಕಟ್ಟುವ/
ಎಳೆಯ ಮಾವಿನೆಲೆಗಳ ತೋರಣವ ಹಾಕುವ//ಒಳಗಿನಿಂದ
ಶುದ್ಧಮಾಡು ಎಂದು ತಾಯಿಯ ಬೇಡುತ/ಹೊಳೆವ ರಂಗೋಲಿ
ಹಾಕಿ ಸಿಂಗಾರವ ಮಾಡುವ//1//

ತಲೆತಗ್ಗಿಸಿ ನಾಚಿ ವನಮಾಲೆ ಹಿಡಿದ ತುಳಸಿಯು/
ತಲೆ ಎತ್ತಿ ಕೆಂಪಾದವಳ ನೋಡುವ ಶ್ರೀ ಕೃಷ್ಣನು//
ಬೆಲೆಕಟ್ಟಲಾಗದ ಆನಂದದ ಸಂಭ್ರಮವು/
ನಲಿದು ನಲಿಸುವ ತುಳಸಿ ಕಲ್ಯಾಣದ ಸೊಬಗು//2//

ಭಕ್ತೆಯ ಸೇರುತ್ತಿರುವ ಭಕ್ತವತ್ಸಲನು/
ಭಕ್ತಿಯ ಸಾಕಾರ ರೂಪದಲ್ಲಿ ತುಳಸಿಯು//
ಮುಕ್ತಿ ಕೊಡುವ ಕರದಿಂದ ಕಟ್ಟಿ ಮಾಂಗಲ್ಯವನು/
ಭಕ್ತರಿಂದ ಪಡೆದನು ಪುಷ್ಪವೃಷ್ಟಿಯನು//3//

ಜಗತ್ತಿಗೆ ಕಲ್ಯಾಣಕರ ಶ್ರೀ ಕೃಷ್ಣನ ಕಲ್ಯಾಣವು/
ಭಗವಂತನ ಭಕ್ತೆಯ ಶಾಶ್ವತವಾದ ಬಂಧವು//
ಅಗಣಿತ ಲಕ್ಷ್ಮಿಯೆ ಶ್ರೀತುಳಸಿಯ ಒಳಗೂ/
ಭಗವಂತನ ಸೇವೆಗೆ ಸದಾ ಸಿದ್ಧಳು//4//

ಮದುಮಕ್ಕಳ ನೋಡಿ ಹೃದಯ ಕುಣಿದು ಬಾಗಿದೆ/
ವಧುವರರಲಿ ಭಕ್ತಿ ವಿಶ್ವಾಸ ಬೇಡಿದೆ//
ಮಧುರ ಮದುವೆಯೊಳಗೆ ಮುಳುಗಿ ಧನ್ಯವಾಗಿದೆ/
ಮಾಧವ ಬಾಲಗೋಪಾಲವಿಠಲ ಜಯವೆಂದಿದೆ//5//

- **ಡಾ. ರೂಪಶ್ರೀ ಶಶಿಕಾಂತ್**, ದಾವಣಗೆರೆ.

## ತುಳಸಿ ಹಬ್ಬದ ಸಂಭ್ರಮ

ಬನ್ನಿರೆಲ್ಲ ಬನ್ನಿರೆಲ್ಲ ತುಳಸಿ ಲಗ್ನಕೆ
ಸಡಗರ ಸಂಭ್ರಮ ಪಡುವುದಕೆ
ಸಂತಸದಿ ಸುಮಂಗಲಿಯರು ಸೇರೋಣ
ಉತ್ಥಾನ ದ್ವಾದಶಿ ಇಂದು ನಲಿಯೋಣ

ಗೋದುಳಿ ಶುಭ ಲಗ್ನದಿ
ಗೋಪದ್ಮ ಬಿಡಿಸಿ ಚಿತ್ತಾರದಿ
ಗೋವಿಂದ ತುಳಸಿಯರ ವಿವಾಹದಿ
ಹರುಷ ಪಡುತ್ತಾ ಮನದಿ

ಆಭರಣ ತುಳಸಿಗೆ ತೊಡಿಸಿ
ಆನಂದದಿ ಬೃಂದಾವನ ದಲ್ಲಿರಿಸಿ
ಆದಿ ಮೂರುತಿಯ ಪ್ರತಿಷ್ಠಾಪಿಸಿ
ಅಭಯ ನೀಡೆಮಗೆಂದು ನಮಿಸಿ

ನೆಲ್ಲಿ ಟೊಂಗೆ ಮಧ್ಯದಲ್ಲಿರಿಸಿ
ನೆಲ್ಲಿ ಆರತಿಯ ಬೆಳಗಿಸಿ
ನೆಮ್ಮದಿ ಶಾಂತಿ ನೀಡೆಂದು ಪ್ರಾರ್ಥಿಸಿ
ಮುದ್ದು ಬಾಲಕೃಷ್ಣ ತುಳಸಿಗೆ ನೈವೇದ್ಯ ಅರ್ಪಿಸಿ

ಕಾರ್ತಿಕ ಶುದ್ಧದ್ವದಶಿ ಮಂಗಳ ಸುದಿನ
ಕಾರುಣ್ಯ ಮೂರ್ತಿ ಕೃಷ್ಣ ತುಳಸಿ ಲಗ್ನ
ಕಾಪಾದೆಂದು ಕೃಷ್ಣ ಪರಮಾತ್ಮನ
ಕರ ಮುಗಿದು ಎಲ್ಲಾ ನಮಿಸುವ

- **ಕೋಮಲ ವಿ. ಕುಮಾರ್**, ದಾವಣಗೆರೆ.

## ಸಿರಿ ತುಳಸಿ

ಜಯ ಜಯ ಜಯ ಜಯ ರಾಮ ತುಳಸಿ
ಜಯ ಜಯ ಜಯ ಜಯ ಶ್ರೀಕೃಷ್ಣ ತುಳಸಿ
ಶ್ರೀ ತುಳಸಿ ಶ್ರೀಮನ್ನಾರಾಯಣ ತುಳಸಿ
ಶ್ರೀ ತುಳಸಿ ಸಿರಿದೇವಿ ಮಹಾಲಕ್ಷ್ಮಿ ತುಳಸಿ

ಕಾರ್ತೀಕ ಮಾಸ ಶುದ್ಧ ದ್ವಾದಶಿಯ ದಿನದಲ್ಲಿ
ಕೃಷ್ಣ ತುಳಸಿ ಕಲ್ಯಾಣವು ತುಳಸಿಯ ಕಟ್ಟೆಯಲ್ಲಿ...
ನಿದ್ದೆಯಿಂದೆದ್ದು ಬಂದ ಶ್ರೀಮನ್ನಾರಾಯಣ ನಲ್ಲಿ
ಭಾವುಕ ಭಕ್ತರ ಹರುಷವು ಮನೆ ಮನಗಳಲ್ಲಿ

ಬೆಟ್ಟದ ನೆಲ್ಲಿಕಾಯಿ ರೆಂಬೆ ತುಳಸಿಯ ಜೊತೆಯಲ್ಲಿ
ಮಾವಿನ ತೋರಣವು ಹೂ ಮಾಲೆಯ ಚೆಲುವಲ್ಲಿ
ಬೆಳಕಿನ ಸಾಲು ಸಾಲಿನಲಿ ಹಣತೆಯ ದೀಪವು
ಚೆಂದದ ಮಂಟಪವು ಚೆಲುವ ಸಿರಿ ಸೊಬಗಿನಲಿ

ಗೋದೊಳಿ ಲಗ್ನದ ಶುಭ ಮುಹೂರ್ತದಲ್ಲಿ...
ನಾರೀಮಣಿಯರು ಸಂಭ್ರಮ ಸಡಗರದಲ್ಲಿ..
ತುಳಸಿ ಶ್ರೀಕೃಷ್ಣ ಕಲ್ಯಾಣವು ಬಹು ವೈಭವದಲಿ..
ಅವಲಕ್ಕಿ ಬೆಲ್ಲ ಹಣ್ಣುಕಾಯಿ ನೈವೇದ್ಯವು ಅಲ್ಲಿ

ಅರಿಷಿಣ ಕುಂಕುಮದ ಪೂಜೆಯ ಮಾಡುತಾ...
ಭಕ್ತಿ ಭಾವದಲ್ಲಿ ಮಾಂಗಲ್ಯ ಭಾಗ್ಯವ ಬೇಡುತಾ
ಧಾತ್ರಿಯ ಸೊಡರಿನಲ್ಲಿ ತುಪ್ಪದಾರತಿ ಬೆಳಗುತಲಿ
ಹರಸು ನಮ್ಮಮ್ಮ ತುಳಸಿಮಾತೆ ನೀ ಎನ್ನುತಲಿ.

- **ವೀಣಾ ಕೃಷ್ಣಮೂರ್ತಿ**, ದಾವಣಗೆರೆ

# ಇಂದು, ದೇವ ಮಾನವರ ಮಾನ ರಕ್ಷಣೆಗೆ ಅವತರಿಸಿದ ದೇವಲ ಮಹರ್ಷಿ ಜಯಂತಿ

ತಮ್ಮ ಮಾನ ರಕ್ಷಣೆಗೆ ಪ್ರಾಣಿಗಳ ಚರ್ಮ, ಗಿಡದ ತೊಪ್ಪಲು ಆಶ್ರಯಿಸಿದ್ದ ದೇವ, ಮಾನವರ ಮಾನ ರಕ್ಷಣೆಗೆ ವಸ್ತ್ರ ಹಾಗೂ ಜ್ಞಾನ ದೀಕ್ಷೆಗೆ ಇರದ ಸೂತ್ರ ಒದಗಿಸಲು ಸಕಲರ ಅನನ್ಯ ಪ್ರಾರ್ಥನೆಗೆ ಶಿವನ ಚಿಚ್ಛಕ್ತಿಯಿಂದ ಕಾರ್ತಿಕ ಮಾಸ ಶುದ್ದ ದ್ವಾದಶಿಯಂದು ಪರಶಿವನ ಹಣೆಗಣ್ಣಿನಿಂದ ಅವತರಿಸಿ ತ್ರೈಲೋಕ್ಯದವರ ಮಾನರಕ್ಷಣೆಗೆ ವಸ್ತ್ರ, ಜ್ಞಾನ ದೀಕ್ಷೆಗೆ ಸೂತ್ರ ದೊರಕಿಸಿದವರು ದೇವಲ ಮಹರ್ಷಿಗಳು. ಇವರು ದೇವರ ಅಂಗ ಎಂದು ಕರೆಸಿಕೊಳ್ಳುವ ದೇವಾಂಗ ಜನರ ಮೂಲ ವಂಶಜರು.



ವ್ಯಾಸ ರಚಿತ ಬ್ರಹ್ಮಾಂಡ ದೇವಾಂಗ ಪುರಾಣದಂತೆ ಇವರು ಪ್ರಾಕೃತ ಅಂದರೆ ಹುಟ್ಟಿನಿಂದಲೇ ಬ್ರಾಹ್ಮಣರು. ಶ್ರೀ ರಾಮಲಿಂಗ, ಶ್ರೀ ಚೌಡೇಶ್ವರಿ ದೇವಿ ಇವರ ಆರಾಧ್ಯ ದೇವರು. ಬಹುತೇಕರು ರೇಷ್ಮೆ ಹಾಗೂ ಹತ್ತಿ ಬಟ್ಟೆ ನೇಕಾರರು. ವಿಜಯನಗರದ ಉಜ್ಜಯಿನಿ ಸಾಮ್ರಾಜ್ಯದಲ್ಲಿ ಅನೇಕರು ಯೋಧರೂ ಸಹ ಆಗಿದ್ದರು ಎಂದು ಹೇಳಲಾಗುತ್ತಿದೆ. ಶ್ರೀ ಗಾಯತ್ರಿ ಮಂತ್ರ ಮೂಲ ಮಂತ್ರವಾಗಿದ್ದು, ಜನಿವಾರ, ವಿಭೂತಿ, ಕುಂಕುಮ, ಗಂಧ ಧಾರಕರು.

ದೇವಲ ಮಹರ್ಷಿಗಳು ತದನಂತರದಲ್ಲಿ ಚಿತ್ರಯೋಗಿ, ವಿಧ್ಯಾದರ, ವರರುಚಿ, ಪುಷ್ಪದಂತ, ಬೇತಾಳ, ದೇವಶಾಲಿಗಳಾಗಿ ಅವತರಿಸಿ ಕೊನೆಯದಾಗಿ ವಿಶ್ವಕ್ಕೆ ಸಂಸ್ಕೃತಿ, ಧರ್ಮಾಚರಣೆಯ ವಿಧಾನಗಳ ವಚನಗಳನ್ನು ರಚಿಸಿದ ಆದ್ಯ ವಚನಕಾರ ದೇವರ ದಾಸಿಮಯ್ಯರಾಗಿ ಈಗಿನ ಯಾದಗಿರಿ ಜಿಲ್ಲೆಯ ಮುದನೂರಿ ನಲ್ಲಿ ಜನಿಸುತ್ತಾರೆ. ದಾಸಿಮಯ್ಯರಂತೆ ಶ್ರೀ ದೇವಲ ಮಹರ್ಷಿಗಳನ್ನು ಗುರುತಿಸುವ ಕಾರ್ಯ ಇನ್ನು ಹೆಚ್ಚು ಹೆಚ್ಚು ನಡೆಯಬೇಕಿದೆ ಎನ್ನುವ ಆಶಯ ಗದಗ-ಹೊಸಳ್ಳಿಯ ಬೂದೀಶ್ವರ ಶ್ರೀಗಳ ಹಾಗೂ ಸಕಲ ದೇವಾಂಗದವರದ್ದಾಗಿದೆ.

ಕರ್ನಾಟಕ, ಪಾಂಡಿಚೇರಿ, ಓರಿಸಾ, ತಮಿಳನಾಡು, ಆಂಧ್ರಪ್ರದೇಶ, ಆಸ್ಸಾಂ, ಉತ್ತರ ಪ್ರದೇಶ, ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ಗುಜರಾತ್, ಮಹಾರಾಷ್ಟ್ರ ಹಾಗೂ ಕೇರಳ ರಾಜ್ಯಗಳಲ್ಲಿ ಕೊಯಮತ್ತೂರಿನಂತಹ ನಗರಗಳಲ್ಲಿ ಈ ಸಮೂದಾಯದ ಜನರು ವಿವಿಧ ಹೆಸರುಗಳಿಂದ ಗುರುತಿಸಲ್ಪಡುತ್ತಿದ್ದು, ಬಹಳಷ್ಟು ಜನ ನೇಕಾರಿಕೆ ಉದ್ಯೋಗ ಆಶ್ರಯಿಸಿದವರು.

**-ಮನೋಹರ ಮಲ್ಲಾಡದ,**
ರಾಣೇಬೆನ್ನೂರು.

## ರಾಣೇಬೆನ್ನೂರು ಖನ್ನೂರ ವಿದ್ಯಾನಿಕೇತನದಲ್ಲಿ ರಾಜ್ಯೋತ್ಸವ



ರಾಣೇಬೆನ್ನೂರು, ನ.12- ಇಲ್ಲಿನ ಖನ್ನೂರ ವಿದ್ಯಾನಿಕೇತನ ಶಾಲೆಯಲ್ಲಿ 69ನೇ ಕನ್ನಡ ರಾಜ್ಯೋತ್ಸವ ಹಮ್ಮಿಕೊಳ್ಳಲಾಗಿತ್ತು. ಸಂಸ್ಥೆಯ ಅಧ್ಯಕ್ಷ ಡಾ. ಪ್ರವೀಣ ಎಂ. ಖನ್ನೂರ ಅವರು ಧ್ವಜಾರೋಹಣ ನೆರವೇರಿಸಿದರು.

ಶಾಲಾ ವಿದ್ಯಾರ್ಥಿಳಿಂದ ಭಾಷಣ ಹಾಗೂ ಕನ್ನಡ ನಾಡನ್ನು ಕುರಿತ ಸಮೂಹ ಗೀತೆ ಹಾಗೂ ನೃತ್ಯಗಳು ನಡೆದವು. ಸಂಸ್ಥೆಯ ಆಡಳಿತಾಧಿಕಾರಿ ನಾಗೇಶ ಮುರಡಣ್ಣ, ಪ್ರಾಂಶುಪಾಲರಾದ ಮನೀಶ್ ಅರಿಂಬಿಲ್ ಮತ್ತು ಸುಬ್ಬರಾವ ಕಟಕಮ್ ಉಪಸ್ಥಿತರಿದ್ದರು. ಕು. ಜಾನ್ಸಿ ಎನ್ ಸ್ವಾಗತಿಸಿದರು. ಕು. ಗಾಯತ್ರಿ ವಂದಿಸಿದರು. ಕು. ಚೇತನಾ ಹಿರೇಮಠ ಹಾಗೂ ಕು. ತನುಶ್ರೀ ಸುಂಕಾಪೂರ ನಿರೂಪಿಸಿದರು.

# ಚೀನಾದಲ್ಲಿ ಕಾರು ಹರಿಸಿ 35 ಜನರ ಸಾವು

ಬೀಜಿಂಗ್, ನ. 12 – ಚೀನಾದ ಜುಹಾಯ್ ನಗರದಲ್ಲಿ 62 ವರ್ಷದ ವ್ಯಕ್ತಿಯೋರ್ವ ತನ್ನ ಕಾರನ್ನು ಗುಂಪಿನ ಮೇಲೆ ಹರಿಸಿದ ಕಾರಣ 35 ಜನರು ಸಾವನ್ನಪ್ಪಿದ್ದಾರೆ ಹಾಗೂ 43 ಇತರರು ಗಾಯಗೊಂಡಿದ್ದಾರೆ ಎಂದು ಅಧಿಕೃತ ಮಾಧ್ಯಮಗಳು ವರದಿ ಮಾಡಿವೆ.

ಜುಹೈ ನಗರದಲ್ಲಿ ಚೀನಾದ ಪ್ರತಿಷ್ಠಿತ ವೈಮಾನಿಕ ಪ್ರದರ್ಶನ ನಡೆಯುತ್ತಿದೆ. ಇದೇ ವೇಳೆ, ಫ್ಯಾನ್ ಎಂಬ ಹೆಸರಿನ ವಿಚ್ಛೇದಿತ ವಾಹನ ಚಾಲಕ ಸೋಮವಾರ ರಾತ್ರಿ 7.48ರ ಸಮಯದಲ್ಲಿ ಕ್ರೀಡಾ ಕೇಂದ್ರದಲ್ಲಿ ಕಸರತ್ತು ನಡೆಸುತ್ತಿದ್ದ ಜನರ ಮೇಲೆ ವಾಹನ ಹರಿಸಿದ್ದಾನೆ. ಘಟನೆಯ ನಂತರ ಆತನನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಜಿನುವಾ ಸುದ್ದಿಸಂಸ್ಥೆ ವರದಿ ಮಾಡಿದೆ. ಇದು ಅಪಘಾತವೇ ಅಥವಾ ದಾಳಿಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

# ಗುತ್ತಿಗೆ ಮೀಸಲಾತಿಗೆ ಹಸಿರು ನಿಶಾನೆ

**(1ನೇ ಪುಟದಿಂದ)** ಆಧಾರದ ಮೇಲೆ ಗುತ್ತಿಗೆ ನೀಡಬಹುದಾಗಿದೆ ಎಂದು ಸೂಚಿಸಲಾಗಿದೆ.

ಈ ಮೂಲಕ ಅಲ್ಪಸಂಖ್ಯಾತರು ಮೀಸಲಾತಿ ವರ್ಗದಲ್ಲಿ ಅಲ್ಲದೆ, ಸಾಮಾನ್ಯ ವರ್ಗದಲ್ಲಿಯೂ ಅರ್ಹತೆ ಮೇಲೆ ಟೆಂಡರ್‌ಗಳನ್ನು ಪಡೆಯಬಹುದಾಗಿದೆ. ಎಸ್.ಸಿ., ಎಸ್.ಟಿ. ಸಮುದಾಯಕ್ಕೆ ಕಾಮಗಾರಿಗಳಲ್ಲಿ ಒಂದು ಕೋಟಿ ರೂ.ವರೆಗೆ ಗುತ್ತಿಗೆ ಪಡೆಯಲು ಸರ್ಕಾರ ಈಗಾಗಲೇ ಮೀಸಲಾತಿ ಕಲ್ಪಿಸಿದೆ, ಅದನ್ನು ಎರಡು ಕೋಟಿ ರೂ.ವರೆಗೆ ಹೆಚ್ಚಿಸಬೇಕೆಂಬ ಬೇಡಿಕೆ ಇದೆ.

ಇದರ ನಡುವೆ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸಚಿವರಾದ ಜಮೀರ್ ಅಹಮದ್ ಖಾನ್, ರಹೀಂ ಖಾನ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್, ತನ್ವೀರ್ ಸೇಠ್, ಸಲೀಂ ಅಹಮದ್, ಅಬ್ದುಲ್ ಜಬ್ಬಾರ್, ಎನ್.ಎ.ಹ್ಯಾರಿಸ್ ಸೇರಿದಂತೆ ಸಮುದಾಯದ ಎಲ್ಲಾ ಜನಪ್ರತಿನಿಧಿಗಳು ಮುಖ್ಯಮಂತ್ರಿ ಅವರಿಗೆ ಅಲ್ಪಸಂಖ್ಯಾತರಿಗೆ ಸರ್ಕಾರಿ ಗುತ್ತಿಗೆ ಕಾಮಗಾರಿಯಲ್ಲೂ ಮೀಸಲಾತಿ ಕಲ್ಪಿಸುವಂತೆ ಮನವಿ ಮಾಡಿಕೊಂಡಿದ್ದರು.

ಮನವಿಗೆ ಸ್ಪಂದಿಸಿದ ಸಿದ್ದರಾಮಯ್ಯ, ಶೇಕಡ 4ರಷ್ಟು ಮೀಸಲಾತಿ ಕಲ್ಪಿಸಲು ಅನುಮೋದನೆ ನೀಡಿದ್ದಲ್ಲದೆ, ಈ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆಗೆ ತಿದ್ದುಪಡಿ ತರಲು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೆ ಸೂಚನೆ ನೀಡಿದ್ದಾರೆ.

# ಬಾಂಗ್ಲಾ ದೇಶೀಯರ ನುಸುಳುವಿಕೆ ವಿರುದ್ಧ ಇ.ಡಿ. ಕ್ರಮ

ರಾಂಚಿ, ನ. 12 - ಅಕ್ರಮವಾಗಿ ಭಾರತಕ್ಕೆ ನುಸುಳುತ್ತಿರುವ ಬಾಂಗ್ಲಾದೇಶೀಯರಿಗೆ ಸಂಬಂಧಿಸಿದಂತೆ ಅಕ್ರಮ ಹಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ.) ಜಾರ್ಖಂಡ್ ಹಾಗೂ ಪಶ್ಚಿಮ ಬಂಗಾಳಗಳಲ್ಲಿ ದಾಳಿ ನಡೆಸಿದೆ. ಈ ವೇಳೆ ನಕಲಿ ಆಧಾರ್ ಹಾಗೂ ಪಾಸ್‌ಪೋರ್ಟ್‌ಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಜಾರ್ಖಂಡ್ ವಿಧಾನಸಭಾ ಚುನಾವಣೆಗೆ ಮೊದಲ ಹಂತದ ಮತದಾನ ನಡೆಯುವ ಮುನ್ನ ದಿನ ಈ ಕಾರ್ಯಾಚರಣೆ ನಡೆಸಲಾಗಿದೆ.

## ಲೋಕಶಕ್ತಿ ಪಕ್ಷದ ಅಧ್ಯಕ್ಷರಾಗಿ ದೇವೇಂದ್ರ ಸಿಂಗ್ ಬಘೇಲ್



ಆಗ್ರಾ, ನ.12- ಉತ್ತರ ಪ್ರದೇಶದ ಆಗ್ರಾದಲ್ಲಿ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ ದಿ. ರಾಮಕೃಷ್ಣ ಹೆಗಡೆಯವರು ಸ್ಥಾಪಿಸಿದ್ದ ಲೋಕ್ ಶಕ್ತಿ ಪಕ್ಷದ ರಾಷ್ಟ್ರೀಯ ಅಧಿವೇಶನ ನಡೆಯಿತು.

ಈ ಅಧಿವೇಶನದಲ್ಲಿ ಲೋಕ್ ಶಕ್ತಿ ಪಕ್ಷದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನಾಗಿ ಮಾಜಿ ಲೋಕಸಭಾ ಸದಸ್ಯರುಗಳಾದ ದೇವೇಂದ್ರ ಸಿಂಗ್ ಬಘೇಲ್ ಹಾಗೂ ಶ್ರೀಮತಿ ಸಾರಿಕಾ ಸಿಂಗ್ ಬಘೇಲ್‌ರನ್ನು ಆಯ್ಕೆ ಮಾಡಲಾಯಿತು ಎಂದು ಪಕ್ಷದ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ ವಿ. ಸ್ಥಾವರಮಠ್ ತಿಳಿಸಿದ್ದಾರೆ.


**ಅಡಿಕೆ ತೋಟ ಮಾರಾಟಕ್ಕಿದೆ**
ರಾಷ್ಟ್ರೀಯ ಹೆದ್ದಾರಿ 4 ಪಕ್ಕದಲ್ಲಿ ಇರುವ ಆನಗೋಡು ಹೋಬಳಿಯಲ್ಲಿ 2 1/2 ಎಕರೆ ಅಡಿಕೆ ತೋಟ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
96110 96435

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 40x60 East, 50x80 North, 40x60, 40x60 South ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಪ್ಲಂಬಿಂಗ್ ಕ್ಷೇತ್ರದಲ್ಲಿ ಅನುಭವ ಇದ್ದವರಿಗೆ ಮೊದಲ ಆದ್ಯತೆ.
ಸಪ್ತಗಿರಿ ಪೈಪ್ಸ್ ಅಂಡ್ ಟ್ಯಾಪ್ಸ್
ಹದಡಿ ರಸ್ತೆ, ದಾವಣಗೆರೆ.
98446 49626, 90080 58121

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಹೊಸದಾಗಿ ಆರಂಭವಾಗಿರುವ ವಾಟರ್ ಬಾಟಲ್ ಆಫೀಸ್‌ನಲ್ಲಿ ಕೆಲಸ ಮಾಡಲು. ವಿದ್ಯಾರ್ಹತೆ 10th
ಮೊ : 97384 75033

**ಬೇಕಾಗಿದ್ದಾರೆ**
ಮನೆ ಕೆಲಸ, ಅಡುಗೆ ಮತ್ತು ಮಗುವನ್ನು ನೋಡಿಕೊಳ್ಳಲು ಕೆಲಸದವರು ಬೇಕಾಗಿದ್ದಾರೆ. ಕೆಲಸದ ವೇಳೆ: ಬೆಳಿಗ್ಗೆ 8 ರಿಂದ ಸಂಜೆ 8ರವರೆಗೆ ತಿಂಗಳಿಗೆ 7 ಸಾವಿರ ಸಂಬಳ ಹಾಗು ವಾಸಕ್ಕೆ ಮನೆ ನಿಡಲಾಗುವುದು. ದಾವಣಗೆರೆ ಹೊಸ ಕೋರ್ಟ್ ಹತ್ತಿರ.
ಸಂಪರ್ಕಿಸಿ: 63660 20922

**ಮನೆಗಳು ಮಾರಾಟಕ್ಕಿವೆ**
SS 'B' Block ನಲ್ಲಿ ಶಿವಗಂಗಾ ಕಲ್ಯಾಣ ಮಂಟಪ ಹಿಂಭಾಗದಲ್ಲಿ 30x40 East, 30x40 West ಡುಪ್ಲೆಕ್ಸ್ ಹೊಸಮನೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆಗೆ ಸಂಪರ್ಕಿಸಿ**
ಲಹರಿ ಆಟೋಮೋಟಿವ್ಸ್
#856/17, ಸಬ್ ರಿಜಿಸ್ಟರ್ ಆಫೀಸ್ ಎದುರುಗಡೆ, ಪಿಬಿ ರಸ್ತೆ, ದಾವಣಗೆರೆ-2. ಕೆಳಗಿನ ಮಹಡಿ 1500 ಅಡಿಗಳು, 1ನೇ ಮಹಡಿ 3500 ಅಡಿಗಳು, ಖಾಲಿ ಜಾಗ 4400 ಚ.ಅ., ಸೈಟ್ ಸೈಜ್ 50x88
98444 20009, 90711 19996

**WANTED**
Computer Operator for Sales and Purchase
99009 71888
Sajjan Supermart
HKR Circle, Nittuvalli, Davanagere.

**ಜಮೀನು ಮಾರಾಟಕ್ಕಿದೆ**
ದಾವಣಗೆರೆಗೆ 12 ಕಿ.ಮೀ. ಹತ್ತಿರವಿರುವ 5 ಎಕರೆ ಅಡಿಕೆ, 2 ವರ್ಷದ ಗಿಡಗಳು, ಡ್ರಿಪ್ ವ್ಯವಸ್ಥೆ, ನೀರಿನ ವ್ಯವಸ್ಥೆ ಚೆನ್ನಾಗಿದೆ. ಸ್ವಂತ TC, 24 ಗಂಟೆ ವಿದ್ಯುತ್ ವ್ಯವಸ್ಥೆ ಇದೆ. ಪ್ರತಿ ಎಕರೆಗೆ 45 ಲಕ್ಷ ಜೀನಿಯಸ್ ಹತ್ತಿರ, ಹಿರೇತೊಗಲೇರಿ.
8217237969, 9741348103

**ಸೈಟ್ ಮಾರಾಟಕ್ಕಿದೆ**
ವಿದ್ಯಾನಗರ 2ನೇ ಬಸ್ ಸ್ಟಾಪ್ ಕಸ್ತೂರಿ ಬಾ ಸಮಾಜದ ಹತ್ತಿರ, ಪಶ್ಚಿಮ ದಿಕ್ಕಿನ ಸೈಜ್ 48x32
78929 37044

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕಾಲೇಜ್ ಒಂದರಲ್ಲಿ ಅಡುಗೆ ಭಟ್ಟರು ಮತ್ತು ಸಹಾಯಕರು ಬೇಕಾಗಿದ್ದಾರೆ.
ಮೊ. : 9980647014

**WANTED**
Store Incharge /Sales In Dry Fruits Shop.
**Bolas factory outlet**
Near Vidyarthi Bavan Circle, Hadadi Road.
99007 08999, 91130 91031

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರಿ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ಸೈಟುಗಳು ಮಾರಾಟಕ್ಕಿವೆ**
ಪಂಚಾಯಿತಿ ಡೋರ್ ನಂಬರ್, ದೂಡಾ ಫೈನಲ್ ಅಪ್ರೂವಲ್ ಸೈಟ್, ಕಡಿಮೆ ದರದಲ್ಲಿ ಸಿಗುತ್ತವೆ. 1 ಅಡಿಗೆ 980 ರೂಪಾಯಿಗೆ ಸಿಗಲಿವೆ.
86183 43463
86187 28546

**ಅಡುಗೆ ಮಾಡಲು ಬೇಕಾಗಿದ್ದಾರೆ**
ಸಸ್ಯಹಾರಿ ಅಡುಗೆ ಮಾಡಲು ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ಸ್ಥಳ : ಎಸ್.ಎಸ್. ಮಾಲ್ ಹತ್ತಿರ, ಆಸಕ್ತರು ಸಂಪರ್ಕಿಸಿ :
96113 15616

**ಮನೆ ಬಾಡಿಗೆಗೆ /ಲೀಸ್‌ಗಿದೆ**
ತೋಳಹುಣಸೆ ಗ್ರಾಮದಲ್ಲಿ ಎಲ್ಲಾ ಸೌಲಭ್ಯಗಳಿರುವ ಸುಸಜ್ಜಿತ ಮನೆ ಬಾಡಿಗೆಗೆ / ಲೀಸ್‌ಗಿದೆ. ಸಂಪರ್ಕಿಸಿ :
81472 84599

**NEED COMPUTER OPERATOR FOR CYBER SHOP**
Near Ram & Co Circle, DVG
70221 58935

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ
(ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
9740064163

**ಮಾಯಕೊಂಡ ಡಿ.ಟಿ.ಪಿ. ಮತ್ತು ಜೆರಾಕ್ಸ್ ಸೆಂಟರ್**
• G-ಸೇವಾಕೇಂದ್ರ • ಆನ್‌ಲೈನ್ ಸರ್ವೀಸ್ • ಇ-ಸ್ಟಾಂಪ್ ಪೇಪರ್ • ಕನ್ನಡ, • ಇಂಗ್ಲಿಷ್ ಟೈಪಿಂಗ್ • ಪ್ರಮಾಣ ಪತ್ರ • ಅಗ್ರಿಮೆಂಟ್ಸ್ • ವಾಟ್ಸ್‌ಅಪ್ ಪ್ರಿಂಟ್ ಔಟ್ • ಲ್ಯಾಮಿನಿಷನ್ • ಲಗ್ನ ಪತ್ರಿಕೆ • ಲೇಟರ್ಸ್ ಪ್ಯಾಡ್ • ಕಲರ್ ಜೆರಾಕ್ಸ್ ಮಾಡಿಕೊಡಲಾಗುತ್ತದೆ.
#181/1 ತೋ 3EF, ರವಿ ನರ್ಸಿಂಗ್ ಹೋಮ್, ಡಾ॥ ಕೆಂಚಪ್ಪ ಆಸ್ಪತ್ರೆ ಪಕ್ಕ ನರಸರಾಜ ರೋಡ್, ದಾವಣಗೆರೆ-577001.
ಮೊ. : 98444 38007

**HOUSE FOR RENT**
# 5628/D-23, "Shivaratna", 2 BHK, ground floor, 4th main, 6th cross (left) East facing, Near, Indoor Neharu Stadium, SS Badavane, 'B' block,
94489 29509

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಬೇಕಾಗಿದ್ದಾರೆ**
ಮಹಿಳಾ ಮತ್ತು ಪುರುಷರು ತಿಂಗಳ ಕಮೀಷನ್ ಆಧಾರದ ಮೇಲೆ ವ್ಯವಹರಿಸಲು ಬೇಕು. ಸಂಪರ್ಕಿಸಿ.
ಸ್ಕಂದ ಚಿಟ್ಸ್ ಫಂಡ್ಸ್ (ರಿ)
78997 75159

**ಮಳಿಗೆ ಬಾಡಿಗೆಗಿದೆ**
KSRTC ಹೊಸ ಬಸ್ ನಿಲ್ದಾಣದ ಪಕ್ಕ 4ಸೀಜನ್ ಹೋಟೆಲ್‌ನ ಎದುರಿಗೆ 2ನೇ ಮಹಡಿಯಲ್ಲಿ 18x50 ಅಳತೆ ಇರುವ ಕಛೇರಿಗೆ ಸೂಕ್ತವಾದ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿ:
99644 93693, 89705 26905

**To -Let**
2 Bhk for Rent
1st floor, Jayanagar, `B' block, 353/C2, behind granite shop, near DR circle, Davangere.
9902849693, 9538461751

**WANTED**
DAVANGERE
* Marketing Executive
* Ladies Accountant
* Godown Incharge
2 to 3 years experience
63620 23451, 97434 37003

**TELECALLERS REQUIRED FOR BANKING SERVICES**
CONTACT :
76761 03084

**ನೇತ್ರ ದಾನ ಶ್ರೇಷ್ಠ ದಾನ**

**For Sale City corporation No.165, North facing 20x30 Vacant plot clear titles at Ashok Nagar, Eragunta Village for Rs.12,00,000/-**
9916310226 / 9620253180

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು (ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿಗಳಿಗೆ ಫೈನಾನ್ಸ್ ನೀಡಲಾಗುವುದು
ಶಿವಪ್ಪಯ್ಯ ಸರ್ಕಲ್, ದಾವಣಗೆರೆ..
96860 22969

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification: Anything is OK
ಸ್ಥಳ: 1) K.R. Market, Davanagere 2) Charlie Pailwan Road, Davangere.
Contact: 99167 36057, 95350 51589

**ಸೈಟ್ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್ # 402, ಅಳತೆ 22x100 ಅಡಿ, ಉತ್ತರಾಭಿ ಮುಖ
96117 94684
86187 07118

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಜಮೀನು ಮಾರಾಟಕ್ಕಿದೆ**
ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ದುಗ್ಗಾವತಿ ಗ್ರಾಮಕ್ಕೆ ಸೇರಿದ ಹೈದ್ರಾಬಾದ್ ಟು ಮಂಗಳೂರು ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ವಾಣಿಜ್ಯ ಉಪಯೋಗಕ್ಕೆ ಅನುಕೂಲವಾದ 2 ಎಕರೆ 90 ಸೆಂಟ್ಸ್ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
99024 90165

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, PJ ಬಡಾವಣೆ ದಾವಣಗೆರೆ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವಸಂಗಮ ಚಿಟ್ಸ್ ಪ್ರೈ.ಲಿ.
ಶಿವಸಂಗಮ ಫೈನಾನ್ಸ್ (ರಿ)
ದಾವಣಗೆರೆ ಶಾಖೆಯಲ್ಲಿ ಮಾರ್ಕೆಟಿಂಗ್ & ರಿಕವರಿ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, ಪಿ.ಜೆ. ಬಡಾವಣೆ, 4ನೇ ಮೇನ್, ರಾಮ್ ಅಂಡ್ ಕೋ ಹತ್ತಿರ, ದಾವಣಗೆರೆ.
73533 29440, 81972 20933

**ಹೋಟೆಲ್ ಮಾರಾಟಕ್ಕಿದೆ**
ಲಕ್ಷ್ಮಿ ಪ್ಲೋರ್ ಮಿಲ್ ಹತ್ತಿರ, ದಾವಣಗೆರೆ - 4.
84948 20288

**ತಕ್ಷಣ ಬೇಕಾಗಿದ್ದಾರೆ**
25 ವರ್ಷದೊಳಗಿನ ಯುವಕ/ ಯುವತಿಯರು ದಾವಣಗೆರೆ ನ್ಯೂರೋಥೆರಪಿ ಕೇಂದ್ರದಲ್ಲಿ ಕೆಲಸ, ಉಚಿತ ತರಬೇತಿ, 9 ರಿಂದ 12 ಸಾವಿರ ಸಂಬಳ, ಉಚಿತ ವಸತಿ ಆಸಕ್ತರು ಇಂದೇ ಸಂಪರ್ಕಿಸಿ.
99726 00713

# ಬೈಪಾಸ್ ರಸ್ತೆ, ಸರ್ಕಾರಿ ಡಿಗ್ರಿ ಕಾಲೇಜು ಮಂಜೂರಾತಿಗೆ ಒತ್ತಾಯ



**ಮಲೇಬೆನ್ನೂರಿನಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ ಹರೀಶ್**

ಮಲೇಬೆನ್ನೂರು, ನ. 12 - ಮಲೇಬೆನ್ನೂರು ಪಟ್ಟಣದ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲರೂ ಸೇರಿ ಗಮನ ಹರಿಸೋಣ, ಈ ನಿಟ್ಟಿನಲ್ಲಿ ಪುರಸಭೆ ಸದಸ್ಯರು ಚಿಂತನೆ ಮಾಡಬೇಕು. ನಾನು ನಿಮ್ಮ ಜೊತೆ ಇರುತ್ತೇನೆಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ಇಲ್ಲಿನ ಪುರಸಭೆ ಕಛೇರಿ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಪಟ್ಟಣಕ್ಕೆ ಬೈಪಾಸ್ ರಸ್ತೆ ಮತ್ತು ಸರ್ಕಾರಿ ಡಿಗ್ರಿ ಕಾಲೇಜ್ ತುಂಬಾ ಅವಶ್ಯವಿದ್ದು. ಇದಕ್ಕಾಗಿ ನಾವೆಲ್ಲರೂ ಸೇರಿ ಪ್ರಯತ್ನಿಸೋಣ. ಏಕೆಂದರೆ, ಮಲೇಬೆನ್ನೂರು ಸೇರಿದಂತೆ ಸುತ್ತ-ಮುತ್ತಲಿನ ಹಳ್ಳಿಗಳ ವಿದ್ಯಾರ್ಥಿಗಳು ಸುತ್ತಮುತ್ತಲಿನ ಡಿಗ್ರಿ ಓದಲು ಹೊನ್ನಾಳಿ, ಹರಿಹರಕ್ಕೆ ಹೋಗುತ್ತಿದ್ದಾರೆ. ಮಲೇಬೆನ್ನೂರುನಲ್ಲೇ ಸರ್ಕಾರಿ ಡಿಗ್ರಿ ಕಾಲೇಜು ಆರಂಭವಾದರೆ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗಲಿದೆ. ಡಿಗ್ರಿ ಕಾಲೇಜು ಮಂಜೂರು ಮಾಡುವಂತೆ ಮತ್ತು ಮಲೇಬೆನ್ನೂರು ಪಟ್ಟಣದ ಅಭಿವೃದ್ಧಿಗೆ ಸ್ವಲ್ಪವಾದರೂ ವಿಶೇಷ ಅನುದಾನ ನೀಡುವಂತೆ ಸರ್ಕಾರದ ಮೇಲೆ ಒತ್ತಡ ಹಾಕಲು ಪುರಸಭೆ ಸದಸ್ಯರು ನಿಯೋಗ ತರಳಬೇಕು, ನೀವು ಬಯಸಿದರೆ ನಾನು ನಿಮ್ಮ ಜೊತೆ ಬರುತ್ತೇನೆಂದು ಶಾಸಕ ಹರೀಶ್ ಹೇಳಿದರು.

ಅಪೂರ್ಣಗೊಂಡಿರುವ ಶವಾಗಾರ ಮತ್ತು ಕಾಂಪೌಂಡ್ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಪುರಸಭೆ ಮುಖ್ಯಾಧಿಕಾರಿಗೆ ಸೂಚಿಸಿದ ಶಾಸಕರು ಬಂದಿರುವ ಅನುದಾನದಲ್ಲಿ ಕಾಮಗಾರಿಗಳ ಗುಣಮಟ್ಟ ಕಾಪಾಡಿ ಮತ್ತು ಶ್ರಮಿಕ ವರ್ಗ ಹಾಗೂ ಸ್ಲಂ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ ಕೊಡಿ ಎಂದು ಸದಸ್ಯರಿಗೆ ತಿಳಿಸಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಪುರಸಭೆ ಸದಸ್ಯ ಗೌಡ್ರ ಮಂಜಣ್ಣ ಅವರು ಕಳೆದ ಅವಧಿಗೆ ಹೋಲಿಕೆ ಮಾಡಿದರೆ ಈ ಅವಧಿಯಲ್ಲಿ ಉತ್ತಮ ಅನುದಾನ ಬಂದಿದ್ದು, ನಗರೋತ್ಥಾನ ಯೋಜನೆಯಡಿ 1 ಕೋಟಿ ರೂ. ಅನುದಾನದಲ್ಲಿ ಕಾಮಗಾರಿ ನಡೆದಿವೆ.

66 ಕೋಟಿ ರೂ. ವೆಚ್ಚದಲ್ಲಿ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ಕಾಮಗಾರಿ ಆರಂಭಗೊಂಡಿದೆ ಎಂದರು.

ಪುರಸಭೆ ಸದಸ್ಯ ನಯಾಜ್ ಮಾತನಾಡಿದರು. ಪುರಸಭೆ ಪ್ರಭಾರಿ ಅಧ್ಯಕ್ಷೆ ಶ್ರೀಮತಿ ನಪ್ಸಿಯಾ ಬಾನು ಚಮನ್ ಷಾ, ಸ್ಥಾಯಿ ಸಮಿತಿ ಅಧ್ಯಕ್ಷ ಬಿ. ಮಂಜುನಾಥ್, ಮುಖ್ಯಾಧಿಕಾರಿ ಭಜಕ್ಕ, ಆಶ್ರಯ ಸಮಿತಿ ಸದಸ್ಯ ಪೂಜಾರ್ ನಾರಾಯಣಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್. ಶಿವಕುಮಾರ್, ಪಿಎಸಿಎಸ್ ಅಧ್ಯಕ್ಷ ಯೂನೂಸ್, ಸರ್ಕಾರಿ ಕಾಲೇಜು ಉಪಾಧ್ಯಕ್ಷ ನಯಾಜ್ ಎಸ್‌ಡಿಎಂಸಿ ಅಧ್ಯಕ್ಷ ಓ.ಜಿ. ಮಂಜುನಾಥ್, ಜಿ.ಪಿ. ಹನುಮಗೌಡ, ಪುರಸಭೆ ಇಂಜಿನಿಯರ್ ರಾಘವೇಂದ್ರ, ಅಧಿಕಾರಿಗಳಾದ ಉಮೇಶ್ ದಿನಕರ್, ನವೀನ್, ಶಿವರಾಜ್ ಸೇರಿದಂತೆ, ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

ಪುರಸಭೆ ಸದಸ್ಯ ಸಾಬೀರ್ ಅಲಿ ಸ್ವಾಗತಿಸಿದರು. ಬೀರಲಿಂಗೇಶ್ವರ ಬಾಲಕರ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಸಿ. ಜಯ್ಯಣ್ಣ ನಿರೂಪಿಸಿದರು.

# ಕರ್ನಾಟಕವನ್ನೇ ಖಬರಸ್ಥಾನ್ ಎಂದು ವಕ್ಫ್‌ಗೆ ಕೊಟ್ಟು ಬಿಡಿ



ದಾವಣಗೆರೆ, ನ.12 - ಪ್ರತಿದಿನ ಆ ಜಮೀನು ವಕ್ಫ್‌ಗೆ ಹೋಯಿತು, ಈ ಜಮೀನು ವಕ್ಫ್‌ಗೆ ಹೋಯಿತು ಎಂದು ಮಾಧ್ಯಮಗಳಲ್ಲಿ ವರದಿ ಬರುತ್ತಿದೆ. ಪ್ರತಿನಿತ್ಯ ಹೀಗೆ ಮಾಡುವ ಬದಲು, ಇಡೀ ಕರ್ನಾಟಕವನ್ನೇ ಖಬರಸ್ಥಾನ ಎಂದು ಘೋಷಿಸಿ ವಕ್ಫ್‌ಗೆ ಕೊಟ್ಟು ಬಿಡಲಿ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಕಿಡಿ ಕಾರಿದ್ದಾರೆ.

ಪಿ.ಜೆ. ಬಡಾವಣೆಯ 4 ಎಕರೆ 13 ಗುಂಟೆ ಪ್ರದೇಶವನ್ನು ವಕ್ಫ್ ಆಸ್ತಿ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ಅವರು ಸ್ಥಳಕ್ಕೆ ಭೇಟಿ ನೀಡಿ ಸಾರ್ವಜನಿಕರ ಅಹವಾಲು ಆಲಿಸಿದರು.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸುಮಾರು 565 ಕೋಟಿ ರೂ. ಬೆಲೆ ಬಾಳುವ ಪಿ.ಜೆ. ಬಡಾವಣೆ ಆಸ್ತಿಯನ್ನು ವಕ್ಫ್ ಬೋರ್ಡ್‌ಗೆ ನೀಡಲಾಗಿದೆ ಎಂದರು.

ಸುಮಾರು 70 ವರ್ಷಗಳ ಹಿಂದೆ ಪ್ರಿನ್ಸ್ ಜಯಚಾಮರಾಜೇಂದ್ರ ಒಡೆಯರ್ ಹೆಸರಿನಲ್ಲಿ ರೂಪಿಸಲಾಗಿದ್ದ ಬಡಾವಣೆಯನ್ನೇ ವಕ್ಫ್ ಮಂಡಳಿಗೆ ಕೊಡಲಾಗಿದೆ ಎನ್ನುವುದಾದರೆ, ಸಚಿವ ಜಮೀರ್ ಅಹಮದ್ ಗ್ಯಾಂಗ್‌ಗೆ ಎಷ್ಟು ದುರಹಂಕಾರ ಹಾಗೂ ಕೊಬ್ಬು ಇರಬೇಕು? ಎಂದು ಅಶೋಕ್ ಪ್ರಶ್ನಿಸಿದರು.

ವಕ್ಫ್ ವರ್ತನೆಗೆ ಜನ ನಿತ್ಯ ಛೀಮಾರಿ ಹಾಕುತ್ತಿದ್ದಾರೆ, ರೈತರು ಹೋರಾಟ ಮಾಡುತ್ತಿದ್ದಾರೆ. ಇಷ್ಟಾದರೂ, ದಾವಣಗೆರೆ ನಗರದ ಹೃದಯ ಭಾಗದಲ್ಲಿರುವ ನೂರಾರು ಕೋಟಿ ರೂ. ಬೆಲೆಯ ಜಮೀನು ಕಬಳಿಕೆ ಮಾಡಲು ಹೊರಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಕ್ಫ್ ಜಮೀನಿಗಾಗಿ ಇನ್ನು ಮುಂದೆ ನೋಟಿಸ್ ಕೊಡುವುದಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಆದರೆ, ನೋಟಿಸ್ ಕೊಟ್ಟರೂ, ಕೊಡದಿದ್ದರೂ ಏನೂ ವ್ಯತ್ಯಾಸ ಆಗುವುದಿಲ್ಲ. ಪಹಣಿಯ ಕಾಲಂ 9 ಹಾಗೂ 11ರಲ್ಲಿರುವ ವಕ್ಫ್ ಮಾಲೀಕತ್ವ ತೆಗೆಯಬೇಕಿದೆ. ಸಿದ್ದರಾಮಯ್ಯ ಅವರು ಈ ಅಂಶ ಬಿಟ್ಟು ಉಳಿದೆಲ್ಲ ಕಥೆ ಹೇಳುತ್ತಿದ್ದಾರೆ. ಈ ಬಗ್ಗೆ ನಿರ್ಧಾರವಾಗುವ ವರೆಗೂ ನಾವು ಹೋರಾಟ ನಡೆಸುತ್ತೇವೆ ಎಂದರು.

**ಪಿ.ಜೆ. ಬಡಾವಣೆ ವಕ್ಫ್ ಆಸ್ತಿ ಎಂದು ನಮೂದಿಸಿರುವುದಕ್ಕೆ ಆರ್.ಅಶೋಕ್ ಆಕ್ರೋಶ**

ಸಂವಿಧಾನದ ಪ್ರಕಾರ ಮುಸ್ಲಿಮರಿಗೆ ಧರ್ಮದ ಆಧಾರದ ಮೇಲೆ ಮೀಸಲಾತಿ ಕಲ್ಪಿಸಲು ಬರುವುದಿಲ್ಲ. ಆದರೂ, ಗುತ್ತಿಗೆಯಲ್ಲಿ ಶೇ.4ರ ಮೀಸಲಾತಿ ಕೊಡಲು ಸರ್ಕಾರ ಮುಂದಾಗಿದೆ. ಸಂವಿಧಾನವನ್ನೇ ಲೆಕ್ಕಿಸುವುದಿಲ್ಲ ಎಂದ ಮೇಲೆ, ಇಡೀ ಕರ್ನಾಟಕವನ್ನೇ ಖಬರಸ್ಥಾನ ಎಂದು ಘೋಷಿಸಿ, ಇಡೀ ಕರ್ನಾಟಕವನ್ನೇ ವಕ್ಫ್ ಬೋರ್ಡ್‌ಗೆ ದಾನ ಮಾಡಿ ಬಿಡಿ ಎಂದವರು ಕಿಡಿ ಕಾರಿದರು.

ಉಪ ಚುನಾವಣೆ ಹಿನ್ನೆಲೆಯಲ್ಲಿ ನೋಟಿಸ್ ವಾಪಸ್ ಪಡೆಯುವ ನಾಟಕ ಮಾಡಲಾಗುತ್ತಿದೆ. ಚುನಾವಣೆ ನಂತರ ಮತ್ತೆ ನೋಟಿಸ್ ಕೊಡಲಿದ್ದಾರೆ. ರೈತರ ಜಾಗ, ದೇವಸ್ಥಾನ, ಮಠ ಮಂದಿರಗಳ ಜಾಗವೆಲ್ಲವೂ ವಕ್ಫ್ ಪಾಲಾಗಲಿದೆ.

ಇಡೀ ಕರ್ನಾಟಕದ ಜನ ಒಂದಾಗದಿದ್ದರೆ, ಸಿದ್ದರಾಮಯ್ಯ ಅವರು ಕರ್ನಾಟಕವನ್ನೇ ಮಿನಿ ಪಾಕಿಸ್ತಾನ ಮಾಡಲಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಜೆಡಿಎಸ್ ನಾಯಕ ಹಾಗೂ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳು ವಿಫಲವಾಗಿವೆ. ಈ ವಿಷಯದಿಂದ ಜನರ ಗಮನ ಬೇರೆಡೆ ಸೆಳೆಯಲು ದಿಕ್ಕು ತಪ್ಪಿಸುವ ಕುತಂತ್ರದ ಕೆಲಸವನ್ನು ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ ಸರ್ಕಾರ ವಹಿಸಿದೆ ಎಂದು ಆರೋಪಿಸಿದರು. ಇನ್ನಾದರೂ ಸಂಬಂಧಪಟ್ಟ ಇಲಾಖೆಯವರು ವಕ್ಫ್ ಆಸ್ತಿ ಎಂದು ನಮೂದಿಸಿರುವುದನ್ನು ವಾಪಸ್ ಪಡೆಯಲು ಕ್ರಮ ತೆಗೆದುಕೊಳ್ಳಬೇಕು. ಇಲ್ಲವಾದರೆ ವಾತಾವರಣ ಕೆಡಲಿದೆ ಎಂದವರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ, ಪರಿಷತ್ ಸದಸ್ಯ ರವಿಕುಮಾರ್, ಪಾಲಿಕೆ ವಿಪಕ್ಷ ನಾಯಕ ಕೆ. ಪ್ರಸನ್ನ ಕುಮಾರ್, ಪಾಲಿಕೆ ಸದಸ್ಯ ಎಸ್.ಟಿ. ವೀರೇಶ್, ಮುಖಂಡರಾದ ವೀರೇಶ್ ಹನಗವಾಡಿ, ಬಿ.ಎಸ್. ಜಗದೀಶ್, ಅಣ್ಣೇಶ್, ಶ್ರೀನಿವಾಸ ದಾಸಕರಿಯಪ್ಪ, ಜಿ.ಎಸ್. ಅನಿತ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಅರ್ಜಿ ಸಲ್ಲಿಸದೇ ಪಿ.ಜೆ. ಬಡಾವಣೆ ಜಾಗ ಕೊಟ್ಟಿದ್ದಾರೆ

ಪಿ.ಜೆ. ಬಡಾವಣೆಯ ಜಾಗ ತನ್ನದು ಎಂದು ವಕ್ಫ್ ಅರ್ಜಿ ಸಲ್ಲಿಸಿಲ್ಲ ಎಂದು ಅದರ ಅಧಿಕಾರಿಗಳು ಹೇಳುತ್ತಿದ್ದಾರೆ. ಉದ್ದೇಶ ಪೂರ್ವಕ ವಾಗಿ ಜನರ ನೆಮ್ಮದಿ ಕೆಡಿಸಲು ಸರ್ಕಾರ ಇಂತಹ ಹುನ್ನಾರ ನಡೆಸುತ್ತಿದೆ ಎಂದು ಜೆಡಿಎಸ್ ನಾಯಕ ಹೆಚ್.ಎಸ್. ಶಿವಶಂಕರ್ ಹೇಳಿದ್ದಾರೆ. 1940ರಲ್ಲಿ ನಗರಸಭೆಯಿಂದ ಬಡಾವಣೆ ರೂಪಿಸಿ ನಿವೇಶನಗಳನ್ನು ಮಂಜೂರು ಮಾಡಲಾಗಿದೆ. ಹೀಗಿದ್ದರೂ ವಕ್ಫ್ ಆಸ್ತಿ ಎಂದು ಹೇಳಲಾಗಿದೆ. ಈ ಬಗ್ಗೆ ತಾಲ್ಲೂಕು ಕಚೇರಿಗೆ ಕರೆ ಮಾಡಿ ವಿಚಾರಿಸಿದರೆ, ತಹಶೀಲ್ದಾರ್ ಫೋನ್ ಎತ್ತುತ್ತಿಲ್ಲ ಎಂದವರು ಹೇಳಿದರು.

# ಗುಮ್ಮನೂರು ಮಲ್ಲಿಕಾರ್ಜುನ್ ಹೇಳಿಕೆ ಸತ್ಯಕ್ಕೆ ದೂರವಾದುದು : ಕೆ. ಉಚ್ಚಂಗೆಪ್ಪ

ದಾವಣಗೆರೆ, ನ.12- ವಾಲ್ಮೀಕಿ ಸಮಾಜದ ಜಿಲ್ಲಾಧ್ಯಕ್ಷ ಬಿ. ವೀರಣ್ಣ ಹಾಗೂ ವಾಲ್ಮೀಕಿ ವಿದ್ಯಾರ್ಥಿ ನಿಲಯದ ಕುರಿತಂತೆ ವಕೀಲ ಗುಮ್ಮನೂರು ಮಲ್ಲಿಕಾರ್ಜುನ್ ಮಾಡಿರುವ ಆರೋಪ ಸತ್ಯಕ್ಕೆ ದೂರವಾದುದು ಎಂದು ವಾಲ್ಮೀಕಿ ಸಮಾಜದ ಜಿಲ್ಲಾ ಉಪಾಧ್ಯಕ್ಷ ಕೆ. ಉಚ್ಚಂಗೆಪ್ಪ ಸ್ಪಷ್ಟನೆ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಸಂಘ-ಸಂಸ್ಥೆ, ಸಮಾಜದ ಪದಾಧಿಕಾರಿ ಗಳನ್ನು ಸರ್ವ ಸದಸ್ಯರ ಸಭೆ ಕರೆದು ಚರ್ಚಿಸಿ, ಸರ್ವಾನುಮತದಿಂದ ಆಯ್ಕೆ ಮಾಡಲಾಗುತ್ತದೆ. ಅದರಂತೆ ಬಿ. ವೀರಣ್ಣ ಅವರನ್ನೂ ಸಹ ಆಯ್ಕೆ ಮಾಡಲಾಗಿದೆಯೇ ಹೊರತು, ಏಕಪಕ್ಷೀಯ ತೀರ್ಮಾನದಿಂದ ಅಲ್ಲ ಎಂದು ಪ್ರತಿಪಾದಿಸಿದರು. ಕಾರ್ಯದರ್ಶಿ ಶ್ಯಾಗಲೆ ಮಂಜುನಾಥ್, ಮುಖಂಡರಾದ ಸಿರಿಗೆರೆ ರಂಗಪ್ಪ ಮಾತನಾಡಿದರು.

ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕ ಗುಮ್ಮನೂರು ಶಂಭುಲಿಂಗಪ್ಪ, ಮಹೇಶ್ ಪೈಲ್ವಾನ್, ಆವರಗೆರೆ ಸುರೇಶ್, ಫಣಿಯಾಪುರ ಲಿಂಗರಾಜು, ಹದಡಿ ರಾಜಪ್ಪ ಸೇರಿದಂತೆ ಇತರರು ಇದ್ದರು.

# ಜಲಜೀವನ್ ಮಿಷನ್ ಕಾಮಗಾರಿ ಗುಣಮಟ್ಟದ್ದಾಗಿರಲಿ : ಸಿಇಓ ಸುರೇಶ್ ಸೂಚನೆ



ಜಗಳೂರು, ನ. 12 - ತಾಲ್ಲೂಕಿನ ದೊಣೆಹಳ್ಳಿ ಗ್ರಾಮಕ್ಕೆ ಜಿ.ಪಂ. ಸಿಇಓ ಸುರೇಶ್ ಹಿಟ್ನಾಳ್ ದಿಢೀರ್ ಭೇಟಿ ನೀಡಿ ಜಲಜೀವನ್ ಮಿಷನ್ ಪೈಪ್ ಲೈನ್, ನಳ ಕಾಮಗಾರಿ ವೀಕ್ಷಿಸಿ ಮಾತನಾಡಿದರು.

ಸಿಮೆಂಟ್ ಕಾಮಗಾರಿ ಗುಣಮಟ್ಟದ್ದಾಗಿರಲಿ ನಳದ ತಳಭಾಗದಲ್ಲಿ ನೀರು ಸೋರಿಕೆಯಾಗಬಾರದು, ಉಳಿದ ಹಳ್ಳಿಗಳಲ್ಲಿಯೂ ತಾಂತ್ರಿಕ ದೋಷ ಸರಿಪಡಿಸಿಕೊಳ್ಳಬೇಕು ತಂತ್ರಜ್ಞರ ಸಲಹೆ ಪಡೆದು ಕಾಮಗಾರಿ ಪೂರ್ಣಗೊಳಿಸಿ ಗ್ರಾಮ ಪಂಚಾಯಿತಿಗೆ ಸುಪರ್ದಿಗೆ ನೀಡಬೇಕು ಎಂದು ಗುತ್ತಿಗೆದಾರರು ಹಾಗೂ ಎಇಇ ಸಾಧಿಕ್ ಉಲ್ಲಾ ಅವರಿಗೆ ಸೂಚಿಸಿದರು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಹೊಸ ಹಟ್ಟಿಯ ಅಂಬೇಡ್ಕರ್ ವಸತಿ ಶಾಲೆಗೆ ಭೇಟಿ ನೀಡಿ ಮೆನು ಚಾರ್ಟ್ ಪ್ರಕಾರ ಊಟ ಪೂರೈಕೆ ಮಾಡಬೇಕು.ಶಾಲಾ ಆವರಣದಲ್ಲಿ ಸುಸಜ್ಜಿತ ಆಟದ ಮೈದಾನವನ್ನು ಗ್ರಾಮ ಪಂಚಾಯಿತಿಯಿಂದ ಸ್ವಚ್ಛತೆಗೊಳಿಸಿ ಕ್ರೀಡಾಂಗಣ ನಿರ್ಮಾಣ ಮಾಡಿಕೊಳ್ಳಲು ಮತ್ತು ಎಸ್ ಎಸ್ ಎಲ್ ಸಿ ಪರೀಕ್ಷೆ ಫಲಿತಾಂಶಕ್ಕೆ ಒತ್ತುಕೊಡಲು ತಿಳಿಸಿದರು.

ಈ ಸಂದರ್ಭದಲ್ಲಿ ತಾ.ಪಂ. ಇಓ ಕೆಂಚಪ್ಪ, ಕುಡಿಯುವ ನೀರು ನೈರ್ಮಲ್ಯ ಇಲಾಖೆ ಎಇಇ ಸಾಧಿಕ್ ಉಲ್ಲಾ, ಪ್ರಾಂಶುಪಾಲ ಅಮರೇಶ್, ಪಿಡಿಓ ಕೊಟ್ರೇಶ್ ಇದ್ದರು.



# ಮಲೇಬೆನ್ನೂರು : ಹೆದ್ದಾರಿ ಗುಂಡಿಗಳನ್ನು ಮುಚ್ಚಲು ಮುಂದಾದ ಲಯನ್ಸ್ ಕ್ಲಬ್

ಮಲೇಬೆನ್ನೂರು, ನ. 12 - ಪಟ್ಟಣದಲ್ಲಿ ಹಾಯ್ದು ಹೋಗಿರುವ ಶಿವಮೊಗ್ಗ ಹದ್ದಾರಿ ದೊಡ್ಡ ದೊಡ್ಡ ಗುಂಡಿಗಳಿಂದ ಕೂಡಿದ್ದು, ರಸ್ತೆ ಸಂಪುರ್ಣವಾಗಿ ಹದಗೆಟ್ಟು ಹೋಗಿದೆ.

ನಿತ್ಯ ಸಾವಿರಾರು ವಾಹನಗಳ ಸಂಚರಿಸುವ ಮತ್ತು ಶಿವಮೊಗ್ಗ, ಮೈಸೂರು ಮಂಗಳೂರು ಹಾಗೂ ಹರಿಹರ ದಾವಣಗೆರೆ, ಹಾವೇರಿ ಹೊಸಪೇಟೆ ನಗರಗಳಿಗೆ ಸಂಪರ್ಕಿಸುವ ರಸ್ತೆ ಇದಾಗಿದ್ದು ಇಂತಹ ಪ್ರಮುಖ ರಸ್ತೆಯಲ್ಲಿ ಮಲೇಬೆನ್ನೂರಿನಿಂದ ಕುಂಬಳೂರುವರೆಗೆ ಮತ್ತು ನಂದಿತಾವರೆಯಿಂದ ಹರಿಹರ ನಗರದವರೆಗೆ ಸಾಕಷ್ಟು ಗುಂಡಿಗಳು ಬಿದ್ದವೆ.

ಈ ಬಗ್ಗೆ ಲೋಕೋಪಯೋಗಿ ಇಲಾಖೆಗೆ ಮತ್ತು ಜನಪ್ರತಿನಿಧಿಗಳಿಗೆ ಸಾಕಷ್ಟು ಮನವಿ ಮಾಡಿದ್ದರೂ ಪ್ರಯೋಜನವಾಗದ ಕಾರಣ ಮಲೇಬೆನ್ನೂರು ಲಯನ್ಸ್ ಜ್ಲಬ್ ವತಿಯಿಂದ ಹೆದ್ದಾರಿ ಗುಂಡಿಗಳಿಗೆ ಕಂಕರ ಮಣ್ಣು ಹಾಕುವ ಕೆಲಸವನ್ನು ಮಂಗಳವಾರ ಆರಂಬಿಸುವ ಮೂಲಕ ಎಲ್ಲರಿಗೂ ಅಚ್ಚರಿ ಮೂಡಿಸಿದ್ದಾರೆ. ಪ್ರತಿನಿತ್ಯ ಈ ಗುಂಡಿ ಬಿದ್ದರುವ ರಸ್ತೆಯಲ್ಲಿ ಬೈಖ್ ಸವಾರರು ಪ್ರಯಾಣಿಸುವಾಗ ನಿಯಂತ್ರಣ ತಪ್ಪಿ ರಸ್ತೆಯಲ್ಲಿ ಬಿದ್ದು, ಗೋಳಾಡಿದ್ದನ್ನು ಕಣ್ಣಾರೆ ಕಂಡಿರುವ ನಾವು ಲಯನ್ಸ್ ಕ್ಲಬ್ ವತಿಯಿಂದ ಗುಂಡಿಗಳಿಗೆ ಕಂಕರ ಹಾಕುವ ಕೆಲಸ ಆರಂಭಿಸಿದ್ದೇವೆ. ಬುಧವಾರ ಈ ಕೆಲಸ ನಡೆಯಲಿದೆ ಎಂದು ಒ.ಜಿ. ರುದ್ರಗೌಡ ಚಿಟ್ಟಕ್ಕಿ ನಾಗರಾಜ್ ತಿಳಿಸಿದರು.

# ಸ್ವಾತಂತ್ರ್ಯ ಹೋರಾಟಗಾರರ ವಂಶಸ್ಥರಿಗೆ ಮಾಸಿಕ ಗೌರವ ಧನ ನೀಡಲು ಆಗ್ರಹ

ದಾವಣಗೆರೆ, ನ.12- ರಾಜ್ಯದಲ್ಲಿನ ಸ್ವಾತಂತ್ರ್ಯ ಹೋರಾಟಗಾರರ ಮಕ್ಕಳ ಮತ್ತು ಕುಟುಂಬದವರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ, ದಾವಣಗೆರೆ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಮತ್ತು ಉತ್ತರಾಧಿಕಾರಿಗಳ ಕುಟುಂಬಸ್ಥರ ಕ್ಷೇಮಾಭಿವೃದ್ಧಿ ಸಂಘ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ಹೆಚ್.ಆರ್. ಸದಾ ಶಿವಪ್ಪ ಅವರು, ಭಾರತ ದೇಶವನ್ನು ಅಂದು ಬ್ರಿಟಿಷರ ಸಂಕೋಲೆಯಿಂದ ಬಿಡಿಸಿಕೊಳ್ಳಲು ಭಾರತ ಸ್ವಾತಂತ್ರ್ಯ ಹೋರಾಟಗಾರರು ಸಂಕಟದ ಹೋರಾಟ ಮಾಡಿದ್ದಾರೆ. ಅವರಲ್ಲಿನ ದೇಶ ಪ್ರೇಮ, ದೇಶಭಕ್ತಿ, ತ್ಯಾಗ, ಬಲಿದಾನ ಮರೆಯುವಂತಿಲ್ಲ ಎಂದರು.

ಬಿಸಿಲು, ಮಳೆ, ಗಾಳಿ ಎನ್ನದೇ ಕಲ್ಲು-ಮುಳ್ಳುಗಳನ್ನು ಲೆಕ್ಕಿಸದೇ, ಕಾಡು-ಮೇಡುಗಳಲ್ಲಿ ಅಲೆದಾಡಿದ್ದಾರೆ. ಅನೇಕ ವರ್ಷಗಳ ಕಾಲ ಕಠಿಣ ಕಾರಾಗೃಹ ಶಿಕ್ಷೆಯನ್ನು ಸಹ ಅನುಭವಿಸಿದ್ದಾರೆ. ಇಂತಹ ಹೋರಾಟಗಾರರ ಪ್ರಮುಖ ಹನ್ನೆರಡು ಬೇಡಿಕೆಗಳನ್ನು ಈಡೇರಿಸುವಲ್ಲಿ ಪ್ರಧಾನ ಮಂತ್ರಿ, ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು ಮುಂದಾಗುವಂತೆ ಮನವಿ ಮಾಡಿದ ಅವರು, ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಲಿಖಿತ ಮನವಿಯನ್ನು ಸಹ ಸಲ್ಲಿಸುವುದಾಗಿ ತಿಳಿಸಿದರು.

ಸ್ವಾತಂತ್ರ್ಯ ಹೋರಾಟಗಾರರ ವಂಶಸ್ಥರಿಗೆ ಮಾಸಿಕ ಗೌರವ ಧನ ನೀಡಬೇಕು. ಉತ್ತರಾಧಿಕಾರಿ ಪ್ರಮಾಣ ಪತ್ರ ನೀಡಬೇಕು. ಅಸ್ಸಾಂ, ಬಿಹಾರ, ಉತ್ತರ ಪ್ರದೇಶ, ಹರಿಯಾಣ, ಉತ್ತರಾಖಂಡ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಆಯಾ ಪ್ರಾದೇಶಿಕ ಭಾಷೆಯಲ್ಲಿ ಗುರುತಿನ ಚೀಟಿ ನೀಡಲು ಆಯಾ ರಾಜ್ಯ ಸರ್ಕಾರಗಳು ಆದೇಶ ನೀಡಬೇಕು. ಸಾರಿಗೆ ಸಂಸ್ಥೆಗಳ ವಾಹನಗಳಲ್ಲಿ ಪ್ರಯಾಣ ಮಾಡಲು ಆದೇಶ ನೀಡಬೇಕು. ಉಚಿತ ವಿದ್ಯುತ್, ಅಂತ್ಯ ಸಂಸ್ಕಾರಕ್ಕೆ ಸಹಾಯಧನ, ರಾಜ್ಯದ ಎಲ್ಲಾ ಖಾಸಗಿ ವೈದ್ಯಕೀಯ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ಉಪಚಾರ ಕೊಡಿಸಬೇಕು. ವಂಶಸ್ಥರಿಗೆ ಆಯಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಉಚಿತ ನಿವೇಶನ ನೀಡಲು ಆಯಾ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಲು ಮುಂದಾಬೇಕೆಂಬ ಇತರೆ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ವಿಠೋಬರಾವ್, ಎಸ್.ಪಿ. ಸವಿತಾ, ಎಸ್.ವಿ. ಮಂಜುನಾಥ್, ಟಿ.ಆರ್. ಅಕ್ಕಮಹಾದೇವಿ, ಎನ್.ಎಸ್. ಸಿದ್ದೇಶ್ ಮತ್ತಿತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು - ನಾಳೆ ಶ್ರೀ ನಿಮಿಷಾಂಬ ದೇವಿಯ 66ನೇ ವಾರ್ಷಿಕ ಮಹೋತ್ಸವ



ಶಿವಾಜಿ ನಗರದ ಚಿತ್ರಗಾರ ಗಲ್ಲಿಯಲ್ಲಿರುವ ಶ್ರೀ ನಿಮಿಷಾಂಬದೇವಿ ದೇವಸ್ಥಾನದಲ್ಲಿ ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಸಮಾಜ ಹಾಗೂ ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಮಹಿಳಾ ಸಮಾಜದ ವತಿಯಿಂದ ಶ್ರೀ ನಿಮಿಷಾಂಬ ದೇವಿಯ 66ನೇ ವಾರ್ಷಿಕ ಮಹೋತ್ಸವವನ್ನು ಇಂದು ಮತ್ತು ನಾಳೆ ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 7 ರಿಂದ ಗಂಗಾಪೂಜೆ, ವೇದಘೋಷ ಗಳಿಂದ ಮೆರವಣಿಗೆ ಮೂಲಕ ಗಂಗಾ ದೇವಿ ತರುವುದು. ನಂತರ ಶ್ರೀ ದೇವಿಯ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ, ವಿಶೇಷ ಪೂಜೆ ನಡೆಯುವುದು. ಇಂದು ಸಂಜೆ 6.30ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರುಗಳಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಆಗಮಿಸುವರು. ಮುಖ್ಯ ಅತಿಥಿಗಳಾಗಿ ಯಶವಂತರಾವ್ ಜಾಧವ್, ಮೈಸೂರಿನ ಗೋಪಾಲರಾವ್ ದಾಪ್ಟೆ, ಬಾಗಲಕೋಟೆಯ ಶ್ರೀನಿವಾಸ ಪೇಟ್‌ಕರ್ ಉಪಸ್ಥಿತರಿರುವರು.

ಇದೇ ಸಂದರ್ಭದಲ್ಲಿ ಸಾಧಕರಿಗೆ ಸನ್ಮಾನ, ಮಹಿಳೆಯರು ಮತ್ತು ಮಕ್ಕಳಿಂದ ದಾಂಡಿಯಾ ನೃತ್ಯ, ವಿಶೇಷ ಅತಿಥಿಗಳಿಗೆ ಸನ್ಮಾನ ಕಾರ್ಯಕ್ರಮಗಳು ನಡೆಯಲಿವೆ. ಸಮಾಜದ ಅಧ್ಯಕ್ಷ ಗಣೇಶ್‌ರಾವ್ ಡೋಂಗರ್‌ಸೋನೆ, ಕಾರ್ಯದರ್ಶಿ ಪುಂಡಲೀಕ ರಾವ್ ಪೇಟ್‌ಕರ್ ಅಧ್ಯಕ್ಷತೆ ವಹಿಸುವರು.

ನಾಳೆ ಗುರುವಾರ ಬೆಳಗಿನ ಜಾವ 5.30ಕ್ಕೆ ಶ್ರೀದೇವಿಗೆ ಪಂಚಾಮೃತ ಅಭಿಷೇಕ, ಅಲಂಕಾರ, ಮಹಾಪೂಜೆ, ಬೆಳಿಗ್ಗೆ 6.30 ರಿಂದ 7.30ರವರೆಗೆ ಉಪನಯನ, ನಂತರ ಬೆಳಿಗ್ಗೆ 8 ಗಂಟೆಗೆ ದೇವತಾ ಪ್ರಾರ್ಥನೆ, ಮಹಾಸಂಕಲ್ಪ, ಗಣಪತಿ ಪೂಜೆ, ಪುಣ್ಯಾಹ ವಾಚನ, ನಾಂದಿ ದೇವತಾ, ಗಣ ಹೋಮ, ಶ್ರೀ ನವಗ್ರಹ ದೇವತಾ ಮತ್ತು ಪ್ರಧಾನ ದೇವಿ ಶ್ರೀ ನಿಮಿಷಾಂ ದೇವಿಯ ಹೋಮ ಪ್ರಾರಂಭಿಸಲಾಗುವುದು. ಬಲಿ ಹರಣ, ಪೂರ್ಣಾಹುತಿ ಆದ ನಂತರ ಬೆಳಿಗ್ಗೆ 10.30ಕ್ಕೆ ಶ್ರೀ ನಿಮಿಷಾಂಬ ದೇವಿಯ ಉತ್ಸವ ಮೂರ್ತಿಯ ಮೆರವಣಿಗೆ ನಡೆಯಲಿದೆ. ಉತ್ಸವ ಬಂದ ಮೇಲೆ ಅಮ್ಮನವರಿಗೆ ಕುಂಕುಮಾರ್ಚನೆ, ಮಹಾನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಿರುತ್ತದೆ.

## ಸಾರ್ವಜನಿಕರ ತಿಳುವಳಿಕೆಗಾಗಿ

ಡಿ. ಸೈಯದ್ ರಿಯಾಜ್ ಬಿನ್ ಲೇಟ್ ಹೆಚ್. ದಾವೂದ್ ಸಾಬ್, ವಾಸ : # 206, 2ನೇ ಕ್ರಾಸ್, ಕೊಂಡಜ್ಜಿ ರಸ್ತೆ, ಎಸ್.ಎಂ. ಕೃಷ್ಣ ನಗರ, ಇ.ಎಸ್.ಐ. ಆಸ್ಪತ್ರೆ ಹಿಂಭಾಗ, ದಾವಣಗೆರೆ-577 006, ಆದ ನಾನು ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಯರಗುಂಟೆ ಗ್ರಾಮದ ಸರ್ವೇ ನಂ. 9/*/2ಎ4, ವಿಸ್ತೀರ್ಣ 1.01.04.00 ಜಂಟಿ ಖಾತೆಯುಳ್ಳ ಜಮೀನನ್ನು ಇದರ ಮಾಲೀಕರಾದ (1) ಬಸವರಾಜಪ್ಪ ಬಿನ್ ಲೇಟ್ ರಾಮಚಂದ್ರಪ್ಪ (2) ಮಹಾದೇವಪ್ಪ ಬಿನ್ ಲೇಟ್ ರಾಮಚಂದ್ರಪ್ಪ (3) ರೇವಣಸಿದ್ದಪ್ಪ ಬಿನ್ ಲೇಟ್ ರಾಮಚಂದ್ರಪ್ಪ (4) ಮಹಾದೇವಮ್ಮ ಸಿ. ಬಿನ್ ಲೇಟ್ ರಾಮಚಂದ್ರಪ್ಪ (5) ಕುಮಾರ ಬಿ.ಸಿ. ಬಿನ್ ಲೇಟ್ ರಾಮಚಂದ್ರಪ್ಪ, (ಎಲ್ಲರೂ ಜಮೀನಿನ ಜಂಟಿ ಖಾತೆದಾರರು) ಇವರುಗಳಿಂದ ಖರೀದಿಸಲು ಇಚ್ಛಿಸಿದ್ದು, ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾರಿಗಾದರೂ ತಂಟೆ, ತಕರಾರು, ವಗೈರೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 07 ದಿನಗಳ ಒಳಗಾಗಿ ತಮ್ಮ ತಕರಾರನ್ನು ಸೂಕ್ತ ದಾಖಲೆಗಳೊಂದಿಗೆ ನನ್ನನ್ನು ಸಂಪರ್ಕಿಸತಕ್ಕದ್ದು. ತಪ್ಪಿದಲ್ಲಿ ನಾನು ಸದರಿ ಜಮೀನಿನ ಮೇಲೆ ಯಾವುದೇ ತಂಟೆ, ತಕರಾರು ಇರುವುದಿಲ್ಲವೆಂದು ತಿಳಿದು ಸದರಿ ಸೊತ್ತನ್ನು ಖರೀದಿಸುತ್ತೇನೆ. ನನ್ನನ್ನು ಸಂಪರ್ಕಿಸಬೇಕಾದ
**ಮೊ.: 9449235979, 7338336489**

# ಕೋಲ್ಕುಂಟೆಗೆ ಗ್ರಾಮ ಬಸ್ ಸೌಲಭ್ಯಕ್ಕೆ ವಿದ್ಯಾರ್ಥಿನಿಯರಿಂದ ಶಾಸಕರಿಗೆ ಮನವಿ



ದಾವಣಗೆರೆ, ನ. 12- ತಾಲ್ಲೂಕಿನ ಕೋಲ್ಕುಂಟೆ ಗ್ರಾಮಕ್ಕೆ ಬಸ್ ಸೌಲಭ್ಯ ಕಲ್ಪಿಸುವಂತೆ ಕಾಲೇಜು ವಿದ್ಯಾರ್ಥಿನಿಯರು ಮಂಗಳವಾರ ಶಾಸಕ ಕೆ.ಎಸ್. ಬಸವಂತಪ್ಪ ಅವರಿಗೆ ಮನವಿ ಮಾಡಿದರು.

ನಗರದ ಜಯದೇವ ವೃತ್ತದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ ಅವರನ್ನು ಭೇಟಿ ಮಾಡಿದ ವಿದ್ಯಾರ್ಥಿನಿಯರು, ದಾವಣಗೆರೆಯಲ್ಲಿ ಇರುವ ಕಾಲೇಜುಗಳಿಗೆ ಪ್ರತಿನಿತ್ಯ ನೂರಾರು ವಿದ್ಯಾರ್ಥಿಗಳು ಹೋಗುತ್ತೇವೆ, ಬರುತ್ತೇವೆ. ಬಸ್ ಸೌಲಭ್ಯ ಇಲ್ಲದೇ ಆಟೋಗಳಲ್ಲಿ ಬರಬೇಕಾಗಿದೆ. ಸರಿಯಾದ ಸಮಯಕ್ಕೆ ಬಾರದೇ ಪ್ರತಿನಿತ್ಯ ತರಗತಿಗಳನ್ನು ತಪ್ಪಿಸಿಕೊಳ್ಳುತ್ತಿದ್ದೇವೆ. ಆಟೋಗಳಿಗೆ ಪ್ರತಿದಿನ ಹಣ ಕೊಡಲು ನಮ್ಮ ಪೋಷಕರಿಗೆ ಆಗುತ್ತಿಲ್ಲ. ನಮ್ಮ ತಂದೆ-ತಾಯಿಗಳು ಕೂಲಿ ಮಾಡಿ ಓದಿಸುತ್ತಾರೆ ಎಂದು ವಿದ್ಯಾರ್ಥಿನಿಯರು ಶಾಸಕರ ಬಳಿ ತಮ್ಮ ಸಮಸ್ಯೆಗಳನ್ನು ಹೇಳಿದರು.

ವಿದ್ಯಾರ್ಥಿನಿಯರ ಸಮಸ್ಯೆಗೆ ಸ್ಪಂದಿಸಿದ ಶಾಸಕ ಬಸವಂತಪ್ಪ, ಕೂಡಲೇ ಸಂಬಂಧಿಸಿದ ಅಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿ ಕೋಲ್ಕುಂಟೆ ಗ್ರಾಮಕ್ಕೆ ಬಸ್ ಸೌಲಭ್ಯ ಒದಗಿಸಿ, ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಬೇಕೆಂದು ಸೂಚನೆ ನೀಡಿದರು. ಈ ವೇಳೆ ವಿದ್ಯಾರ್ಥಿಗಳು ಸಂತಸ ವ್ಯಕ್ತ ಪಡಿಸಿ, ಶಾಸಕರಿಗೆ ಅಭಿನಂದನೆ ಸಲ್ಲಿಸಿದರು.

# ನಗರದಲ್ಲಿ ನಾಳೆ ವೀರಪ್ಪ ಭಾವಿ ಅವರಿಗೆ ನುಡಿ ನಮನ ಕಾರ್ಯಕ್ರಮ



**ಕೋಡಿ ಮಠದ ಶ್ರೀಗಳು, ಹಾಲಕೆರೆ ಸಂಸ್ಥಾನ ಮಠದ ಶ್ರೀಗಳ ಸಾನ್ನಿಧ್ಯ**

ದಾವಣಗೆರೆ, ನ.12 - ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ನಿಕಟಪೂರ್ವ ಅಧ್ಯಕ್ಷರೂ ಆಗಿರುವ 'ಇಂದಿನ ಸುದ್ದಿ' ಸಂಪಾದಕ ವೀರಪ್ಪ ಎಂ. ಭಾವಿ ಅವರಿಗೆ ನುಡಿ ನಮನ ಅರ್ಪಿಸುವ ಕಾರ್ಯಕ್ರಮವು ನಾಡಿದ್ದು ದಿನಾಂಕ 14ರ ಗುರುವಾರ ಬೆಳಿಗ್ಗೆ 11.30ಕ್ಕೆ ನಗರದ ಶ್ರೀ ಹಾಲಕೆರೆ ಅನ್ನದಾನೇಶ್ವರ ಮಠದಲ್ಲಿ ನಡೆಯಲಿದೆ.

ಹಾರನಹಳ್ಳಿ ಕೋಡಿ ಮಠದ ಶ್ರೀ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮೀಜಿ, ಹಾಲಕೆರೆ ಸಂಸ್ಥಾನ ಮಠದ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸುವರು.

ಹಿರಿಯ ಕೈಗಾರಿಕೋದ್ಯಮಿ ಡಾ. ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸಲಿದ್ದು, ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿಸೋಜಾ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ, ನಗರವಾಣಿ ಉಪ ಸಂಪಾದಕ ಬಿ.ಎನ್. ಮಲ್ಲೇಶ್, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಜಿಲ್ಲಾ ಘಟಕ ಮತ್ತು 'ಇಂದಿನ ಸುದ್ದಿ' ಪತ್ರಿಕಾ ಬಳಗ ಇವರ ಜಂಟಿ ಆಶ್ರಯದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿದೆ.

## ಮಾನ್ಯ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ, ದಾವಣಗೆರೆ.

**ಭೂ ಸ ನಿ ಅಪೀಲು ನಂ : 815/23-24**

ಅಪೀಲುದಾರರು : ಮಹಾಂತೇಶ್ ಜೆ.ಆರ್. ಮತ್ತು ಇನ್ನೊಬ್ಬರು (ಕುಂದವಾಡ ಗ್ರಾಮದ ಸರ್ವೆ ನಂ. 127) ವಿರುದ್ಧ ಎದುರುದಾರರು : ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದಾವಣಗೆರೆ ಮತ್ತು ಇತರರು

**ಸಾರ್ವಜನಿಕ ಪ್ರಕಟಣೆಗಾಗಿ**

ಮೇಲ್ಕಂಡ ಅಪೀಲುದಾರರು ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕುಂದುವಾಡ ಗ್ರಾಮದ ರಿ.ಸ.ನಂ. 127 ರಲ್ಲಿ ಮಾಡಿರುವ ದೋಷಯುಕ್ತ ಹಿಸ್ಸಾ ಪೋಡುಗಳಾದ ರಿ.ಸ.ನಂ : 127/1 ರಿಂದ 20 ಮತ್ತು 21 ಎಂದು ಮಾಡಿರುವಂತಹ ಎಲ್ಲಾ ಹಿಸ್ಸಾ ಪೋಡುಗಳನ್ನು ರದ್ದುಪಡಿಸಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನ ಎದುರುದಾರರಾದ ಕ್ರಮವಾಗಿ ಶ್ರೀ / ಶ್ರೀಮತಿ

1. ಮಾಳಮ್ಮ ಬಿನ್ ಲೇಟ್ ನೀಲಪ್ಪ 2. ಲಕ್ಷ್ಮಮ್ಮ ಬಿನ್ ಲೇಟ್ ನೀಲಪ್ಪ 3. ಗೌರಮ್ಮ ಬಿನ್ ಲೇಟ್ ನೀಲಪ್ಪ 4. ಜಯಮ್ಮ ಬಿನ್ ಲೇಟ್ ನೀಲಪ್ಪ 5. ರತ್ನಮ್ಮ ಬಿನ್ ಲೇಟ್ ನೀಲಪ್ಪ 6. ವಿರುಪಾಕ್ಷಪ್ಪ ಬಿನ್ ಲೇಟ್ ನೀಲಪ್ಪ 7. ಲಲಿತಮ್ಮ ಬಿನ್ ಲೇಟ್ ನೀಲಪ್ಪ 8. ಶಿವರಾಜ ಜೆ. ಬಿನ್ ಲೇಟ್ ನೀಲಪ್ಪ 9. ಮಾರುತಿ ಜೆ. ಬಿನ್ ಲೇಟ್ ನೀಲಪ್ಪ 10. ಪೂರ್ಣಿಮ ಬಿನ್ ಲೇಟ್ ನೀಲಪ್ಪ (2 ರಿಂದ 11 ನೇ ಎದುರುದಾರರು ಜಂಟಿ) 11. ಚಂದ್ರಪ್ಪ ಬಿನ್ ಲೇಟ್ ಹನುಮಂತಪ್ಪ 12. ಜಿ.ಎನ್. ಕೃಷ್ಣಪ್ಪ ಬಿನ್ ಲೇಟ್ ನಿಂಗಪ್ಪ 13. ರಾಮಪ್ಪ ಬಿನ್ ಲೇಟ್ ಗುಡ್ಡಪ್ಪ 14. ಬಸಮ್ಮ ಕೋಂ ಲೇಟ್ ಶಿವಾನಂದಪ್ಪ 15. ರೇಣುಕಮ್ಮ ಬಿನ್ ಲೇಟ್ ಶಿವಾನಂದಪ್ಪ 16. ರುದ್ರಮ್ಮ ಬಿನ್ ಲೇಟ್ ಶಿವಾನಂದಪ್ಪ 17. ಸಾಕಮ್ಮ ಬಿನ್ ಲೇಟ್ ಶಿವಾನಂದಪ್ಪ 18. ವಸಂತಮ್ಮ ಬಿನ್ ಲೇಟ್ ಶಿವಾನಂದಪ್ಪ 19. ಜುಂಜಿ ನಾಗರಾಜಪ್ಪ ಬಿನ್ ಲೇಟ್ ಹನುಮಂತಪ್ಪ 20. ಚಮನ್ ಸಾಬ್ ಬುಡ್ಡಮ್ಮನಬರ್ ಬಿನ್ ಲೇಟ್ ಪೀರ್ ಸಾಬ್ 21. ಕೆ. ಪ್ರಕಾಶ್ ಬಿನ್ ಕಾಳಾಚಾರ್ ಎನ್. 22. ಅಂಬಿಕಾ ಪಿ ಕೋಂ ಪ್ರಕಾಶ ಕೆ. 23. ಲಾವಣ್ಯ ಎಸ್. ಕೋಂ ಹನುಮಂತಚಾರಿ ಬಿ. 24. ಹನುಮಂತಚಾರಿ ಕೆ.ವಿ. ಬಿನ್ ಬ್ರಹ್ಮಚಾರ್ ಎ. 25. ಚಂದನ ಕೆ.ಎಸ್. ಬಿನ್ ಶ್ರೀನಿವಾಸಚಾರಿ ಕೆ.ವಿ. 26. ಎಸ್. ಪ್ರಜ್ವಲ್ ಗಣೇಶ್ ಬಿನ್ ಸುಬ್ರಹ್ಮಣ್ಯಚಾರ್ ವೈ. 27. ಎಸ್.ಎನ್. ಶಿವಶಂಕರ್ ಬಿನ್ ಲೇಟ್ ಎಸ್. ನೀಲಕಂಠಪ್ಪ 28. ವೆಂಕಟೇಶ್ ಹೆಚ್. ಬಿನ್ ಉಪ್ಪಾರ ಹಾಲಪ್ಪ 29. ಮಾರುತಿ ಗುಡಿಯವರ ಬಿನ್ ಹನುಮಂತಪ್ಪ 30. ಧೃತಿ ಮೈ ಗಾ ತಂದೆ ಮಾರುತಿ ಗುಡಿಯವರ 31. ಮಮತ ಎನ್ ಕೋಂ ಪ್ರಶಾಂತ ಡಿ. 32. ಲಕ್ಷ್ಮಮ್ಮ ಕೋಂ ಹನುಮಂತಪ್ಪ 33. ಹನುಮಂತಪ್ಪ ಬಿನ್ ನಿಂಗಪ್ಪ ಚಿಕ್ಕವ್ವರ ವಾಸ : ಕುಂದವಾಡ ಗ್ರಾಮ ಮತ್ತು ಅಂಚೆ ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು.

ಎದುರುದಾರರಾದ ರವರಿಗೆ ಹಳೇ ಕುಂದುವಾಡ ಗ್ರಾಮದ ವಾಸಿಗಳಾದ ಇವರಾಗಲೀ, ಇವರ ಹಿತಾಸಕ್ತಿ ಪಕ್ಷಗಾರರು ಸದರಿ ದಿನಾಂಕ : 21.11.2024 ರಂದು ಮಧ್ಯಾಹ್ನ 3 ಗಂಟೆಗೆ ನಿಗಧಿಪಡಿಸಿದ್ದು, ಮಾನ್ಯ ನ್ಯಾಯಾಲಯಕ್ಕೆ ಸ್ವತಃ ತಾವಾಗಲೀ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಲು ತಿಳಿಸಿದೆ. ತಪ್ಪಿದ್ದಲ್ಲಿ ನಿಮ್ಮಗಳ ವಿರುದ್ಧ ಏಕಪಕ್ಷೀಯವಾಗಿ ಮಾನ್ಯ ನ್ಯಾಯಾಲಯವು ಪ್ರಕರಣವನ್ನು ತೀರ್ಮಾನಿಸಲಾಗುತ್ತದೆ. ನ್ಯಾಯಾಲಯದ ಮೊಹರಿನೊಂದಿಗೆ 5.11.2024 ರಂದು ಸದರಿ ನೋಟೀಸನ್ನು ಹೊರಡಿಸಲಾಗಿದೆ.

**ಮಹಾಂತೇಶ್ ಜೆ.ಆರ್.**
ಮೇಲ್ಮನವಿದಾರರು

ಭೂ ದಾಖಲೆಗಳ ಉಪ ನಿರ್ದೇಶಕರು
ದಾವಣಗೆರೆ ಜಿಲ್ಲೆ

# ವಕ್ಫ್‌ನಿಂದ ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘನೆ

## ತುಷ್ಟೀಕರಣಕ್ಕಾಗಿ ದಾಖಲೆ ಇಲ್ಲದೇ ವಕ್ಫ್‌ಗೆ ಆಸ್ತಿಗಳ ಸೇರ್ಪಡೆ ಎಂದು ಪ್ರಹ್ಲಾದ್ ಜೋಶಿ ತರಾಟೆ

ದಾವಣಗೆರೆ, ನ. 12 – ವಕ್ಫ್ ಆಸ್ತಿ ವಶಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್ ಹೊರಡಿಸಿರುವ ಆದೇಶಗಳನ್ನು ರಾಜ್ಯ ಸರ್ಕಾರ ಉಲ್ಲಂಘಿಸುತ್ತಿದೆ. ಕಾಂಗ್ರೆಸ್ ಪಕ್ಷ ಅಧಿಕಾರ ದಾಹಕ್ಕಾಗಿ ಸಂಪತ್ತಿನ ಅಸಮತೋಲನ ತರುವ ಮೂಲಕ ದೇಶಕ್ಕೆ ಗಂಭೀರ ಬೆದರಿಕೆ ತರಲು ಮುಂದಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರಾಟ ಪತ್ರ ಇಲ್ಲವೇ ಉಡುಗೊರೆ ರೀತಿಯ ದಾಖಲೆಗಳ ಆಧಾರ ಇಲ್ಲದೇ ವಕ್ಫ್ ಆಸ್ತಿಗಳನ್ನು ಪಡೆಯುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಆದೇಶವಿದೆ. ಅದೇ ರೀತಿ, ನೋಟಿಸ್ ಕಳಿಸದೇ ಯಾವುದೇ ಆಸ್ತಿ ದಾಖಲೆಗಳಲ್ಲಿ ವಕ್ಫ್ ತನ್ನ ಹೆಸರು ಸೇರಿಸುವಂತಿಲ್ಲ ಎಂದು ಹೈಕೋರ್ಟ್ ತಿಳಿಸಿದೆ. ಇಷ್ಟಾದರೂ ರಾಜ್ಯ ಕಾಂಗ್ರೆಸ್ ಸರ್ಕಾರ ತುಷ್ಟೀಕರಣದಿಂದ ಆಸ್ತಿಗಳನ್ನು ವಕ್ಫ್‌ಗೆ ಸೇರ್ಪಡೆ ಮಾಡುತ್ತಿದೆ ಎಂದು ಟೀಕಿಸಿದರು.

ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದ ನೋಟಿಸ್‌ಗಳು ಹಾಗೂ ಮ್ಯುಟೇಷನ್‌ಗಳನ್ನು ತಡೆಯಲು ಕಳೆದ ನವೆಂಬರ್ 9ರಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ ಕೇವಲ ಕಣ್ಣೊರೆಸುವ ತಂತ್ರವಾಗಿದೆ. ಈಗಾಗಲೇ ಆಸ್ತಿ ಆರ್.ಟಿ.ಸಿ.ಗಳಲ್ಲಿ ವಕ್ಫ್ ಎಂದು ಸೇರಿಸಿದ್ದರೆ, ಅದರ ಗತಿ ಏನು ಎಂಬುದನ್ನು ಸ್ಪಷ್ಟಪಡಿಸಿಲ್ಲ. ಆರ್.ಟಿ.ಸಿ.ಗಳಲ್ಲಿ ವಕ್ಫ್ ಎಂದು ನಮೂದಾಗಿರುವ ಪ್ರಕರಣಗಳಿಗೆ ಸರ್ಕಾರದ ಆದೇಶ ಅನ್ವಯವಾಗುವುದಿಲ್ಲ. ಮತ್ತೆ ನೋಟಿಸ್ ಕಳಿಸುವುದಿಲ್ಲ ಎಂಬ ಸ್ಪಷ್ಟನೆಯೂ ಇಲ್ಲ ಎಂದು ಸಚಿವ ಜೋಶಿ ಹೇಳಿದರು.

ಮತಾಂಧ ಸಚಿವ ಜಮೀರ್ ಅಹಮದ್ ಖಾನ್ ಅವರು ರಾಜ್ಯಾದ್ಯಂತ ವಕ್ಫ್ ಆಂದೋಲನ ನಡೆಸಿ, ಈಗಾಗಲೇ ಆಸ್ತಿ ದಾಖಲೆಗಳಲ್ಲಿ ವಕ್ಫ್ ಎಂದು ಸೇರ್ಪಡೆ ಮಾಡಿದ್ದಾರೆ ಎಂದು ಆರೋಪಿಸಿದರು.

ಹಾನಗಲ್ ತಾಲ್ಲೂಕಿನ ಹರಣಗಿ ಗ್ರಾಮದಲ್ಲಿ ವಕ್ಫ್ ಹಾವಳಿಗೆ ಸಿಲುಕಿ ರೈತರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಗಮನ ಸೆಳೆದ ಸಂಸದ ತೇಜಸ್ವಿ ಸೂರ್ಯ ಹಾಗೂ ಮಾಧ್ಯಮಗಳ ವಿರುದ್ಧವೇ ಸರ್ಕಾರ ಪ್ರಕರಣ ದಾಖಲಿಸಿದೆ. ಸರ್ಕಾರ ನಿರ್ಲಜ್ಜ, ಮತಿಗೆಟ್ಟ ಹಾಗೂ ಭ್ರಷ್ಟವಾಗಿದೆ ಎಂದು ತರಾಟೆಗೆ ತೆಗೆದುಕೊಂಡರು.

ಕಾಂಗ್ರೆಸ್ ಅವಸರದಿಂದ ಅಧಿಕಾರ ಹಿಡಿಯುವ ಸಲುವಾಗಿ ದೇಶವನ್ನು ಒಡೆದಿತ್ತು. 370ನೇ ವಿಧಿ ಜಾರಿಗೆ ತಂದ ಕಾರಣಕ್ಕಾಗಿ ಜಮ್ಮು ಮತ್ತು ಕಾಶ್ಮೀರ ಭಯೋತ್ಪಾದಕರಿಗೆ ಆಶ್ರಯ ತಾಣವಾಗಿತ್ತು. ನಂತರ 2013ರಲ್ಲಿ ವಕ್ಫ್ ಕಾನೂನು ತರುವ ಮೂಲಕ ದೇಶದ ಸಂಪತ್ತನ್ನು ವಕ್ಫ್‌ಗೆ ಕೊಡಲಾಗುತ್ತಿದೆ. ಇದರಿಂದ ಸಂಪತ್ತು ಹಂಚಿಕೆ ಅಸಮತೋಲನವಾಗಿ ದೇಶದ ಭದ್ರತೆಗೆ ಗಂಭೀರ ಬೆದರಿಕೆ ಎದುರಾಗುವ ಸಾಧ್ಯತೆಯೂ ಇದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ, ಪರಿಷತ್ ಸದಸ್ಯರಾದ ಎನ್.ರವಿಕುಮಾರ್, ಕೆ.ಎಸ್. ನವೀನ್, ಮಾಜಿ ಶಾಸಕ ಎಸ್.ವಿ. ರಾಮಚಂದ್ರ, ಮುಖಂಡರಾದ ಗಾಯತ್ರಿ ಸಿದ್ದೇಶ್ವರ್, ಜಿ.ಎಸ್. ಅನಿತ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

### ನಿಮ್ಮ ಡೀಲರ್‌ಗಳಿಂದಲೇ 700 ಕೋಟಿ ರೂ. ಆರೋಪ

ಅಬಕಾರಿ ಇಲಾಖೆಯಲ್ಲಿ 700 ಕೋಟಿ ರೂ. ಲೂಟಿ ನಡೆದಿದೆ ಎಂಬ ಆರೋಪ ಸಾಬೀತು ಪಡಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ. ಆದರೆ, ಈ ಆರೋಪ ಮಾಡಿರುವುದು ಸಿದ್ದರಾಮಯ್ಯ ಸರ್ಕಾರದಿಂದಲೇ ನೇಮಿಸಿರುವ ಡೀಲರ್‌ಗಳಾಗಿದ್ದಾರೆ. ಇಷ್ಟಾದರೂ ಆರೋಪಕ್ಕೆ ಸಾಕ್ಷಿ ಕೇಳುವುದು ಭಂಡತನ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದರು.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಪ್ರಭಾವ ಇಲ್ಲದೇ ನಿವೇಶನ ವಿತರಣೆ ಸಾಧ್ಯವಿಲ್ಲ ಎಂದು ಹೈಕೋರ್ಟ್ ಟಿಪ್ಪಣಿ ಮಾಡಿದೆ. ಇಷ್ಟಾದರೂ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟಿಲ್ಲ. ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಭ್ರಷ್ಟಾಚಾರ, ಭಂಡತನ ಹಾಗೂ ತುಷ್ಟೀಕರಣಗಳೇ ಲಾಂಛನಗಳಂತಾಗಿವೆ ಎಂದು ಛೇಡಿಸಿದರು.

### ಜಿ.ಎಂ. ಸಿದ್ದೇಶ್ವರ ಕಾಲೇಜನ್ನು ವಕ್ಫ್ ತನ್ನದೆನಬಹುದೇ ?

ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ ಅವರ ಕಾಲೇಜನ್ನು ವಕ್ಫ್ ತನ್ನದು ಎಂದು ಹೇಳಬಹುದೇ? ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಪ್ರಶ್ನಿಸಿದ್ದಾರೆ.

ಯಾವುದೇ ದಾಖಲೆ ಇಲ್ಲದೇ ಈ ರೀತಿ ಆಸ್ತಿಗಳನ್ನು ತನ್ನದು ಎನ್ನುವುದು ಹಾಸ್ಯಾಸ್ಪದ. ಅದೇ ರೀತಿ ಯಾವುದೇ ದಾಖಲೆ ಇಲ್ಲದೇ ಕೇವಲ ಗೆಜೆಟ್ ಪ್ರಕಟಣೆ ಕಾರಣದಿಂದ ಆಸ್ತಿಗಳನ್ನು ವಕ್ಫ್‌ಗೆ ಸೇರಿಸಲಾಗದು. ಮೊದಲು ದಾಖಲೆ ತೋರಿಸಿ ಆಸ್ತಿ ತನ್ನದು ಎಂದು ಹೇಳಬಹುದೇ ವಿನಹ, ಆಸ್ತಿಗಳನ್ನು ವಶಕ್ಕೆ ತೆಗೆದುಕೊಂಡು ನಂತರ ದಾಖಲೆ ತೋರಿಸುತ್ತೇನೆ ಎನ್ನಲಾಗದು ಎಂದು ಜೋಶಿ ಹೇಳಿದರು.

ಯಾವುದೇ ದಾಖಲೆಗಳನ್ನೇ ಆಗಲೀ ಮೊದಲು ಪರಿಶೀಲಿಸಬೇಕು. ನಂತರ ವಿಚಾರಣೆ ಮಾಡಬೇಕು. ಆನಂತರವೇ ವಕ್ಫ್ ಆಸ್ತಿ ಬಗ್ಗೆ ನಿರ್ಧರಿಸಬೇಕು. ತಾತ – ಮುತ್ತಾತರ ಕಾಲದಿಂದ ಬಂದಿರುವ ಆಸ್ತಿಗಳನ್ನು ವಕ್ಫ್ ತನ್ನದು ಎಂದು ಹೇಳಲಾಗದು ಎಂದು ಸಚಿವರು ತಿಳಿಸಿದರು.

# ದುಡಿಮೆಯ ಸ್ವಲ್ಪ ಭಾಗವನ್ನು ಸಮಾಜದ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕು



### ಜಿಲ್ಲಾ ಆರ್ಯ ಈಡಿಗರ ಸಂಘದ ಪ್ರತಿಭಾ ಪುರಸ್ಕಾರದಲ್ಲಿ ಶ್ರೀ ಆರ್ಯ ರೇಣುಕಾನಂದ ಸ್ವಾಮೀಜಿ ಆಶಯ

ದಾವಣಗೆರೆ, ನ.12- ಸಮಾಜದಿಂದ ಸಹಾಯ ಪಡೆದ ವಿದ್ಯಾರ್ಥಿಗಳು ತಾವು ತಮ್ಮ ವ್ಯಾಸಂಗ ಮುಗಿಸಿ, ಗಳಿಸುವ ಸಮಯದಲ್ಲಿ ತಾವು ಸಹಾಯ ಪಡೆದ ಸಮಾಜವನ್ನು ಮರೆಯಬಾರದು ಮತ್ತು ತಮ್ಮ ದುಡಿಮೆಯ ಸ್ವಲ್ಪ ಭಾಗವನ್ನು ಸಮಾಜದ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕು ಹಾಗೂ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ಮೂಲಕ ಉತ್ತಮ ಪ್ರಜೆಗಳಾಗಿ ರೂಪಿಸಬೇಕೆಂದು ಶ್ರೀ ಆರ್ಯ ರೇಣುಕಾನಂದ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ಜಿಲ್ಲಾ ಆರ್ಯ ಈಡಿಗರ ಸಂಘ ಮತ್ತು ಶ್ರೀ ರೇಣುಕಾಂಬ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಇವರುಗಳ ಸಂಯುಕ್ತಾಶ್ರಯದಲ್ಲಿ ಆರ್ಯ ಈಡಿಗ ಹಾಸ್ಟೆಲ್ ಆವರಣದಲ್ಲಿ ಇಂದು ಏರ್ಪಾಡಾಗಿದ್ದ 2023 - 24 ನೇ ಸಾಲಿನ ವಿವಿಧ ತರಗತಿಗಳಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಪಾಸಾದ 45 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಕಾರ್ಯಕ್ರಮದಲ್ಲಿ ಶ್ರೀಗಳು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಆರ್ಯ ಈಡಿಗರ ಸಂಘಕ್ಕೆ ಖರ್ಚಿನ ಹೊರೆಯಾಗಬಾರದೆಂದು ಪೋಷಕರೇ ದೇಣಿಗೆ ನೀಡಿ ಮಕ್ಕಳಿಗೆ ಪ್ರತಿಭಾ ವೇತನ ನೀಡುವ ಕಾರ್ಯಕ್ರಮ ನಡೆಸುತ್ತಿರುವುದು ಅತ್ಯಂತ ಸ್ತುತ್ಯಾರ್ಹ ಕಾರ್ಯ ಎಂದರು.

ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಹೆಚ್. ಶಂಕರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ಶಾಂತರಾಮ್, ರವೀಂದ್ರ ಬಾಬು, ಕಾರ್ಯದರ್ಶಿ ಎ. ನಾಗರಾಜ್, ಖಜಾಂಚಿ ಈ. ದೇವೇಂದ್ರಪ್ಪ, ಸಹ ಕಾರ್ಯದರ್ಶಿ ಎಸ್. ಭರಮಪ್ಪ, ರೇಣುಕಾಂಬ ಕ್ರೆಡಿಟ್ ಕೋ-ಆಪ್. ಸೊಸೈಟಿ ಅಧ್ಯಕ್ಷರಾದ ಶ್ರೀಮತಿ ಸುಮಾ ಭರಮಪ್ಪ ರಾಮದಾಸ್, ಈ. ರಾಜಣ್ಣ, ವೈ. ಕೃಷ್ಣಮೂರ್ತಿ, ಗೋವಿಂದರಾಜ್, ಜಯಪ್ರಕಾಶ್, ಎಸ್. ಮಂಜಪ್ಪ, ಮಹಾಬಲೇಶ್ವರ, ಗವಿ ಸಿದ್ದೇಶ್ವರ್, ಟಿ.ಟಿ. ರಘು, ಗಂಗಾಧರ್, ಈ. ಲಕ್ಷ್ಮಣ, ಓಂಕಾರ ಮೂರ್ತಿ, ಬಾಲರಾಜ್, ಲೋಕಣ್ಣ, ನಾಗರಾಜ್ ಬಾಬು, ಪರಶುರಾಮಪ್ಪ, ಟಿ. ಮಹಂತೇಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಬ್ಯಾಡಗಿಯಲ್ಲಿ ಇಂದಿನಿಂದ ಕೊಪ್ಪಳ ಗವಿಸಿದ್ದೇಶ್ವರ ಶ್ರೀಗಳ ಪ್ರವಚನ



ಬ್ಯಾಡಗಿ ಪಟ್ಟಣದ ಎಸ್‌ಜೆಜೆಎಂ ತಾಲ್ಲೂಕು ಕ್ರೀಡಾಂಗಣದಲ್ಲಿ ಕೊಪ್ಪಳ ಗವಿಸಿದ್ದೇಶ್ವರ ಶ್ರೀಗಳ ಅಧ್ಯಾತ್ಮ ಪ್ರವಚನ ಇಂದಿನಿಂದ 12 ದಿನಗಳ ಕಾಲ ಪ್ರತಿದಿನ ಸಂಜೆ 6 ರಿಂದ 7 ರವರೆಗೆ ನಡೆಯಲಿದೆ.

ಜನರಲ್ಲಿ ಧಾರ್ಮಿಕ ಜಾಗೃತಿ ಮೂಡಿಸಲು ಪ್ರತಿದಿನ ಬೆಳಿಗ್ಗೆ 6.30 ರಿಂದ ಸದ್ಭಾವನಾ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ನಾಳೆ ಗುರುವಾರ ಪಟ್ಟಣದ ರಟ್ಟಿಹಳ್ಳಿ ರಸ್ತೆಯ ಚಂದ್ರಗುತ್ತೆಮ್ಮ ದೇವಸ್ಥಾನದಿಂದ ಉದ್ಘಾಟನೆಯಾಗಲಿದೆ. ದಿನಾಂಕ 15 ಬಸವೇಶ್ವರ ನಗರ, 16 ರಂದು ಸ್ವಾತಂತ್ರ್ಯ ಯೋಧರ ಭವನ, 17ರಂದು ವಿದ್ಯಾನಗರದ ಪಂಚಲಿಂಗೇಶ್ವರ ದೇವಸ್ಥಾನ ಹಾಗೂ 18 ರಂದು ಕಲ್ಲೇದೇವರು, 19ರಂದು ಮಲ್ಲೂರು, 20ರಂದು ಬಿಸಲಳ್ಳಿ, 21ರಂದು ಬುಡಪನಹಳ್ಳಿ 23ರಂದು ಕದರಮುಂಡಲಗಿ, 24 ರಂದು ಶಿಡೇನೂರ ಗ್ರಾಮಗಳಲ್ಲಿ ಶ್ರೀಗಳಿಂದ ಸದ್ಭಾವನಾ ಪಾದಯಾತ್ರೆ ನಡೆಯಲಿದೆ.

# 15 ರಂದು ತುಳಜಾ ಭವಾನಿ ದೇವಸ್ಥಾನದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ



ದಾವಣಗೆರೆ, ನ.12- ಇದೇ ದಿನಾಂಕ 15 ರ ಶುಕ್ರವಾರ ಸ್ಥಳೀಯ ಕೆಟಿಜೆ ನಗರದ 12 ಮತ್ತು 13ನೇ ಕ್ರಾಸ್‌ನ ತುಳಜಾ ಭವಾನಿ ದೇವಸ್ಥಾನದಲ್ಲಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಹಮ್ಮಿಕೊಳ್ಳಲಾಗಿದೆ.

ಸಾಮೂಹಿಕ ಪೂಜೆಯಲ್ಲಿ ಭಾಗವಹಿಸಲಿಚ್ಛಿಸುವ ಭಕ್ತಾದಿಗಳು ಪುರೋಹಿತರ ಬಳಿ ಹೆಸರು ನೋಂದಾಯಿಸುವಂತೆ ದೇವಸ್ಥಾನ ಸಮಿತಿ ಕೋರಿದೆ.

# ನಗರದ ರೈಲ್ವೆ ನಿಲ್ದಾಣದಲ್ಲಿ ಜನ ಔಷಧಿ ಕೇಂದ್ರ

ರೈಲ್ವೆ ನಿಲ್ದಾಣದ ಆವರಣದಲ್ಲಿ ಪ್ರಧಾನ ಮಂತ್ರಿ ಭಾರತೀಯ ಜನ ಔಷಧಿ ಕೇಂದ್ರವನ್ನು ಇಂದು ಬೆಳಿಗ್ಗೆ 9.30ಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಲಿದ್ದಾರೆ.

# ಹರಿಹರ ತಾ. ಸರ್ಕಾರಿ ನೌಕರರ ಸಂಘಕ್ಕೆ ಆಯ್ಕೆ



ಹರಿಹರ, ನ. 12- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಶಾಖೆಯ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ವಿಜಯ ಮಹಾಂತೇಶ್ ಅಧ್ಯಕ್ಷ ಸ್ಥಾನಕ್ಕೆ, ಎಂ. ಉಮ್ಮಣ್ಣ ರಾಜ್ಯ ಪರಿಷತ್ ಸ್ಥಾನಕ್ಕೆ ಹಾಗೂ ಎಂ. ಗಿರೀಶ್ ಖಜಾಂಚಿ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ ಎಂದು ಚುನಾವಣಾಧಿಕಾರಿ ಬಿ.ಬಿ. ರೇವಣನಾಯ್ಕ ತಿಳಿಸಿದ್ದಾರೆ.

# ಹರಿಹರದಲ್ಲಿ ದೂಡ ಶಾಖಾ ಕಚೇರಿ: ಸದ್ಬಳಕೆಗೆ ದಿನೇಶ್ ಕೆ. ಶೆಟ್ಟಿ ಕರೆ



ಹರಿಹರ, ನ.12- ನಗರದಲ್ಲಿ ದೂಡಾ ಶಾಖಾ ಕಚೇರಿ ಆರಂಭಿಸಬೇಕೆಂಬ 36 ವರ್ಷಗ ಬೇಡಿಕೆ ಈಗ ಈಡೇರಿದೆ ಎಂದು ದೂಡ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಹೇಳಿದರು.

ನಗರಸಭೆ ಆವರಣದಲ್ಲಿ ಸೋಮವಾರ ಅವರು ದೂಡ ಶಾಖಾ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಜಿಲ್ಲೆಯ 45 ಹಳ್ಳಿಗಳು ಸೇರುತ್ತವೆ. ಹರಿಹರ ನಗರ ವ್ಯಾಪ್ತಿಯಲ್ಲಿ 17 ಹಳ್ಳಿಗಳನ್ನು ಒಳಗೊಂಡಿದೆ. ಹರಿಹರ ನಗರದ ಜನತೆ ಶಾಖಾ ಕಚೇರಿಯ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

# ಗ್ರಾಮೀಣ ಪ್ರದೇಶದಲ್ಲಿಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ತಾಲ್ಲೂಕಿನ ಅತ್ತಿಗೆರೆ, ಕುರ್ಕಿ, ಬಾಡ, ಕಬ್ಬೂರು, ಹಿರೇತೊಗಲೇರಿ, ಗೋಪನಾಳು, ಕಂದಗಲ್, ರಾಮಗೊಂಡನಹಳ್ಳಿ, ಕಾಶೀಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.







KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas